ಜನವರಿ 2022

₹ 15/-

# ಯುಗರಶ್ಮಿ

ತ್ರೈಮಾಸಿಕ



- ಸಾಮಾಜಿಕ ಶಾಂತಿ
- ದೈವಾಸ್ತಿತ್ವದ ಸಾಕ್ಷ್ಯಗಳು
- ಜಿಹಾದ್ ಎಂದರೇನು?
- ಭಾರತದ ಪ್ರವಾದಿಗಳು
- ನೀನು ಮಾಡು – ಮಾಡಬೇಡ

"ಯಾವನಾದರೂ ಒಂದು ಕೆಡುಕನ್ನು ಮಾಡಿ ಅಥವಾ ತನ್ನ ಆತ್ಮದೊಡನೆ ದ್ರೋಹವನ್ನೆಸಗಿ ಅಲ್ಲಾಹನೊಡನೆ ಪಾಪ ಮುಕ್ತಿಗಾಗಿ ಪ್ರಾರ್ಥಿಸಿದರೆ, ಅವನು ಅಲ್ಲಾಹನನ್ನು ಅತ್ಯಂತ ಕ್ಷಮಿಸುವವನಾಗಿಯೂ ಕಾರುಣ್ಯನಿಧಿಯಾಗಿಯೂ ಕಾಣುವನು."

– ಪವಿತ್ರ ಖುರ್‌ಆನ್ (4:111)

ವಿಷಯ ಸೂಚಿಕೆ — ಪುಟ


* ದೇವ ಕಾರುಣ್ಯ 1
* ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
* ಸಾಮಾಜಿಕ ಶಾಂತಿ 3
* ದೈವಾಸ್ತಿತ್ವದ ಸಾಕ್ಷ್ಯಗಳು 8
* ಜಿಹಾದ್ ಎಂದರೇನು? 13
* ಭಾರತದ ಪ್ರವಾದಿಗಳು 21
* ಕವನ : ಕರೆಯೋಲೆ ಇಲ್ಲದೆ ಬರುವ ಅತಿಥಿ 23
* ನೀನು ಮಾಡು – ಮಾಡಬೇಡ 24
* ಖಲೀಫತುಲ್ ಮಸೀಹರ ಹೊಸ ವರ್ಷ ಸಂದೇಶ 27
* ಅಹ್ಮದಿಯಾ ವಾರ್ತೆ : ಮಜ್ಲಿಸ್ ಅನ್ಸಾರುಲ್ಲಾಹ್ ದ್ವಿತೀಯ ಜಿಲ್ಲಾ ಸಮ್ಮೇಳನ 28
* ನಿಧನ ವಾರ್ತೆ : ಜ। ಪಿ.ಕೆ. ಅಬ್ದುರ್ರಹೀಮ್ ಸಾಹಿಬ್ 28
* ಓದಿದ್ದು 29

* ದೈವ ನಿಂದನೆ: ಪಾಕ್ ಶಿಕ್ಷಕಿಗೆ ಗಲ್ಲು * 3.30 ಲಕ್ಷ ಮಕ್ಕಳ ಮೇಲೆ ದೌರ್ಜನ್ಯ * ಚರ್ಚ್‌ನಲ್ಲಿ ದೌರ್ಜನ್ಯದಿಂದ ಅವಮಾನ: ಪೋಪ್ ಫ್ರಾನ್ಸಿಸ್ * 6.3 ಕೆ.ಜಿ. ತೂಕದ ಮಗುವಿಗೆ ಜನ್ಮವಿತ್ತ ತಾಯಿ * ಮಾಸ್ಕ್ ಧರಿಸಲು ಹೇಳಿದ್ದಕ್ಕೆ 5.8 ಕೋ. ರೂ. ಎಣಿಸೋ ಶಿಕ್ಷೆ ! * ಸಾಕು ನಾಯಿಗೆ ಸಸ್ಯಹಾರಿ ಊಟ ಕೊಟ್ಟರೆ ಜೈಲುಶಿಕ್ಷೆ ಗ್ಯಾರಂಟಿ ! * ರಾಮ್ ರಹೀಂಗೆ ಜೀವಾವಧಿ ಶಿಕ್ಷೆ * 5,000 ಹೆರಿಗೆ ಮಾಡಿಸಿದ್ದ ನರ್ಸ್ ತಮ್ಮ ಹೆರಿಗೆ ವೇಳೆ ನಿಧನ ! * ಅತ್ಯಾಚಾರಿಗಳಿಗೆ 'ನಪುಂಸಕತ್ವ' ಶಿಕ್ಷೆ * ದಲಿತರಿಗೆ ದೇಗುಲ ಪ್ರವೇಶಾವಕಾಶ * ಗಂಡಿನ ಸಂಪರ್ಕವಿಲ್ಲದೆ ಜನನ * ಕೃಷ್ಣನ ವಿಗ್ರಹಕ್ಕೆ ವೈದ್ಯರಿಂದ ಬ್ಯಾಂಡೇಜ್ ! * ಮೊದಲ ಸ್ಟ್ಯಾಂಪಿಗೆ 62 ಕೋಟಿ ರೂ ! * ಪತ್ನಿಗೆ ಹೊಡೆಯುವುದು ಸರಿ ಎಂದರು ನಮ್ಮವರು ! * ವಕ್ಫ್ ಬೋರ್ಡ್ ಮಾಜಿ ಮುಖ್ಯಸ್ಥ ಹಿಂದೂ ಧರ್ಮಕ್ಕೆ ಮತಾಂತರ * ಯೇಸು ಸಮಾಧಿ ಸ್ಥಳ ಕಾಶ್ಮೀರದಲ್ಲಿದೆ: ಸುಬ್ರಮಣಿಯನ್ ಸ್ವಾಮಿ * ಶತಮಾನದ ಸಿದ್ಧಾಂತಕ್ಕೆ ಮೊಹರು * ತಬ್ಲಿಘಿ ಜಮಾತ್‌ಗೆ ನಿಷೇಧ ಹೇರಿದ ಸೌದಿ ಅರೇಬಿಯಾ * ಭಾರತಕ್ಕೆ ತಬ್ಲಿಘಿ ಅಪಾಯ ? * ಅನ್ನ ಹಾಕಿದ್ದಕ್ಕೆ 8 ಲಕ್ಷ ರೂ. ದಂಡ ! * ಉ. ಕೊರಿಯಾದಲ್ಲಿ ನಗು ನಿಷೇಧ ! * ಚೀನಾದ 135 ವರ್ಷದ ಅಜ್ಜಿ ನಿಧನ * ನಗುವುದನ್ನು ಕಲಿಯೋಣ ಎಂದ ಜಡ್ಜ್ * ಗರ್ಭದಲ್ಲಿ, ಸಮಾಧಿಯಲ್ಲಿ ಮಾತ್ರ ಹೆಣ್ಣು ಮಕ್ಕಳು ಸುರಕ್ಷಿತ * ಯುಎಇನಲ್ಲಿ ಇನ್ನು ಸೆನ್ಸಾರ್ ಫ್ರೀ * ಗಾಂಧಿ ಅವಹೇಳನ: ಪಶ್ಚಾತ್ತಾಪವಿಲ್ಲ * 50 ರೂ. ಕದ್ದಿದ್ದಕ್ಕೆ ಮಗನನ್ನೇ ಕೊಂದ ಅಪ್ಪ ! * ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಿಂಧು ತಾಯಿ ನಿಧನ * ನಾಯಿಯ ಬರ್ತ್‌ಡೇ ಪಾರ್ಟಿಗೆ 7 ಲಕ್ಷ ರೂ ! * ಅತೀ ದೊಡ್ಡ ಇಕ್ಥ್ಯೋಸರ್ ಅಸ್ಥಿಪಂಜರ

* ಆರೋಗ್ಯ: ಶಕ್ತಿವರ್ಧಕ ಹಣ್ಣು ಖರ್ಜೂರ 38
* ವಾಟ್ಸಾಪ್ ಸಂದೇಶಗಳು: 39

* ಮುಹಮ್ಮದ್ ಪೈಗಂಬರರ(ಸ) ಬಗ್ಗೆ * ಇಸ್ಲಾಮ್ ಧರ್ಮದ ಬಗ್ಗೆ * ಅಝ್ಖಾನ್ ಬಗ್ಗೆ * ಪ್ರೀತಿಯ ನನ್ನ ಮಂಗಳೂರಿನ ಗೆಳೆಯರೇ, * ಅಮೇರಿಕ ನ್ಯಾಯಾಲಯದ ವಿಶಿಷ್ಟ ತೀರ್ಪು...! * ಕೆಲವು ಪ್ರಶ್ನೆಗಳು

* ಅಹ್ಮದಿಯರಿಗೆ ಸುತ್ತೋಲೆ 43


# ಯುಗರಶ್ಮಿ

ಮುಖಪುಟ ಚಿತ್ರ : ಮಸ್ಜಿದ್ ಉಮರ್ ಖತ್ತಾಬ್, ಬರ್ಲಿನ್


ಬಿಡಿ ಪ್ರತಿ : ರೂ. 15/–   ವಾರ್ಷಿಕ ಚಂದಾ : ರೂ. 60/–   ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بِسْمِ اللّٰهِ الرَّحْمٰنِ الرَّحِيْمِ
نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

# ಯುಗರಶ್ಮಿ

ಜನವರಿ 2022

*ಸಂಪಾದಕ : ಮುಹಮ್ಮದ್ ಯೂಸುಫ್*

| ಆರಂಭ : 1975 | ಸಂಪುಟ : 39 | ಸುಲ್ಹ್ : 1401 ಹಿಜರೀ ಶಮ್ಸೀ | ಸಂಚಿಕೆ : 2 |
|---|---|---|---|

## ದೇವ ಕಾರುಣ್ಯ

ಅವನ ಕಾರುಣ್ಯ ಎರಡು ವಿಧ. ಒಂದನೆಯದು ಯಾರದೇ ಪ್ರಯತ್ನ ಫಲವಾಗಿಯಲ್ಲದೆ ಅನಶ್ವರವಾಗಿ ಪ್ರಕಟವಾಗುವಂಥದ್ದು. ಉದಾಹರಣೆಗೆ, ನಾವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆಯೇ ಆಕಾಶ, ಭೂಮಿ, ಸೂರ್ಯ, ಚಂದ್ರ, ಗೋಳಗಳು, ನೀರು, ಅಗ್ನಿ, ವಾಯು ಮತ್ತು ನಮ್ಮ ಸೌಕರ್ಯಕ್ಕೆ ಬೇಕಾಗಿರುವ ಪ್ರಪಂಚದ ಎಲ್ಲ ಕಣಗಳನ್ನೂ ನಮ್ಮ ಆವಶ್ಯಕತೆಗೆ ಬೇಕಾದ ಎಲ್ಲ ವಸ್ತುಗಳನ್ನೂ ಅವನು ನೀಡಿದ್ದಾನೆ. ನಮ್ಮ ಸಾನ್ನಿಧ್ಯ ಕೂಡ ಇಲ್ಲದ ಸಂದರ್ಭದಲ್ಲಿ ಅವನು ಇದೆಲ್ಲ ಮಾಡಿರುವುದು ನಮ್ಮ ಕಡೆಯಿಂದ ಯಾವುದೇ ಪ್ರವರ್ತನೆ ಉಂಟಾಗಿಯಲ್ಲ. ಸೂರ್ಯ ಸೃಷ್ಟಿಸಲ್ಪಟ್ಟದ್ದು ತಮ್ಮ ಏನಾದರೂ ಪ್ರವರ್ತನೆಯಿಂದ ಎಂದು ಯಾರಿಗಾದರೂ ಹೇಳಲು ಸಾಧ್ಯವೇ? ಅಥವಾ ಭೂಮಿ ಸೃಷ್ಟಿಸಲ್ಪಟ್ಟದ್ದು ತನ್ನ ಸದ್ವರ್ತನೆಯ ಫಲವೆಂದು ಯಾರಿಗಾದರೂ ಹೇಳಲು ಸಾಧ್ಯವೇ? ಇವೆಲ್ಲ ಮನುಷ್ಯನು ಸೃಷ್ಟಿಸಲ್ಪಡುವುದಕ್ಕೆ ಮುಂಚೆಯೇ ಕಾರ್ಯನಿರತವಾಗಿರುವ ಅವನ ಕಾರುಣ್ಯಗಳಾಗಿವೆ; ಯಾರದೇ ಕರ್ಮಫಲವಲ್ಲ. ಎರಡನೆಯ ಕಾರುಣ್ಯ ಮನುಷ್ಯನ ಪ್ರವರ್ತನೆಯ ಫಲದಿಂದ ಉಂಟಾಗುತ್ತದೆ. ಇದನ್ನು ವಿಶದೀಕರಿಸುವ ಆವಶ್ಯವಿಲ್ಲ.

(ಲೆಕ್ಚರ್ ಲಾಹೋರ್)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ನಿಮ್ಮಲ್ಲಿ ಪರಸ್ಪರ ಜಗಳವಾದರೆ ಮುಖಕ್ಕೆ ಹೊಡೆಯಬಾರದು. (ಬುಖಾರಿ)

♦ ದಾನ ಮಾಡಿದುದನ್ನು ಮರಳಿ ಪಡೆಯುವವನು ವಾಂತಿ ಮಾಡಿದ್ದನ್ನು ತಿನ್ನುವ ನಾಯಿಯ ಹಾಗೆ. (ಬುಖಾರಿ)

♦ ಯಾರಾದರೂ ಆಣೆ ಹಾಕುವರಾದರೆ ಅಲ್ಲಾಹನ ನಾಮದಲ್ಲಿ ಮಾತ್ರ ಆಣೆ ಹಾಕಬೇಕು. ಅಲ್ಲವಾದರೆ ಮೌನ ಅವಲಂಬಿಸಬೇಕು. (ಬುಖಾರಿ)

♦ ಒಂದು ನಮಾಝ್ ಮರೆತುಹೋದರೆ, ಅದು ನೆನಪಾಗುವಾಗ ನಮಾಝ್ ಮಾಡಬೇಕಲ್ಲದೆ ಬೇರೆ ಪರಿಹಾರವಿಲ್ಲ. (ಬುಖಾರಿ)

♦ ಯಾರಿಗಾದರೂ ಅಸರ್ ನಮಾಝಿನ ಒಂದು ರಕ್‌ಅತ್ ಸೂರ್ಯಾಸ್ತಮಾನದ ಮುಂಚೆ ನಿರ್ವಹಿಸಲು ಸಾಧ್ಯವಾದರೆ, ಆ ನಮಾಝನ್ನು ಅವನು ಪೂರ್ಣಗೊಳಿಸಲಿ. ಸುಬ್‌ಹಿ ನಮಾಝಿನ ಒಂದು ರಕ್‌ಅತ್ ಉದಯಕ್ಕೆ ಮುಂಚೆ ನಿರ್ವಹಿಸಲು ಯಾರಿಗಾದರೂ ಸಾಧ್ಯವಾದರೆ ಅವನು ಆ ನಮಾಝನ್ನೂ ಪೂರ್ಣಗೊಳಿಸಲಿ. (ಬುಖಾರಿ)

♦ ಒಬ್ಬನು ಒಬ್ಬಂಟಿಯಾಗಿ ನಮಾಝ್ ಮಾಡುವುದಕ್ಕಿಂತ 27 ಪಟ್ಟು ಪ್ರತಿಫಲ ಜಮಾಅತಾಗಿ ನಮಾಝ್ ಮಾಡುವುದರಲ್ಲಿದೆ. (ಬುಖಾರಿ)

♦ ಪ್ರತಿದಿನ ಸೂರ್ಯ ಉದಿಸಿದರೆ ಇಬ್ಬರು ದೇವದೂತರು ಭೂಮಿಗೆ ಇಳಿದು ಬರುತ್ತಾರೆ. ಅವರ ಪೈಕಿ ಒಬ್ಬ ಹೀಗೆ ಪ್ರಾರ್ಥಿಸುತ್ತಾನೆ: "ಅಲ್ಲಾಹನೇ, ಅನ್ಯನ ಒಳಿತಿಗಾಗಿ ಖರ್ಚು ಮಾಡುವವನಿಗೆ ನೀನು ಪುಣ್ಯ ನೀಡು." ಇನ್ನೊಬ್ಬ ದೇವದೂತ ಹೀಗೆ ಪ್ರಾರ್ಥಿಸುತ್ತಾನೆ: "ಅಲ್ಲಾಹನೇ, ಜಿಪುಣನಿಗೆ ನೀನು ನಾಶವನ್ನುಂಟುಮಾಡು." (ಬುಖಾರಿ)

♦ ಮರ್ದಿತನ ಪ್ರಾರ್ಥನೆಗೆ ಭಯಪಡಬೇಕು. ಅವನ ಮತ್ತು ಅಲ್ಲಾಹನ ಮಧ್ಯೆ ಯಾವ ಮರೆಯೂ ಇಲ್ಲ.

♦ ಮಾರುವಾಗ ಮತ್ತು ಖರೀದಿಸುವಾಗ, ಸಾಲ ಸಿಗಲಿರುವುದನ್ನು ಕೇಳುವಾಗ ರಿಯಾಯಿತಿ ತೋರಿಸುವ ಮನುಷ್ಯನನ್ನು ಅಲ್ಲಾಹು ಅನುಗ್ರಹಿಸಲಿ. (ಬುಖಾರಿ)

♦ ಕಾವಲು ಕಾಯಲು ಹೊರತು ಯಾರಾದರೂ ನಾಯಿಯನ್ನು ಸಾಕಿದರೆ ಅವನ ಸತ್ಕರ್ಮಗಳಲ್ಲಿ ಬಹ್ವಂಶ ದಿನಂಪ್ರತಿ ಕಡಿಮೆಯಾಗುವುದು. (ಬುಖಾರಿ)

♦ ನೀವು ನಿಮ್ಮ ಮಾತಾಪಿತರನ್ನು ದ್ವೇಷಿಸಬಾರದು. ಯಾರಾದರೂ ತನ್ನ ಮಾತಾಪಿತರನ್ನು ದ್ವೇಷಿಸಿದರೆ ಅವನು ಕೃತಘ್ನನಾಗಿದ್ದಾನೆ. (ಬುಖಾರಿ)

♦ ಮನಸ್ಸಿನಲ್ಲಿ ಉದಿಸುವ ಕೆಟ್ಟ ವಿಚಾರಗಳನ್ನು ವರ್ತನೆ ರೂಪದಲ್ಲಾಗಲಿ ಮಾತಿನ ರೂಪದಲ್ಲಾಗಲಿ ಪ್ರಕಟಿಸದಿದ್ದರೆ ಅಲ್ಲಾಹು ಆ ವಿಚಾರಗಳನ್ನು ಕ್ಷಮಿಸುವನು. (ಬುಖಾರಿ)

♦ ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಒಬ್ಬನು ಹರಕೆ ಹೊತ್ತರೆ ಅದನ್ನು ಪೂರೈಸಬೇಕು. (ಬುಖಾರಿ)

♦ ಯಾರಾದರೂ ಪ್ರಸಿದ್ಧಿಗೋಸ್ಕರ ಏನಾದರೂ ಸತ್ಕರ್ಮ ಮಾಡಿದರೆ ಅಲ್ಲಾಹು ಪುನರುತ್ಥಾನ ದಿನದಲ್ಲಿ ಅವನಿಗೆ ಕುಪ್ರಸಿದ್ಧಿ ಉಂಟುಮಾಡುವನು. (ಬುಖಾರಿ)

♦ ಯಾರಾದರೂ ಜನರನ್ನು ಕಷ್ಟಕ್ಕೀಡುಮಾಡಿದರೆ ಪುನರುತ್ಥಾನ ದಿನದಂದು ಅಲ್ಲಾಹು ಅವನನ್ನು ಕಷ್ಟಕ್ಕೆ ಗುರಿಪಡಿಸುವನು. (ಬುಖಾರಿ)

# ಸಾಮಾಜಿಕ ಶಾಂತಿ

♦ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ಉತ್ತರದಾಯಿತ್ವ

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **"ಆಕಾಶಗಳಲ್ಲೂ ಭೂಮಿಯಲ್ಲೂ ಇರುವುದೆಲ್ಲ ಅಲ್ಲಾಹನದ್ದಾಗಿವೆ. ನಿಮ್ಮ ಮನಸ್ಸಿನಲ್ಲಿರುವಂಥದ್ದು, ನೀವು ಬಹಿರಂಗಪಡಿಸಿದರೂ ಬಚ್ಚಿಟ್ಟರೂ ಅಲ್ಲಾಹನು ನಿಮ್ಮೊಡನೆ ಆ ಬಗ್ಗೆ ವಿವರಣೆ ಕೇಳುವನು. ಆ ಮೇಲೆ ತಾನಿಚ್ಛಿಸುವವರಿಗೆ ಅವನು ಕ್ಷಮೆ ನೀಡುವನು ಮತ್ತು ತಾನಿಚ್ಛಿಸುವವರಿಗೆ ಅವನು ಶಿಕ್ಷೆ ಕೊಡುವನು. ಅಲ್ಲಾಹನು ತಾನಿಚ್ಛಿಸುವ ಎಲ್ಲವನ್ನೂ ಮಾಡಲು ಶಕ್ತನು."** (2:285).

ಇನ್ನೊಂದು ವಚನ ಹೀಗಿದೆ: **"ಯಾವುದರ ಬಗ್ಗೆ ನಿನಗೆ ಸರಿಯಾದ ಜ್ಞಾನವಿಲ್ಲವೋ ಅದನ್ನು ನೀನು ಹಿಂಬಾಲಿಸಬೇಡ. ಖಂಡಿತವಾಗಿಯೂ ಕಿವಿ, ಕಣ್ಣು, ಹೃದಯ ಇವುಗಳ ವಿಚಾರಣೆ ನಡೆಯುವುದು."** (17:37).

ಈ ವಚನದಲ್ಲಿ ಹೃದಯ ಎಂದು ಹೇಳಿದುದು ಮನುಷ್ಯನ ಇಚ್ಛಾಶಕ್ತಿಯ ಬಗ್ಗೆಯಾಗಿದೆ. ಮನುಷ್ಯನ ಪ್ರತಿಯೊಂದು ಕೆಲಸದ ಹಿಂದೆ ಇದು ಇರುತ್ತದೆ. ಅರಬಿ ಭಾಷೆಯಲ್ಲಿ ಪವಿತ್ರ ಖುರ್‌ಆನಿನಲ್ಲಿ 'ಫುಆದ್' ಎಂಬ ಶಬ್ದ ಬಳಸಲಾಗಿದೆ. ಇದು ಮನುಷ್ಯನ ಇಚ್ಛಾಶಕ್ತಿಯನ್ನು ಸೂಚಿಸುವ ಪದವಾಗಿದೆ. ನಾವು ಕಂಪ್ಯೂಟರನ್ನು ಉಪಯೋಗಿಸುವ ಹಾಗೆ ಇಚ್ಛಾಶಕ್ತಿ ಮೆದುಳನ್ನು ಉಪಯೋಗಿಸುತ್ತದೆ. ಆದುದರಿಂದ ಇಚ್ಛಾಶಕ್ತಿಯೇ ಎಲ್ಲ ಒಳಿತುಗಳ ಮತ್ತು ಕೆಡುಕುಗಳ ಮೂಲವಾಗಿದೆ. ಮೃತನಾದ ನಂತರ ಈ ಇಚ್ಛಾಶಕ್ತಿ ಹೊಸ ಜೀವನದಲ್ಲಿ ಕಿವಿ ಮತ್ತು ಕಣ್ಣುಗಳೊಂದಿಗೆ ಪ್ರಶ್ನಿಸಲ್ಪಡುವುದು.

ದೇವನ ಬಂಧವಿಲ್ಲದ ಸಮಾಜವನ್ನು ಹತ್ತಿರದಿಂದ ಪರಿಶೀಲಿಸುವಾಗ ನಾಸ್ತಿಕತೆ ಮತ್ತು ಪರಲೋಕದ ಬಗ್ಗೆ ಅವಿಶ್ವಾಸ ಅರ್ಧ ಪ್ರಜ್ಞಾವಸ್ಥೆಯಲ್ಲಿ ಅಪ್ರತ್ಯಕ್ಷವಾಗಿ ಅದರಲ್ಲಿ ಇರುತ್ತದೆ. ವಿಶ್ವಾಸದ ಬಗ್ಗೆ ಹೇಳುವುದಾದರೆ, ದೇವನ ಬಗ್ಗೆ ಮತ್ತು ಪರಲೋಕದ ಬಗ್ಗೆ ವಿಶ್ವಾಸವಿದೆ ಎಂದು ಹೇಳುತ್ತಾರಾದರೂ ಪ್ರಾಯೋಗಿಕವಾಗಿ ಈ ವಿಶ್ವಾಸ ಅಸ್ತಿತ್ವದಲ್ಲೇ ಇರುವುದಿಲ್ಲ. ಆದರೆ ಕೆಲವು ಸಾರಿ ಯಾವುದಾದರೂ ಕಷ್ಟ ಬಂದೆರಗುವಾಗ ಈ ಮರೆಯಾದ ವಿಶ್ವಾಸಗಳು ಮನುಷ್ಯನ ಪ್ರಜ್ಞೆಗೆ ಬರುತ್ತದೆ. ಕೆಲವು ಸಾರಿ ಅನೇಕ ಪೀಳಿಗೆಗಳು ಇಂತಹ ಕ್ಷೀಣ ವಿಶ್ವಾಸವನ್ನು ಸರಿಯಾಗಿ ಮನಗಾಣದೆ ಜೀವಿಸಿರಲೂಬಹುದು. ಇಂತಹ ಸ್ಥಿತಿಯಲ್ಲಿ ನಾಸ್ತಿಕತೆ ಮತ್ತು ಪರಲೋಕದ ಬಗ್ಗೆ ಅವಿಶ್ವಾಸ ಮರೆಯಾಗಿದ್ದುದು ಬಹಿರಂಗಕ್ಕೆ ಬರುತ್ತದೆ. ಭೋಗ ಪ್ರಿಯರಾಗಿ ಜೀವಿಸಿದ ಸಮಾಜದಲ್ಲಿ ನಾಸ್ತಿಕತೆ ಮತ್ತು ಪರಲೋಕದ ಬಗ್ಗೆ ಅವಿಶ್ವಾಸವು ಪ್ರಜ್ಞಾಪೂರ್ವಕವಾಗುವಾಗ ನೈತಿಕ ಅಧಃಪತನ ಮತ್ತು ಮೌಲ್ಯಗಳ ಚ್ಯುತಿಯು ವೇಗವಾಗಿ ಮುಂದುವರಿಯುತ್ತದೆ.

ನಾಗರಿಕತೆಯ ಬೆಳವಣಿಗೆ ಪಡೆದುದು ಲೋಕದ ಯಾವುದೇ ಪ್ರದೇಶದಲ್ಲಿಯಾದರೂ ಮಾನವ ಚರಿತ್ರೆಯಲ್ಲಿ ನಡೆದುದು ಒರಟುತನದಿಂದ ಮೃದುತ್ವಕ್ಕಾಗಿತ್ತು. ಮನುಷ್ಯನ ಮೂಲಭೂತ ಮಾನಸಿಕ ಆಕಾಂಕ್ಷೆಗಳು ಮನುಷ್ಯನ ಸ್ವಭಾವವನ್ನು ರೂಪಿಸುವ ಶಕ್ತಿಗಳಾಗಿದ್ದು ಅವು ಬದಲಾವಣೆ ಹೊಂದುವುದಿಲ್ಲ. ಬದಲಾವಣೆ ಹೊಂದುವುದು ಈ ಆಕಾಂಕ್ಷೆಗಳನ್ನು ಈಡೇರಿಸುವ ಬಗೆಯಲ್ಲಿ ಆಗಿದೆ. ಉದಾಹರಣೆಗೆ, ಒಬ್ಬನ ಹಸಿವನ್ನು ಮಾಂಸ ಅಥವಾ ತರಕಾರಿಯಿಂದ ಹೋಗಲಾಡಿಸಬಹುದಾಗಿದೆ. ಆದರೆ ಮಾಂಸ ಮತ್ತು ತರಕಾರಿಯ ಗುಣಮಟ್ಟ ಮತ್ತು ತಾಜಾತನದಲ್ಲಿ ವ್ಯತ್ಯಾಸವಿರುತ್ತದೆ. ಇವುಗಳನ್ನು ಬೇಯಿಸಿ ಅಥವಾ ಬೇರೆ ವಿಧಾನಗಳಲ್ಲಿ ಉಪಯೋಗಿಸಬಹುದು. ಅಥವಾ ಒಬ್ಬನು ಬಯಸುವುದಾದರೆ ಹಸಿಯಾಗಿ ಸಹ ತಿನ್ನಬಹುದು.

ಸಮಾಜ ಬೆಳವಣಿಗೆ ಹೊಂದಿದಂತೆ ಮನುಷ್ಯನ ಮೂಲಭೂತ ಆವಶ್ಯಕತೆಗಳನ್ನು ಈಡೇರಿಸುವ ವಿಧಾನವು ಸುಸಂಸ್ಕೃತವೂ ಆಧುನಿಕವೂ ಆಗುತ್ತದೆ. ಇದು ಮುಂದುವರಿಯುತ್ತಾ ಹೋಗುತ್ತದೆ. ಜನರ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗನುಸಾರವಾಗಿ ಇದರ ವೇಗವು ವರ್ಧಿಸುತ್ತದೆ. ಆದರೆ ಸಮಾಜವು ಯಾವಾಗಲೂ ಚಲಿಸುತ್ತಾ ಇರುತ್ತದೆ – ಕೆಲವು ಸಾರಿ ಮೆಲ್ಲಗೆ, ಕೆಲವು ಸಾರಿ ವೇಗವಾಗಿ.

ನಾಗರಿಕತೆಯು ಪ್ರಬುದ್ಧವಾಗುವಾಗ ಅತಿರೇಕದ ಸ್ಥಿತಿ ಅಥವಾ ಬೇರೆ ಯಾವುದಾದರೂ ವಿನಾಶಕರ ಪ್ರವೃತ್ತಿ ಅದರ ಪ್ರಗತಿಯನ್ನು ಹಿಂದೆ ಸರಿಸುತ್ತದೆ. ಅಧಃಪತನ ಹೊಂದಿದ ಸಮಾಜಗಳಲ್ಲಿ ದಿಕ್ಕು ಸುಸಂಸ್ಕೃತಿಯಿಂದ ಒರಟುತನಕ್ಕೆ ತಳ್ಳಲ್ಪಟ್ಟಿತು. ಇದರ ಬಗ್ಗೆ ಸವಿಸ್ತಾರವಾಗಿ ಪ್ರತಿಪಾದಿಸಬೇಕಾಗಿದೆ. ಆದರೆ ಈಗ ಅದಕ್ಕೆ ಸಾಧ್ಯವಾಗುವುದಿಲ್ಲ. ನಾನು ಕೆಲವು ಅಂಶಗಳನ್ನು ಮಾತ್ರ ವಿವರಿಸುವೆನು.

ಸಮಾಜವು ಅವನತಿಗೆ ಗುರಿಯಾಗುವಾಗ ಅದು ತನ್ನ ಪರಿಷ್ಕಾರಕ್ಕೆ ಹಿಂದಿನ ಒರಟು ಮೃಗೀಯ ಆಕಾಂಕ್ಷೆಗಳ ಕಡೆಗೆ ಹಿಂದೆ ಸರಿಯುತ್ತದೆ. ಇದು ಸಮಾಜದ ಪ್ರತಿಯೊಂದು ಚಟುವಟಿಕೆಯಲ್ಲಿ ಕಾಣಿಸಲಾರದಾದರೂ ಅದು ಮಾನವರ ಪರಸ್ಪರ ಸಂಬಂಧಗಳಲ್ಲೂ ಭೋಗ ಪ್ರಿಯತೆಯಲ್ಲೂ ಯಾವಾಗಲೂ ಕಾಣಿಸುತ್ತದೆ. ಲೈಂಗಿಕತೆಗೆ ಸಂಬಂಧಿಸಿ ಮನುಷ್ಯನ ವರ್ತನೆಯ ಅಧ್ಯಯನವು ಇದನ್ನು ಸ್ಪಷ್ಟಪಡಿಸುತ್ತದೆ. ವಂಶಾಭಿವೃದ್ಧಿಯ ಮೂಲ ಉದ್ದೇಶವನ್ನು ಸಾಧಿಸಲು ಅದರೊಂದಿಗೆ ಸಂತೋಷಗಳಿಸುವಿಕೆಯನ್ನು ಪ್ರಕೃತಿಯು ಎಲ್ಲ ಪ್ರಾಣಿ ವರ್ಗಗಳಲ್ಲಿ ಇರಿಸಿದೆ. ಮನುಷ್ಯರಲ್ಲಿ ನಾವು ಕಾಣುವುದೇನೆಂದರೆ, ಆಕಾಂಕ್ಷೆಗಳನ್ನು ಈಡೇರಿಸುವುದನ್ನು ಒಂದು ಸುಸಂಸ್ಕೃತ ರೀತಿಯಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಪ್ರಕೃತಿ ಲೈಂಗಿಕ ಸುಖವನ್ನು ಅಂತಿಮ ಗುರಿಯಾಗಿ ಎಂದೂ ಬಯಸಿರಲಿಲ್ಲ. ಅಂತಿಮ ಗುರಿ ವಂಶಾಭಿವೃದ್ಧಿಯಾಗಿದೆ. ಲೈಂಗಿಕ ಸುಖ ಅದಕ್ಕೆ ಅಧೀನಗೊಳಿಸಲಾಗಿತ್ತು. ಆದರೆ ಸಮಾಜವು ಅಧಃಪತನ ಹೊಂದಿದಾಗ ಈ ವ್ಯವಸ್ಥೆ ಹಿಂದೆ ಮುಂದೆ ಆಗುತ್ತದೆ.

ವಿವಾಹವೆಂಬ ಸಾಮಾಜಿಕ ವ್ಯವಸ್ಥೆಯ ಬೆಳವಣಿಗೆ, ಅದಕ್ಕೆ ಸಂಬಂಧಿಸಿದ ಆಚಾರಗಳು, ಗಂಡು ಹೆಣ್ಣುಗಳ ಸಂಬಂಧದ ಬಗ್ಗೆ

ಏರ್ಪಡಿಸಲಾದ ನಿರ್ಬಂಧಗಳು ಸಮಾಜದ ಬೆಳವಣಿಗೆಯ ಮೂಲಕ ಸಹಜವಾಗಿ ಸಂಭವಿಸಿದುದು ಅದಕ್ಕೆ ಧರ್ಮದೊಂದಿಗೆ ಸಂಬಂಧವಿಲ್ಲ ಎಂದು ಸಮಾಜಶಾಸ್ತ್ರಜ್ಞರು ಹೇಳಬಹುದು. ಆದರೆ ವಿವಾಹ ವ್ಯವಸ್ಥೆ ದೇವ ನಿರ್ದೇಶಿತವಾಗಿರಲಿ ಅಥವಾ ಸಮಾಜದ ಬೆಳವಣಿಗೆಯ ಮೂಲಕ ಅಸ್ತಿತ್ವಕ್ಕೆ ಬಂದುದಾಗಿರಲಿ, ಲೈಂಗಿಕ ಆಕಾಂಕ್ಷೆಯನ್ನು ಈಡೇರಿಸುವ ವಿಧಾನವು ಹೆಚ್ಚುಹೆಚ್ಚಾಗಿ ತಪ್ಪು ಮಾರ್ಗವನ್ನು ಅವಲಂಬಿಸುವುದೂ ಸಂಕೀರ್ಣವೂ ಆಗುತ್ತಾ ಇದೆ.

ಪುರುಷ – ಮಹಿಳೆ ಸಂಬಂಧದಲ್ಲಿ ಬೆಳೆಯುತ್ತಿರುವ ಕ್ರಮರಾಹಿತ್ಯ ಇದೇ ರೋಗದ ಚಿಹ್ನೆಯಾಗಿದೆ. ಲೈಂಗಿಕ ಸಂಬಂಧದ ಬಗ್ಗೆ ಅನಿಯಂತ್ರಿತ, ಸ್ವತಂತ್ರ ಮನೋಭಾವ ಮಾತ್ರವಲ್ಲ, ಮಾನವರ ಸಂಬಂಧದ ಈ ಮುಖ್ಯ ಕ್ಷೇತ್ರದಲ್ಲಿ ಸಂಭವಿಸುವ ಬದಲಾವಣೆಯಿಂದ ಬೇರೆ ಅನೇಕ ಪರಿಣಾಮಗಳೂ ಉಂಟಾಗುತ್ತವೆ. ಈ ಸಂಬಂಧಗಳ ಬಗ್ಗೆ ನ್ಯಾಯ ಬದ್ಧತೆ ಮತ್ತು ನ್ಯಾಯರಾಹಿತ್ಯದ ಚರ್ಚೆಗಳು ಹಿಂದಿನ ಕಾಲಕ್ಕೆ ಸಂಬಂಧಿಸಿದುವು ಎಂದು ಕಡೆಗಣಿಸಲಾಗುತ್ತಿದೆ. ಆದರೆ ಕೆಲವು ಧಾರ್ಮಿಕ ಗುಂಪುಗಳು ಈ ವಿಷಯವನ್ನು ಚರ್ಚಿಸುತ್ತಾ ಇವೆ. ಆದರೆ ಸಂಪರ್ಕ ಮಾಧ್ಯಮಗಳಲ್ಲಿ ನಡೆಯುವ ಅವರ ಚರ್ಚೆಗಳನ್ನು ವೀಕ್ಷಿಸುವಾಗ ಇಂತಹ ಹಳೆಗಾಲದ ಮನೋಭಾವದ, ಕಟು ಧಾರ್ಮಿಕ ಮನೋಭಾವದ ಮನುಷ್ಯರ ಸಂಖ್ಯೆ ಬಹಳ ಕಡಿಮೆಯಾಗುತ್ತಾ ಇದೆ ಎಂದೂ ಅವರ ಸಂಖ್ಯೆ ಗಣನೀಯವಲ್ಲವೆಂದೂ ತಿಳಿದು ಬರುತ್ತದೆ.

ಪಶ್ಚಿಮ ಲೋಕದಲ್ಲಿ ಲೈಂಗಿಕ ಕಾಂಕ್ಷೆಯನ್ನು ಯಾವುದೇ ನಿರ್ಬಂಧಕ್ಕೊಳಪಡಿಸದೆ ಈಡೇರಿಸಬೇಕೆಂಬ ಮನೋಭಾವ ಬೆಳೆಯುತ್ತಾ ಇದೆ. ಮಹಿಳೆಯರಲ್ಲಿ ಈ ವಿಷಯಕ್ಕೆ ಸಂಬಂಧಿಸಿ ಮಾತನಾಡುವಾಗ ಇರಬಹುದಾದ ನಾಚಿಕೆ ಈಗ ಇಲ್ಲದಾಗುತ್ತಿದೆ. ನಗ್ನತೆ, ಶರೀರ ಪ್ರದರ್ಶನ, ನಿಸ್ಸಂಕೋಚಕದ ಚರ್ಚೆ ಮತ್ತು ಪಾಪಕೃತ್ಯಗಳ ನಿವೇದನೆ ಮೊದಲಾದುವುಗಳನ್ನು ಸತ್ಯದ ಬಹಿರಂಗ ಪಡಿಸುವಿಕೆ ಎಂದು ಕಾಣಲಾಗುತ್ತಿದೆ.

ಆದರೆ ಮನುಷ್ಯನ ಇತರ ಅಭಿಲಾಷೆಗಳ ಬಗ್ಗೆ ಇಂತಹ ರೀತಿಯಲ್ಲಿ ಪ್ರತಿಪಾದಿಸಲು ಯಾರೂ ಸಿದ್ಧರಾಗುವುದಿಲ್ಲ. ತಾನು ಬಯಸುವುದನ್ನು ಪಡೆಯುವ ಆಕಾಂಕ್ಷೆ ಎಲ್ಲರಿಗೂ ಇರುವುದಿಲ್ಲವೇ? ಸಿಟ್ಟುಗೊಳ್ಳುವುದು ಮನುಷ್ಯನ ಸಹಜ ಸ್ವಭಾವವಲ್ಲವೇ? ಆದರೆ ಆ ಸಿಟ್ಟನ್ನು ಅನಿರ್ಬಂಧಿತವಾಗಿ ಬಳಸಲು, ಉಗ್ರ ರೂಪದಲ್ಲಿ ಬಳಸಲು ಅನುಮತಿಸುತ್ತಾರೆಯೋ? ಒಂದು ಬಲಹೀನ ನಾಯಿ ಬಲಿಷ್ಠ ನಾಯಿಯ ಹಾಗೆಯೇ ಶಾರೀರಿಕ ಗುಣಗಳನ್ನು ಹೊಂದಿರುತ್ತದೆ. ಆದರೆ ಬಲಿಷ್ಠ ನಾಯಿ ಕಚ್ಚುವಾಗ ಬಲಹೀನ ನಾಯಿ ಬೊಗಳುವುದು.

ಸಾಮಾಜಿಕ ನಿರ್ಬಂಧಗಳ ಬಗ್ಗೆ ಹೇಗೆ ಹೇಳಬಲ್ಲಿರಿ. ಸಭ್ಯ ವರ್ತನೆ, ಶಿಷ್ಟಾಚಾರ ಮೊದಲಾದುವುಗಳ ಬಗ್ಗೆ ಏನು ಹೇಳುವಿರಿ. ಇವು ಮನುಷ್ಯನ ಸಹಜ ಆಕಾಂಕ್ಷೆಗಳನ್ನು ಈಡೇರಿಸಲು ಅಡ್ಡಿಯಾಗುವುದಿಲ್ಲವೇ? ಬರೇ ಲೈಂಗಿಕ ಆಸಕ್ತಿಗೆ ಮಾತ್ರ ಏಕೆ ಸ್ವತಂತ್ರ ಅನುಮತಿ ನೀಡುವುದು? ಸಂಪ್ರದಾಯ, ನಿಯಮಗಳು, ಸಭ್ಯತೆ, ಸರಿ ತಪ್ಪು ಎಂಬ ವಿವೇಚನೆ ಇಲ್ಲದೆ ಸ್ವಂತ ಅಥವಾ ಪರ ಎಂಬ ವಿವೇಚನೆಯಿಲ್ಲದೆ ಬಳಸಲು ಏಕೆ ಬಿಡಬೇಕು? ಇಂದು ನಾವು ಕಾಣುವ ವಿದ್ಯಮಾನವನ್ನು ಚೆನ್ನಾಗಿ ಪರಿಶೀಲಿಸಬೇಕು. ಲೈಂಗಿಕ ವಿಷಯದಲ್ಲಿ ನಿಯಂತ್ರಣಾರಾಹಿತ್ಯ ಮಾನವನ ಅನ್ಯ ಕ್ಷೇತ್ರದಲ್ಲಿ ಕದಿಯಲು ಪ್ರೋತ್ಸಾಹಿಸುತ್ತದೆ ಮತ್ತು ಅನ್ಯರಿಗೆ ನೋವುಂಟುಮಾಡುವಂತಹದಾಗಿದೆ. ಅನಿಯಂತ್ರಿತ ಭೋಗಲಾಲಸೆ ವಿಕೃತ ರೂಪ ಪಡೆಯುತ್ತಿದ್ದು ನಾಗರಿಕತೆಯ ಶ್ರೇಷ್ಠ ಭವನಗಳನ್ನು ಕೆಡವಿ ಅನಾಗರಿಕತೆಯ ಆರಂಭ ಘಟ್ಟಕ್ಕೆ ತಲಪಿಸುವಂತಹದ್ದಾಗಿದೆ.

ಹಿಂದಿನ ಕಾಲದ ಸಮಾಜದಲ್ಲಿ ವಿವಿಧ ಆಚಾರಗಳ ವರ್ಧನೆ, ಮಾಡಬಹುದಾದ ಮತ್ತು ಮಾಡಬಾರದ ಕೆಲಸಗಳ ಬಗ್ಗೆ ಆಜ್ಞೆಗಳನ್ನು ನಾವು ಕಾಣುತ್ತೇವೆ. ಆದರೆ ಅದರೊಂದಿಗೆ ಪ್ರೇಮ ಪ್ರಕಟಣೆಯು ಮುಖ್ಯ ಪಾತ್ರ ವಹಿಸುವುದನ್ನು ನಾವು ಕಾಣುತ್ತೇವೆ. ಪದ್ಯಗಳು, ಸಾಹಿತ್ಯ, ಕಲೆ, ಸಂಗೀತ, ಜೀವನಶೈಲಿ, ಪ್ರದರ್ಶನಗಳು, ಸುವಾಸನೆ ದ್ರವ್ಯಗಳ ಬಗ್ಗೆ ಪ್ರೀತಿ, ಸಭ್ಯ ಮತ್ತು ಸುಸಂಸ್ಕೃತ ನಡತೆ ಇವುಗಳು ಸಂಪೂರ್ಣವಾಗಿ ಅಲ್ಲವಾದರೂ ಬಹಳ ಮಟ್ಟಿಗೆ ಲೈಂಗಿಕ ಆಸಕ್ತಿಯ ಮೂಲಕ ಸಮಾಜಕ್ಕೆ ದೊರೆತ ಕೊಡುಗೆಗಳಾಗಿವೆ. ಒಂದು ಕಾಲ ಬರಬಹುದಾಗಿದೆ. ಆಗ ಮುಂದಿನ ಪೀಳಿಗೆ ಒಂದು ಸಾವಿರ ವರ್ಷಗಳಲ್ಲಿ ಸಮಾಜ ಗಳಿಸಿದುದರ ವಿರುದ್ಧ ವಿದ್ರೋಹ ಮಾಡಬಹುದು. ಎಲ್ಲವನ್ನೂ ತಿರಸ್ಕರಿಸುವ ರೂಪದಲ್ಲಿ ಈ ವಿದ್ರೋಹ ಉಂಟಾಗದೇ ಇರಲೂಬಹುದು. ಆದರೆ ವೀಕ್ಷಕ ದೃಷ್ಟಿ ಈ ನಿಟ್ಟಿನಲ್ಲಿ ಸಮಾಜ ಸಾಗುತ್ತಿರುವುದನ್ನು ಕಾಣಬಹುದು. ಹಿಪ್ಪೀಯಿಸಂ, ಸ್ವೇಚ್ಛಾಚಾರ, ಪರಪೀಡನೆ ಮನೋಭಾವ, ಲೈಂಗಿಕ ದೌರ್ಜನ್ಯಗಳು, ಲೈಂಗಿಕ ಪ್ರವೃತ್ತಿ ಹಿಂದಿನ ಕಾಲದ ಮೃಗೀಯ ಸ್ಥಿತಿಗೆ ತಲಪುತ್ತಿರುವುದು ಮೊದಲಾದುವು ಸಮಾಜವು ನಾಗರಿಕತೆಯಿಂದ ಅನಾಗರಿಕತೆಗೆ ಹಿಂದೆ ಸರಿಯುವುದರ ಲಕ್ಷಣಗಳಾಗಿವೆ.

ವಿದ್ರೋಹಿ ಮನೋಭಾವದ ಕೆಲವು ಯುವಕರು ಹೇಗೆ ಜೀವಿಸುತ್ತಾರೆ ಎಂದು ನೋಡುವುದಾದರೆ, ಇಂದಿನ ಯುವಪೀಳಿಗೆಗೆ ಏನು ಸಂಭವಿಸುತ್ತದೆ ಎಂದು ಕಾಣಬಹುದು. ಕೊಳಕು ಮತ್ತು ದುರ್ವಾಸನೆ ಸ್ವಚ್ಛತೆಯನ್ನೂ ಸುವಾಸನೆಯನ್ನೂ ಬದಲಾಯಿಸಿದೆ. ನಿರ್ಮಲ ಸುಂದರ ಬಟ್ಟೆ ಬರೆಗಳಿಗೆ ಬದಲಾಗಿ ಕೊಳಕು ಬಟ್ಟೆಗಳು ಸ್ಥಾನ ಪಡೆದಿದೆ. ಉಡುಗೆಯಲ್ಲಿ ಒಂದು ಚಿಕ್ಕ ಕಲೆ ಆತಂಕದಾಯಕವಾಗುವ ಕಾಲ ದಾಟಿಹೋಯಿತು. ಹಳೆಯ ಜೀನ್ಸ್ ಮತ್ತು  ಹರಿದು ಶರೀರವನ್ನು ತೋರಿಸುವ ಜೀನ್ಸ್ ಬೆಲೆಬಾಳುವ ಟ್ರೌಸರ್‌ಗಳಿಗಿಂತ ಹೆಚ್ಚು ಬೆಲೆ ಬಾಳುವವುಗಳಾಗಿವೆ. ಸಮಾಜದ ಎಲ್ಲ ಜನರು ಈ ರೀತಿ ತಮ್ಮ ಹಿಂದಿನ ಸಂಪ್ರದಾಯಗಳ ಬಗ್ಗೆ ಅತೃಪ್ತಿ ಪ್ರಕಟಿಸುವುದಿಲ್ಲ. ಆದರೆ ದೇಹಕ್ಕೆ ರೋಗ ಬಾಧಿಸುವಾಗ ದೇಹದ ಎಲ್ಲ ಭಾಗಗಳಲ್ಲಿ ಹುಣ್ಣುಗಳು ಉಂಟಾಗುವುದಿಲ್ಲ. ದೇಹದಲ್ಲಿ ಒಂದೆರಡು ಕಡೆಗಳಲ್ಲಿ ವ್ರಣಗಳು ಕಾಣಿಸಿಕೊಂಡು ದೇಹವು ರೋಗಬಾಧಿತವಾಗಿರುವುದನ್ನು ಪ್ರಕಟಿಸುತ್ತದೆ. ಹೊಣೆಗೇಡಿತನ ವರ್ಧಿಸುತ್ತಾ ಹೋಗುತ್ತದೆ. ಅಶಿಸ್ತು ಮತ್ತು ಕ್ರಮಗೇಡು ಈ ಕಾಲದಲ್ಲಿ ಸಾಮಾನ್ಯವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಅಧಃಪತನದ ಚಿಹ್ನೆಗಳು ಕಾಣಿಸಿಕೊಳ್ಳುತ್ತಾ ಇವೆ.

ಭೋಗಲಾಲಸೆಯಲ್ಲಿ ಹುಮ್ಮಸ್ಸು ದೊರಕಲು ಎಲ್ಲ ಕ್ಷೇತ್ರಗಳಲ್ಲೂ ಬದಲಾವಣೆಯನ್ನು ಬಯಸುತ್ತಾ ಇದೆ. ಹಿಂದೆ ಸುಖ ನೀಡುತ್ತಿದ್ದುವು ಈಗ ನೀಡಲು ಶಕ್ಯವಾಗುವುದಿಲ್ಲ. ಧೂಮಪಾನ ಮತ್ತು

ಮದ್ಯಪಾನದಂತಹ ಪಾರಂಪರಿಕ ವ್ಯಸನಗಳು ಸಾಕಷ್ಟು ಉತ್ತೇಜನ ನೀಡುವುದಿಲ್ಲ. ನೆಮ್ಮದಿಯು ಕ್ರಮೇಣ ನಶಿಸುತ್ತಾ ಇರುವ ಸಮಾಜಕ್ಕೆ ಹೊಸ ವಸ್ತುಗಳು ಬೇಕಾಗುತ್ತವೆ. ಎಲ್ಲ ವಿಧ ದ್ರವ್ಯ ಪದಾರ್ಥಗಳು ಬಳಸಲ್ಪಡಲು ಪ್ರಾರಂಭವಾಗಿದೆ. ದ್ರವ್ಯ ವ್ಯಸನವನ್ನು ತಡೆಗಟ್ಟಲು ಮಾಡಿದ ಪ್ರಶ್ನಗಳು ವಿಫಲವಾಗಿವೆ. ದ್ರವ್ಯ ವ್ಯಸನಿಗೆ ಹೆಚ್ಚು ಹೆಚ್ಚು ಉತ್ತೇಜಕರ ಪದಾರ್ಥಗಳು ಬೇಕಾಗಿವೆ. ಇದರ ಫಲವಾಗಿ ಕ್ರಾಕ್ (Crack) ಹಾಗಿರುವ ಪ್ರಾಣಹಾರಕ ದ್ರವ್ಯಗಳೂ ಆವಿಷ್ಕರಿಸಲ್ಪಟ್ಟಿವೆ.

ಸಂಗೀತದ ಕ್ಷೇತ್ರದಲ್ಲೂ ಇಪ್ಪತ್ತನೆಯ ಶತಮಾನದ ಕೊನೆಯ ಕೆಲವು ದಶಕಗಳಲ್ಲಿ ಇಂತಹದೇ ಸ್ಥಿತಿ ಕ್ರಮೇಣ ಗೋಚರಿಸುತ್ತಾ ಇದೆ. ಕಳೆದ ಕೆಲವು ಶತಮಾನಗಳಲ್ಲಿ ಸಂಗೀತದ ಬೆಳವಣಿಗೆಯನ್ನು ಇತ್ತೀಚೆಗಿನ ಕೆಲವು ದಶಕಗಳಲ್ಲಿ ಸಂಗೀತ ಕ್ಷೇತ್ರದಲ್ಲಿ ಉಂಟಾದ ಸ್ಫೋಟಕ ಪರಿವರ್ತನೆಗಳೊಂದಿಗೆ ಹೋಲಿಸಿ ನೋಡಿದರೆ ಇದು ಸ್ಪಷ್ಟವಾಗುವುದು.

ಸಂಗೀತದ ಬಗ್ಗೆ ನನಗೆ ಹೆಚ್ಚಿಗೆ ಏನೂ ತಿಳಿದಿಲ್ಲ. ಆದುದರಿಂದ ನನ್ನ ಅಭಿಪ್ರಾಯಗಳು ಸಂಗೀತದ ಇಂದಿನ ಸ್ಥಿತಿಗೆ ಅನ್ವಯವಾಗಿದೆ ಎಂದು ತೋರುವುದಾದರೆ ಅದನ್ನು ಕ್ಷಮಿಸಬೇಕು. ಆದರೆ ನನ್ನ ಮನಸ್ಸು ನನಗೆ ಹೇಳುವುದೇನೆಂದರೆ, ಕಳೆದ ಕೆಲವು ಶತಮಾನಗಳಲ್ಲಿ ಸಂಗೀತ ಅಭಿವೃದ್ಧಿಗೊಂಡದ್ದು ಉನ್ನತವೂ ಶ್ರೇಷ್ಠವೂ ವೈಭವಶಾಲಿಯೂ ಆದ ರೂಪದಲ್ಲಾಗಿತ್ತು. ಅಂತಹ ಸಂಗೀತ ಮನಸ್ಸಿಗೂ ಹೃದಯಕ್ಕೂ ಒಟ್ಟಿಗೆ ನೆಮ್ಮದಿ ನೀಡುತ್ತಿತ್ತು. ಉತ್ತಮವಾದ ಸಂಗೀತ ಮನುಷ್ಯನ ಮನಸ್ಸು ಮತ್ತು ಆತ್ಮದ ಮರೆಯಾದ ಸಂಗೀತದೊಂದಿಗೆ ಲೀನವಾಗುತ್ತಿತ್ತು. ಸೌಹಾರ್ದ ಮತ್ತು ಶಾಂತಿಯೇ ಅಂತಿಮ ಗುರಿಯಾಗಿತ್ತು. ಸಂಗೀತವು ಅದನ್ನೇ ಮುಂದುವರಿಸುತ್ತಿತ್ತು. ಸಂಗೀತವನ್ನು ರಚಿಸಿದ ಮಹಾನ್ ವ್ಯಕ್ತಿಗಳ ಕೃತಿಗಳಲ್ಲಿ ಜ್ವಾಲಾಮುಖಿಯ ಸ್ಫೋಟಗಳು, ತೂಫಾನುಗಳು, ಸಿಡಿಲು ಗರ್ಜನೆ ಮತ್ತು ತುಮುಲ ಇದ್ದುವು. ಅವು ಬಾಹ್ಯ, ನೈಸರ್ಗಿಕ ಘಟನೆಗಳಿಗೆ ಹೋಲುತ್ತಿದ್ದುವು. ಅದರ ನೆನಪು ಜೀವಿತದ ಸ್ಮೃತಿಯಲ್ಲಿ ಸಂಗ್ರಹಿಸಲ್ಪಡಲಾಗುತ್ತಿತ್ತು. ಕೆಲವು ಸಾರಿ ಆ ಸಂಗೀತ ಎಂತಹ ಸ್ಥಿತಿಗೆ ತಲಪುತ್ತಿತ್ತೆಂದರೆ ಸಮಗ್ರ ವಿಶ್ವವೇ ಸ್ಫೋಟಗೊಳ್ಳುವ ಹಾಗೆ ಆಗುತ್ತಿತ್ತು. ಹೀಗಿದ್ದರೂ ಸಂಗೀತದ ಸುಧೆಯನ್ನು ಆಸ್ವದಿಸುತ್ತಾ ತಮ್ಮ ಸ್ನಾಯುಗಳನ್ನಾಗಲೀ ಕಣ್ಣರೆಪ್ಪೆಗಳನ್ನಾಗಲೀ ಅಲುಗಾಡಿಸದೆ ಮೌನವಾಗಿ ಕುಳಿತಿರುತ್ತಿದ್ದರು. ಕೊನೆಗೆ ಸಂಗೀತ ಮುಕ್ತಾಯವಾದಾಗ ಸಭಾ ಭವನವು ಅದನ್ನು ಮೆಚ್ಚುವ ಚಪ್ಪಾಳೆಯಿಂದ ಸ್ಫೋಟಗೊಳ್ಳುತ್ತಿತ್ತು. ಅತ್ಯಂತ ಶಕ್ತಿಶಾಲಿ ಸಂಗೀತ ಕೂಡ ಕೇಳುಗನನ್ನು ಹಿಂಸಾಚಾರಭರಿತ ವಿದ್ರೋಹಿಯಾಗಿ ಪರಿವರ್ತಿಸುತ್ತಿರಲಿಲ್ಲ. ಎಲ್ಲ ಸಂಗೀತಗಳ ಸಂದೇಶ ಮಹೋನ್ನತವೂ ಶಾಂತಿದಾಯಕವೂ ಸೌಹಾರ್ದಮಯವೂ ಆಗಿರುತ್ತಿತ್ತು. ಮನುಷ್ಯನಲ್ಲಿರುವ ಒಳಿತನ್ನು ಅದು ಹೊರಗೆ ತಂದು ಕೆಡುಕನ್ನು ಹೊರಗಟ್ಟುತ್ತಿತ್ತು.

ಆದರೆ ಅಕಟಾ! ನಾವು ಕಳೆದ ಕೆಲವು ದಶಕಗಳಲ್ಲಿ ಬೇರೆಯೇ ಒಂದು ವಿದ್ಯಮಾನವನ್ನು ಕಾಣುತ್ತಿದ್ದೇವೆ. ಈಗಿನ ಪೀಳಿಗೆಯ ಜನರ ಕಿವಿಗಳು ಕಿವುಡಾಗುವಂತಹ ಸಂಗೀತದ ಮೂಲಕ ಜೀವಿತದ ಕೀಳು ಅಭಿಲಾಷೆಗಳು ಉತ್ತೇಜಿಸಲ್ಪಡುತ್ತವೆ. ಆತಂಕಭರಿತ ಪೀಳಿಗೆಯು ತಮ್ಮನ್ನು ಹುಚ್ಚರನ್ನಾಗಿ ಮಾಡುವ ಸಂಗೀತವನ್ನು ಮೆಚ್ಚುವಂತಾಗಿದೆ. ಸಂಗೀತವು ಎಷ್ಟು ಹಿಂಸಾತ್ಮಕವಾಗಿದೆಯೋ ಅಷ್ಟೇ ಅದು ಈಗಿನ ಪೀಳಿಗೆಗೆ ಪ್ರಿಯಕರವಾಗುತ್ತಿದೆ. ಹಿಂದಿನ ಕಾಲದ ಸಂಗೀತ ಮತ್ತು ಇಂದಿನ ಜನಪ್ರಿಯ ಸಂಗೀತದ ಬಗ್ಗೆ ಅಜ್ಞಾನದಿಂದ ನಾನು ಏನಾದರೂ ಹೇಳಿದ್ದರೆ ನನ್ನನ್ನು ಕ್ಷಮಿಸಿರಿ. ಆದರೆ ಒಂದು ವಿಷಯದ ಬಗ್ಗೆ ನಾನು ದೃಢವಾಗಿ ಹೇಳಬಲ್ಲೆ, ಹಿಂಸಾಚಾರ, ವಿದ್ರೋಹ, ಹುಚ್ಚಾಟ ಮತ್ತು ಧ್ವಂಸಕ್ರಿಯೆ ಮನುಷ್ಯನ ಶ್ರೇಷ್ಠ ಗುಣಗಳನ್ನು ಭ್ರಷ್ಟಗೊಳಿಸುತ್ತವೆ.

ಪ್ರೊಫೆಸರ್ ಬ್ಲೂಮ್ ಪಾಶ್ಚಿಮಾತ್ಯ ಸಂಗೀತದ ಬಗ್ಗೆ ತಿಳಿದವರಾಗಿದ್ದಾರೆ. ಅವರು ತನ್ನ "ದಿ ಕ್ಲೋಸಿಂಗ್ ಆಫ್ ದಿ ಅಮೇರಿಕನ್ ಮೈಂಡ್ಸ್" ಎಂಬ ಪುಸ್ತಕದಲ್ಲಿ ನನ್ನೊಂದಿಗೆ ಸಹಮತ ಹೊಂದಿದ ಅಭಿಪ್ರಾಯ ಪ್ರಕಟಿಸಿದ್ದಾರೆ. ಅವರು ಹದಿಹರೆಯದ ಜನರ ಭಾವನೆಗಳು ಕೆಡಿಸಲ್ಪಟ್ಟ ಬಗ್ಗೆ ದುಃಖಿಸುತ್ತಾರೆ. ಹದಿಹರೆಯದ ಜನರನ್ನು ರೋಕ್ ಮ್ಯೂಸಿಕ್‌ಗೆ ಆಸ್ವಾದಕರನ್ನಾಗಿ ಮಾಡಿ ಅವರನ್ನು ಮೃಗ ಸಮಾನರನ್ನಾಗಿ ಮಾಡಲಾಗಿದೆ ಎಂದು ಆರೋಪಿಸುತ್ತಾರೆ. ಈ ಬಗೆಯ ಸಂಗೀತ ಆತ್ಮಕ್ಕೆ ನೀಡುವ ಹಳಸಿದ ಆಹಾರ ಎಂದು ಅವರು ಹೇಳುತ್ತಾರೆ.

ಈಗ ರೋಗಬಾಧಿತ ಸಮಾಜವನ್ನು ಸೂಚಿಸುವ ಬೇರೆ ಅನೇಕ ಸ್ಪಷ್ಟ ಚಿಹ್ನೆಗಳು ಸಹ ಇವೆ. ಅವು ಮನುಷ್ಯನ ಜೀವಿತವನ್ನು ಹೆಚ್ಚು ಅತಂಕಭರಿತ, ನೆಮ್ಮದಿ ರಹಿತ, ತೃಪ್ತಿ ರಹಿತ, ಶಾಂತಿ ಮತ್ತು ಭದ್ರತೆ ರಹಿತವನ್ನಾಗಿ ಮಾಡುತ್ತಾ ಇವೆ. ಮನುಷ್ಯನು ಬಯಸುವನಾದರೆ ದೇವನ ಅಸ್ತಿತ್ವವನ್ನು ನಿರಾಕರಿಸಬಲ್ಲನು. ಆದರೆ ಶಕ್ತಿಶಾಲಿಯಾಗಿರುವ ಪ್ರಕೃತಿಯನ್ನು ಅವನು ನಿರಾಕರಿಸಲು ಶಕ್ತನಾಗಲಾರನು. ಅದರ ವಿರುದ್ಧ ನಡೆಸಲಾದ ಅಪರಾಧಗಳನ್ನು ಶಿಕ್ಷಿಸಲು ಅದು ಚೆನ್ನಾಗಿ ತಿಳಿದುಕೊಂಡಿರುತ್ತದೆ.

ಲೌಕಿಕ ಸಮಾಜಗಳಲ್ಲಿ ಕೆಡುಕುಗಳು ಮುದುವರಿಯುತ್ತಾ ಹೋಗುವ ಕಾರಣಗಳು ಸಮಾನವಾಗಿವೆ. ಅದರ ಬಗ್ಗೆ ಇದರ ಮೊದಲು ಸ್ವಲ್ಪ ಮಟ್ಟಿಗೆ ಚರ್ಚಿಸಲಾಗಿದೆ. ಇವುಗಳಿಗಿರುವ ಕಾರಣಗಳನ್ನು ನಾನು ಸಂಕ್ಷಿಪ್ತವಾಗಿ ಪಟ್ಟಿ ಮಾಡುತ್ತೇನೆ. ಅವು ನೆನಪಿಡಲು ಸಹಕಾರಿಯಾಗುವುವು. ಕೆಡುಕುಗಳು ಹೆಚ್ಚುತ್ತಾ ಹೋಗಲು ಕಾರಣಗಳು:

1. ನಾಸ್ತಿಕತೆಯ ಬೆಳವಣಿಗೆ.
2. ಮನುಷ್ಯನ ನಡೆವಳಿಕೆಗಳ ಬಗ್ಗೆ ಗಮನಿಸುವ ದೇವನ ಬಗ್ಗೆ ಕೇವಲ ಬಲಹೀನವಾದ ವಿಶ್ವಾಸ.
3. ಸಾಂಪ್ರದಾಯಕ ಮತ್ತು ನೈತಿಕ ಮೌಲ್ಯಗಳ ಬಗ್ಗೆ ಬಲಹೀನಗೊಳ್ಳುತ್ತಿರುವ ವಿಶ್ವಾಸ.
4. ಅಂತಿಮ ಗುರಿಯನ್ನು ಮರೆತುಬಿಟ್ಟು ಈಗ ನಡೆಯುವ ದಾರಿಯೇ ತಮ್ಮ ಗುರಿ ಎಂದು ಭಾವಿಸುವುದು.

ತಥಾಕಥಿತ 'ನಾಗರಿಕ' ಅಥವಾ 'ಅಭಿವೃದ್ಧಿ ಹೊಂದಿದ' ಸಮಾಜಗಳಲ್ಲೆಲ್ಲ ಈ ಪರಿಸ್ಥಿತಿ ಕಂಡುಬರುತ್ತಾ ಇದೆ. ನಿಧಾನವಾಗಿ ನೈತಿಕ ಮೌಲ್ಯಗಳು ಕುಸಿಯುತ್ತಾ ಹೋಗುತ್ತಿವೆ. ಅವು ಸರಕಾರದ ನಿಯಮ ನಿರ್ಮಾಪಕ ಮತ್ತು ಕಾರ್ಯ ಪ್ರವೃತ್ತ ಕ್ಷೇತ್ರಗಳನ್ನು ಬಾಧಿಸುತ್ತಾ ಇವೆ. ದೇವ ನಿರ್ಮಿತ ನಿಯಮಗಳು ಅಂಗೀಕರಿಸಲ್ಪಡಲು

ಇಲ್ಲದಿರುವಾಗ ನೈತಿಕ ಮೌಲ್ಯಗಳು ಮತ್ತು ಭವ್ಯ ಸಂಪ್ರದಾಯಗಳು ಪ್ರಶ್ನಿಸಲ್ಪಡುತ್ತವೆ. ಪ್ರತಿ ದಿನ ಅವುಗಳಿಗೆ ಭಂಗ ಉಂಟಾಗುತ್ತದೆ ಮತ್ತು ನಡತೆಯನ್ನು ಶಿಸ್ತಿಗೊಳಪಡಿಸುವ ನಿಯಮಗಳು ಸಹ ಹಗುರವಾಗಿರುತ್ತವೆ ಹಾಗೂ ಜನರ ಮನೋಭಾವಕ್ಕೆ ಅನುಸಾರವಾಗಿರುತ್ತವೆ. ನೈತಿಕ ನಡತೆಯ ಬಗ್ಗೆ ನಿಯಮಗಳನ್ನು ರಚಿಸಲು ರೂಪಿಸಿದ ವೇದಿಕೆಯೇ ನೆಲೆ ತಪ್ಪಿ ಹೋಗತೊಡಗುತ್ತದೆ.

ಕಳೆದ ಕೆಲವು ಶತಮಾನಗಳಲ್ಲಿ ರೂಪಿಸಲಾದ ನಿಯಮಗಳನ್ನು ಅಧ್ಯಯನ ಮಾಡಿದರೆ ಹಿಂದಿನ ನಿಯಮಗಳಿಗೂ ಇಂದಿನ ನಿಯಮಗಳಿಗೂ ಇರುವ ವ್ಯತ್ಯಾಸ ತಿಳಿಯಬಹುದು. ಓಸ್ಕರ್ ವೈಲ್ಡೆ (Oscar Wilde) ಜೀವಿಸಿದ್ದ ಕಾಲದಲ್ಲಿ ಸ್ವವರ್ಗ ರತಿ ನಿಷಿದ್ಧವಾಗಿತ್ತು. ಆ ಅಪರಾಧಕ್ಕೆ ನಿರ್ದಯವಾಗಿ ಶಿಕ್ಷೆ ನೀಡಲಾಗುತ್ತಿತ್ತು. ಆ ಕಾಲ ದಾಟಿ ಹೋಗಿದೆ. ಚಾರಿತ್ರ್ಯವು ಒಂದು ಸದ್ಗುಣ ಮಾತ್ರವಲ್ಲ ಅದೊಂದು ಸಾಮಾಜಿಕ ವಿಶ್ವಸ್ತ ನಿಧಿಯಾಗಿತ್ತು. ಅದಕ್ಕೆ ಭಂಗ ಉಂಟಾದರೆ ಅದು ಪ್ರಶ್ನಿಸಲ್ಪಡಲಾಗುತ್ತಿತ್ತು. ಅಂತಹ ದಿನಗಳು ದಾಟಿ ಹೋಗಿವೆ. ಅಪರಾಧಗಳ ಬಗ್ಗೆ ಮೃದುತ್ವವು ಅಪಾಯಕರವೆಂದು ಈಗ ಗಣಿಸಲಾಗುತ್ತಿಲ್ಲ. ಅದೇ ಈಗಿನ ಸಮಸ್ಯೆಯಾಗಿದೆ.

ಅಪರಾಧದ ನಿರೂಪಣೆಯೇ ಮೂಲಭೂತವಾಗಿ ಬದಲಾವಣೆ ಹೊಂದುತ್ತಿದೆ. ನಿನ್ನೆ ಅಪರಾಧವೆಂದು ಗಣಿಸಲ್ಪಡುತ್ತಿದ್ದದ್ದು ಇಂದು ಅಪರಾಧವಾಗಿ ಗಣಿಸಲ್ಪಡುತ್ತಾ ಇಲ್ಲ. ನಾಚಿಕೆಯಿಂದ ಅಥವಾ ನಿಂದನೆಯ ಭಯದಿಂದ ಅಡಗಿಸಿಡುತ್ತಿದ್ದುದು ಈಗ ಬಹಿರಂಗವಾಗಿ ಬಹಳ ಹೆಮ್ಮೆಯಿಂದ ಪ್ರದರ್ಶಿಸಲ್ಪಡುತ್ತಾ ಇದೆ. ಈನ ಸಿದ್ಧಾಂತವು ಸರಿಯಾದುದೂ ಬಾಳಿಕೆ ಬರುವಂತಹದೂ ಆಗಿದ್ದರೆ ಎಲ್ಲ ಧರ್ಮಗಳು ಮತ್ತು ನೈತಿಕ ತತ್ವಗಳು ಅಪ್ರಯೋಗಿಕವೂ ಅನಾವಶ್ಯಕವೂ ಆಗುವುವು. ಅವು ಈ ಕಾಲಘಟ್ಟದ ಆವಶ್ಯಕತೆಗಳನ್ನು ಈಡೇರಿಸಲಾರವು ಎಂದು ಗಣಿಸಲ್ಪಡುವುದು.

ಜೀವಂತ ಮತ್ತು ನಿರ್ಜೀವ ಪ್ರಪಂಚದಲ್ಲಿ ಸಾರ್ವತ್ರಿಕವಾದ ಅತ್ಯಂತ ಬಲಶಾಲಿಯಾದ ಅಪರಾಧ ಮತ್ತು ಶಿಕ್ಷೆಯ ತತ್ವ ಹಾಗೂ ಒಳಿತು ಮತ್ತು ಅದಕ್ಕೆ ಬಹುಮಾನ ನೀಡುವಿಕೆಯ ತತ್ವ ಪ್ರಕೃತಿಯ ಪ್ರೇರಣೆಯ ಶಕ್ತಿಯಾಗಿ ವರ್ತಿಸುತ್ತದೆ. ನಿರ್ಜೀವ ಪ್ರಪಂಚದಲ್ಲಿ ಪ್ರಾಯೋಗಿಕವಾಗಿ ಮತ್ತು ಅಜ್ಞಾತ ರೀತಿಯ ಈ ತತ್ವ ಕಾರ್ಯ ನಿರ್ವಹಿಸುತ್ತದೆ. ಪ್ರಾಣಿ ಜಗತ್ತಿನಲ್ಲಿ ಮನುಷ್ಯನ ಸೃಷ್ಟಿಗೆ ಮೊದಲಿನ ಜೀವ ವಿಕಾಸವು ಈ ತತ್ವಗಳಿಗೆ ಅನುಸಾರವಾಗಿತ್ತು. ಜೀವ ವಿಕಾಸದ ಅತ್ಯಂತ ಕೆಳಮಟ್ಟದಿಂದ ಮುಂದೆ ಸಾಗುವಾಗ ಈ ಪ್ರಮಾಣವು ಕಡಿಮೆ ಪ್ರಜ್ಞಾವಸ್ಥೆಯಿಂದ ಹೆಚ್ಚಿನ ಪ್ರಜ್ಞಾವಸ್ಥೆಗೆ ಎಂದು ತೋರುತ್ತಿತ್ತು. ಜೀವ ವಿಕಾಸ ಶಾಸ್ತ್ರದ ಪ್ರಕಾರ ಇದನ್ನು ಸದೃಢರಾದವರು ಬಾಳುತ್ತಾರೆ ಎಂದು ಸೂಚಿಸಲಾಗಿದೆ. ಜೀವ ವಿಕಾಸದ ಪ್ರಕ್ರಿಯೆಯಲ್ಲಿ ಇದು ವಿಕಾಸವನ್ನು ಮುಂದೆ ಸಾಗಿಸುತ್ತಿತ್ತು.

ಜೀವ ವಿಕಾಸದ ಪ್ರಕ್ರಿಯೆ ಮನುಷ್ಯನಲ್ಲಿ ಪರಿಪೂರ್ಣವಾದಾಗ ಅವನು ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠ ಸ್ಥಾನ ಗಳಿಸಿದನು. ಅವನ ಪ್ರಜ್ಞೆಯು ಊಹಿಸಬಹುದಾದ ದಿಗಂತವನ್ನು ದಾಟಿ ಹೋಗಿದೆ. ಇಂತಹ ಸ್ಥಿತಿಯಲ್ಲಿ ಅಪರಾಧ ಮತ್ತು ಶಿಕ್ಷೆಯ ತತ್ವ ಅಪ್ರಯೋಗಿಕವಾಗುವುದಾದರೂ ಹೇಗೆ? ಮನುಷ್ಯ ಸೃಷ್ಟಿಗೆ ಯಾವುದಾದರೂ ಉನ್ನತ ಗುರಿ ಇರುವುದಾದರೆ ಅದು ಉತ್ತರದಾಯಿತ್ವವಾಗಿದೆ. ಅದಿಲ್ಲದಿದ್ದರೆ ಈ ಎಲ್ಲ ಜೀವ ವಿಕಾಸಗಳು ಅರ್ಥಶೂನ್ಯವಾಗುವುವು.

ಇಂತಹ ಸಹಜ ಸತ್ಯವನ್ನು ಅತ್ಯಂತ ಮಹಾ ಬುದ್ಧಿಶಾಲಿಗಳು ಕಂಡುಕೊಳ್ಳುವುದರಲ್ಲಿ ಸೋತು ಹೋಗುತ್ತಾರೆ ಎನ್ನುವುದು ಆಶ್ಚರ್ಯಕರವಾಗಿದೆ. ಸಾಪೇಕ್ಷ ಸಿದ್ಧಾಂತದ ರೂವಾರಿ ಆಲ್ಬರ್ಟ್ ಐನ್‌ಸ್ಟೈನ್ ಸಹ ಇಂತಹವರಾಗಿದ್ದಾರೆ. ಅವರು ಹೇಳುತ್ತಾರೆ: “ತನ್ನ ಸ್ವಂತ ಸೃಷ್ಟಿಗಳಿಗೆ ಬಹುಮಾನ ನೀಡುವ ಮತ್ತು ಶಿಕ್ಷಿಸುವ ದೇವನನ್ನು ನಾನು ಊಹಿಸಲಾರೆ – ಅವನ ಉದ್ದೇಶಗಳು ನಮ್ಮ ಹಾಗೆಯೇ ಇದ್ದು ನಮ್ಮ ಮಾನವೀಯ ಬಲಹೀನತೆಯ ಪ್ರತಿಬಿಂಬವಾಗಿರುವ ದೇವನನ್ನು. (ಆಲ್ಬರ್ಟ್ ಐನ್‌ಸ್ಟೈನ್ ಎಂಬ ಪುಸ್ತಕದಲ್ಲಿ)

ಸೃಷ್ಟಿಕರ್ತನಾದ ದೇವನಿದ್ದರೆ – ಅವನ ಅಸ್ತಿತ್ವವನ್ನು ಐನ್‌ಸ್ಟೈನ್‌ಗೆ ನಿರಾಕರಿಸಲು ಸಾಧ್ಯವಾಗಲಿಲ್ಲ – ಅವನ ಸೃಷ್ಟಿಗಳಲ್ಲಿ ಜಾರಿಯಲ್ಲಿರುವ ಎಲ್ಲ ವೈಜ್ಞಾನಿಕ ನಿಯಮಗಳು ಅವನೇ ರಚಿಸಿ ಅದನ್ನು ಅವನು ಜಾರಿಗೊಳಿಸುವವನಾಗಿದ್ದರೆ ಅವನು ತನ್ನ ಸೃಷ್ಟಿಯಲ್ಲಿ ಅಪರಾಧ ಮತ್ತು ಶಿಕ್ಷೆಯ ತತ್ವವನ್ನು ತೆಗೆದುಬಿಟ್ಟು, ತನ್ನ ಅಂತಿಮ ಉದ್ದೇಶವನ್ನು ಕೈಬಿಟ್ಟು ಜನರನ್ನು ಶಿಸ್ತುರಹಿತ ಮತ್ತು ಉತ್ತರದಾಯಿತ್ವ ಇಲ್ಲದ ಪರಿಪೂರ್ಣ ಅವ್ಯವಸ್ಥೆಯಲ್ಲಿ ಅಲೆದಾಡಲು ಬಿಡಲಾರನು.

ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿ ಐನ್‌ಸ್ಟೈನ್ ಅಭಿಪ್ರಾಯದ ಬಗ್ಗೆ ಹೇಳುವುದಾದರೆ, ಸೃಷ್ಟಿಯ ವಿಕಾಸದ ಪ್ರಕ್ರಿಯೆಯಲ್ಲಿ ಅಪರಾಧ ಮತ್ತು ಶಿಕ್ಷೆಯ ಪಾತ್ರವನ್ನು ಅವರು ಮನವರಿಕೆ ಮಾಡಿಲ್ಲ. ಮನುಷ್ಯನು ದೇವನ ಪ್ರತಿಬಿಂಬವಾಗಿರುವುದರ ಅರ್ಥವನ್ನು ಅವರು ಸಂಪೂರ್ಣ ತಪ್ಪಾಗಿ ಗ್ರಹಿಸಿರುವರು.

ಮನುಷ್ಯನನ್ನು ದೇವನ ಪ್ರತಿಬಿಂಬವಾಗಿ ಸೃಷ್ಟಿಸಿರುವುದರ ಅರ್ಥ ಮನುಷ್ಯನು ದೇವನ ಪರಿಪೂರ್ಣ ವಾದರಿ ಎಂದಲ್ಲ. ಹಾಗೇನಾದರೂ ಆಗಿದ್ದರೆ ಲೋಕವು ಭೂಲೋಕದ ಸ್ವರ್ಗಕ್ಕೆ ಮಿಗಿಲಾಗುವುದು. ಎಲ್ಲ ಮನುಷ್ಯರೂ ಪರಿಪೂರ್ಣವಾಗಿ ಪರಸ್ಪರ ಹೋಲಿಕೆ ಹೊಂದಿದವರಾಗುವರು. ಆದರೆ ಇಂತಹ ಸ್ಥಳವನ್ನು ಸ್ವರ್ಗವೆಂದು ಹೇಳಬಹುದೋ ಬೇಸರಕ್ಷೇತ್ರ ಎಂದೆನ್ನಬಹುದೋ ಎನ್ನುವುದು ಚರ್ಚಾಸ್ಪದವಾಗಿದೆ. ಏಕೆಂದರೆ ಎಲ್ಲಿ ಯಾವುದೇ ವೈವಿಧ್ಯತೆ ಇಲ್ಲವೋ ವಿವಿಧ ಸುಗಂಧ, ಬಣ್ಣ ಮತ್ತು ಶಬ್ದಗಳಿಲ್ಲವೋ ಪ್ರಶಾಂತ, ಬಣ್ಣರಹಿತ ನೀರಿನ ಹನಿಗಳ ಸಮುದ್ರದ ಹಾಗಿರುವುದೋ ಅದನ್ನು ಏನೆಂದು ವರ್ಣಿಸಬೇಕು. ಮನುಷ್ಯನನ್ನು ದೇವನ ಪ್ರತಿಬಿಂಬವಾಗಿ ಸೃಷ್ಟಿಸಲಾಗಿದೆ ಎನ್ನುವುದರ ಅರ್ಥ ಹೀಗೆ ಅಲ್ಲ.

ಮನುಷ್ಯನನ್ನು ದೇವನ ಪ್ರತಿಬಿಂಬವಾಗಿ ಸೃಷ್ಟಿಸಲಾಗಿದೆ ಎನ್ನುವುದು ಗಾಢವಾದ ವಿವೇಕ ಜ್ಞಾನಭರಿತವಾದ ಹೇಳಿಕೆಯಾಗಿದೆ. ಅದು ಮನುಷ್ಯನು ಹೊಂದಿರುವ ಸಾಮರ್ಥ್ಯದ ಬಗ್ಗೆ ಹೇಳುತ್ತದೆ. ಅದು ಮನುಷ್ಯನು ತಲಪಬೇಕಾದ ಅಂತಿಮ ಗುರಿಯ ಬಗ್ಗೆ, ಸದಾ ಪ್ರಯತ್ನಿಸಬೇಕಾದುದರ ಬಗ್ಗೆ ಹೇಳುತ್ತದೆ. ಅಂತಿಮ ಗುರಿ ಮನುಷ್ಯನು ತನ್ನ ಶಕ್ತಿಸಾಮರ್ಥ್ಯಗಳಿಗೆ ಸಾಧ್ಯವಾಗುವಷ್ಟು ದೇವನ ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನ ಮಾಡುತ್ತಾ ಇರಬೇಕು ಎಂದಾಗಿದೆ. ಅದೊಂದು ನಿಗದಿತ ಗುರಿಯಲ್ಲ. ಅದಕ್ಕೆ ತಲಪಿ ನಾನು

ದೇವನ ಪ್ರತಿಬಿಂಬ ಆದೆನು ಎಂದು ಹೆಮ್ಮೆಪಡೆಯಲಾಗದು. ದೇವನ ಗುಣಗಳು ಅಪರಿಮಿತವಾಗಿರುವ ಹಾಗೆ ಅವನ ಕಡೆಗೆ ಸಾಗುವುದು ಸಹ ಸೀಮಾತೀತವಾಗಿರುತ್ತದೆ. ಇದರಲ್ಲಿ ಪರಿಪೂರ್ಣತೆ ಗಳಿಸುವುದರ ಅರ್ಥವೇನೆಂದರೆ ಕೆಳಮಟ್ಟದಿಂದ ಮೇಲ್ಮಟ್ಟದ ಪರಿಪೂರ್ಣತೆಯ ಕಡೆಗೆ ಸಾಗುವುದು.

ದೇವನು ಅತ್ಯಂತ ಪರಿಪೂರ್ಣನೂಅತ್ಯಂತ ನ್ಯಾಯನಿಷ್ಠನೂ ಅತ್ಯಂತ ದಯಾವಂತನೂ ಅತ್ಯಂತ ಕಾರುಣ್ಯನಿಧಿಯೂ ಎಲ್ಲವನ್ನು ನೋಡುವವನೂ ಎಲ್ಲವನ್ನು ತಿಳಿದವನೂ ಸೃಷ್ಟಿಕರ್ತನೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. ಎಲ್ಲ ಸ್ತುತಿಗಳು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಸಲ್ಲುವುವು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **"ಅವನೇ ಅಲ್ಲಾಹನು ಅವನ ಹೊರತು ಬೇರೆ ಆರಾಧ್ಯನಿಲ್ಲ. ಪರೋಕ್ಷವಾದುದನ್ನೂ ಪ್ರತ್ಯಕ್ಷವಾದುದನ್ನೂ ಅವನು ತಿಳಿಯುತ್ತಾನೆ. ಅವನು ದಯಾವಂತನೂ ಕಾರುಣ್ಯನಿಧಿಯೂ ಆಗಿದ್ದಾನೆ. ಅವನೇ ಅಲ್ಲಾಹನು ಅವನ ಹೊರತು ಬೇರೆ ಆರಾಧ್ಯನಿಲ್ಲ. (ಅವನು) ಸಾರ್ವಭೌಮನೂ ಪರಮಪರಿಶುದ್ಧನೂ ಶಾಂತಿಯ ಸಾಮ್ರಾಟನೂ ಅಭಯದಾತನೂ ಸಂರಕ್ಷಕನೂ ಪ್ರತಾಪಶಾಲಿಯೂ ಒಡೆದುದನ್ನು ಜೋಡಿಸುವವನೂ ಮಹೋನ್ನತನೂ ಆಗಿದ್ದಾನೆ. ಅವರು ಕಲ್ಪಿಸುವ ಸಹಭಾಗಿತ್ವದಿಂದೆಲ್ಲ ಅವನು ಪರಿಶುದ್ಧನು. ಅವನೇ ಅಲ್ಲಾಹನು. ಅವನು ಸೃಷ್ಟಿಕರ್ತನೂ ನಿರ್ಮಾಪಕನೂ ರೂಪಕೊಡುವವನೂ ಆಗಿದ್ದಾನೆ. ಬಲುಸುಂದರವಾದ ನಾಮಗಳು ಅವನಿಗಿವೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನ ಸ್ತುತಿಕೀರ್ತನೆ ಮಾಡುತ್ತವೆ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದನೆ."** (59:23–25).

ಜಗತ್ತಿನ ಸೃಷ್ಟಿಕರ್ತನು ಮೇಲೆ ವಿವರಿಸಿದ ಗುಣಗಳನ್ನು ಹೊಂದಿದ್ದಾನೆ. ಅವನಿಗೆ ಯಾವುದೇ ಮಾನವೀಯ ಬಲಹೀನತೆಗಳಿಲ್ಲ. ಪವಿತ್ರ ಖುರ್‌ಆನ್ ಸೃಷ್ಟಿಕರ್ತನ ದೃಷ್ಟಾಂತಗಳ ಬಗ್ಗೆ ಚಿಂತಿಸಲು ಪದೇ ಪದೇ ಹೀಗೆ ಹೇಳಿದೆ:

"ಯಾರ ಕೈಯಲ್ಲಿ ಪ್ರಭುತ್ವವಿದೆಯೋ ಅವನು ಅನುಗ್ರಹಪೂರ್ಣನು. (ತಾನಿಚ್ಛಿಸುವ) ಎಲ್ಲ ಕಾರ್ಯಗಳಲ್ಲಿ ಅವನು ಸರ್ವಸಾಮರ್ಥ್ಯವಂತನಾಗಿದ್ದಾನೆ.

"ನಿಮ್ಮ ಪೈಕಿ ಕೃತ್ಯ ನಿರ್ವಹಣೆಯಲ್ಲಿ ಯಾರು ಅತ್ಯುತ್ತಮರೆಂದು ಪರೀಕ್ಷಿಸಲಿಕ್ಕೋಸ್ಕರ ಅವನು ಮರಣವನ್ನೂ ಜೀವನವನ್ನೂ ಸೃಷ್ಟಿಸಿದ್ದಾನೆ. ಅವನು ಪ್ರತಾಪವಂತನೂ ಕ್ಷಮಾಶೀಲನೂ ಆಗಿದ್ದಾನೆ.

"ಅವನು ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿರುವನು. ಪರಮದಯಾವಂತನ (ಅಲ್ಲಾಹನ) ಸೃಷ್ಟಿಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನೂ ನೀನು ಕಾಣಲಾರೆ. ನೀನು ಪುನಃ ನೋಡು ಏನಾದರೂ ಲೋಪದೋಷವಿದೆಯೇ?

"ಪುನಃ ಎರಡು ಸಲ ದೃಷ್ಟಿ ಹರಿಸಿ ನೋಡು. ದೃಷ್ಟಿ ಸೋತು, ಬಳಲಿ ನಿನ್ನೆಡೆಗೆಯೇ ಮರಳುವುದು."

(ಪವಿತ್ರ ಖುರ್‌ಆನ್ 67:2–5).

ದೇವನ ಪ್ರತಿಬಿಂಬ ಎಂದರೇನೆಂದು ಮನವರಿಕೆ ಮಾಡಿಕೊಂಡು ಜಗತ್ತಿನ ಸೃಷ್ಟಿಯನ್ನು ಮಹಾಸ್ಫೋಟದಿಂದ ಮೊದಲುಗೊಂಡು ಇಂದಿನ ತನಕ ನೋಡುವಾಗ ಪ್ರಜ್ಞಾಹೀನತೆಯಿಂದ ಪ್ರಜ್ಞಾವಸ್ಥೆಗೆ ತಲಪಿದ ಸೃಷ್ಟಿಕಾರ್ಯದ ಸಂಪೂರ್ಣ ಪ್ರಯಾಣವು ವಾಸ್ತವಿಕವಾಗಿ ದೇವನ ಪ್ರತಿಬಿಂಬವಾಗಲು ಮತ್ತು ಮನುಷ್ಯನಲ್ಲಿ ದೈವಿಕ ಗುಣಗಳನ್ನು ಸ್ಥಾಪಿಸಲಿಕ್ಕಾಗಿತ್ತು. ♦

**(ಭಾಷಾಂತರ: ಎಮ್. ಉಬೈದುಲ್ಲಾ)**

**SWORDS CAN WIN TERRITORIES**
**BUT NOT HEARTS.**
**FORCES CAN BEND HEADS**
**BUT NOT MINDS.**

**- Hazrat Mirza Tahir Ahmad, Khalifathul Masih IV**

**ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು**
**ಆದರೆ ಹೃದಯಗಳನ್ನಲ್ಲ.**
**ಬಲದಿಂದ ಶಿರಗಳನ್ನು ಬಾಗಿಸಬಹುದು**
**ಆದರೆ ಮನಸ್ಸುಗಳನ್ನಲ್ಲ.**

**– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫ**

# ದೈವಾಸ್ತಿತ್ವದ ಸಾಕ್ಷ್ಯಗಳು

◆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಪ್ರಪ್ರಥಮದಾಗಿ, ವಿವೇಕ ಮಾರ್ಗ ಮೂಲಕ ಪವಿತ್ರ ಖುರ್‌ಆನ್ ದೇವ ಸತ್ತೆಯನ್ನು ರುಜುಪಡಿಸಲು ಪ್ರಬಲವಾದ ಹಲವು ವಿಚಾರಗಳನ್ನು ಹೇಗೆ ತೋರಿಸಿಕೊಟ್ಟಿದೆಯೆಂದು ನೋಡಿರಿ. ಒಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

رَبُّنَا الَّذِيٓ أَعْطٰى كُلَّ شَيْءٍ خَلْقَهُ ثُمَّ هَدٰى

ನಮ್ಮ ದೇವನು ಪ್ರತಿಯೊಂದು ವಸ್ತುವಿಗೂ ಅದರ ಪ್ರಕೃತಿಗನುಸಾರವಾದ ಸೃಷ್ಟಿಯನ್ನು ಪ್ರದಾನ ಮಾಡಿ, ಅನಂತರ ಅದರ ನಿರ್ದಿಷ್ಟ ಪರಿಪೂರ್ಣತೆಯನ್ನು ಪಡೆಯಲು ಮಾರ್ಗದರ್ಶನ ನೀಡಿದವನಾಗಿದ್ದಾನೆ.(20:51).

ಮನುಷ್ಯ ಸಹಿತ ನೆಲ, ಜಲ ಮತ್ತು ವಾಯು ಮಂಡಲದಲ್ಲಿರುವ ಎಲ್ಲ ಜೀವಿಗಳ ಶರೀರ ರಚನೆಯನ್ನು ಪರಿಶೀಲಿಸಿ ಅವುಗಳ ಸ್ವಭಾವದ ಕುರಿತು ಚಿಂತಿಸುವುದಾದರೆ ಎಲ್ಲವೂ ಅವುಗಳ ಪ್ರಕೃತಿಗೆ ಅನುಯೋಜ್ಯವಾದ ರೀತಿಯಲ್ಲಿ ಸೃಷ್ಟಿಸಲ್ಪಟ್ಟಿವೆಯೆಂಬ ದೇವನ ಅದ್ಭುತಕರವಾದ ಸೃಷ್ಟಿ ಸಾಮರ್ಥ್ಯವನ್ನು ಕಾಣಬಹುದು. ಈ ವಿಷಯ ಪ್ರತಿಯೊಬ್ಬನೂ ಸಾಕಷ್ಟು ಚಿಂತಿಸಿ ನೋಡುವಷ್ಟು ವಿಪುಲತರದ್ದಾಗಿದೆ.

ದೇವಾಸ್ತಿತ್ವವನ್ನು ಸಮರ್ಥಿಸಲು ಪವಿತ್ರ ಖುರ್‌ಆನ್ ತೋರಿಸುವ ಇನ್ನೊಂದು ಪುರಾವೆ, ಅವನು ಕಾರಣಕರ್ತ ಅಥವಾ ಆದಿಕಾರಣನೆಂದಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَأَنَّ إِلٰى رَبِّكَ الْمُنْتَهٰى

ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ. (53:43).

ಈ ಬ್ರಹ್ಮಾಂಡದಲ್ಲಿ ಗೋಚರ – ಅಗೋಚರಗಳಾದ ಎಲ್ಲವೂ ಕಾರ್ಯಕಾರಣ ವ್ಯವಸ್ಥೆಯಿಂದ ಕೂಡಿಕೊಂಡಿವೆಯೆಂಬ ವಿಚಾರ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕಾಣಬಹುದಾಗಿದೆ. ಈ ವ್ಯವಸ್ಥೆಯ ಸಾರ್ವತ್ರಿಕವಾದ ಪ್ರವರ್ತನೆಯೇ ನಾವು ಕಾಣುವ ವಿವಿಧ ವೈಜ್ಞಾನಿಕ ಹಾಗೂ ತತ್ವಜ್ಞಾನಗಳ ಸೃಷ್ಟಿಗೂ ಬೆಳವಣಿಗೆಗೂ ಕಾರಣವಾಗಿದೆ. ಸೃಷ್ಟಿಲೋಕದ ಯಾವ ಅಂಶವೂ ಈ ಕಾರ್ಯಕಾರಣ ಸಂಬಂಧದ ವ್ಯವಸ್ಥೆಯಿಂದ ಹೊರತಲ್ಲ. ಕೆಲವು, ಬೇರೆ ಕೆಲವಕ್ಕೆ ಮೂಲಕಾರಣವಾಗಿಯೂ ಕೆಲವು, ಶಾಖೆಗಳಾಗಿಯೂ ಇರುತ್ತವೆ. ಆದಿಕಾರಣದ ಹೊರತು ಪ್ರತಿಯೊಂದು ಕಾರ್ಯವೂ ಮತ್ತೊಂದು ಕಾರಣವನ್ನು ಅವಲಂಬಿಸಿದೆ. ಆ ಕಾರಣವು ಇನ್ನೊಂದು ಕಾರ್ಯದ ಪರಿಣಾಮವಾಗಿದೆ. ಹೀಗೆ ಈ ಕಾರ್ಯಕಾರಣ ಸರಣಿ ಹಿಂದಕ್ಕೆ ಹೋಗುತ್ತಲಿರುತ್ತದೆ. ಆದರೆ ಅನಂತವಲ್ಲದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಈ ಕಾರ್ಯಕಾರಣ ಸರಣಿ ಅನಂತವಾಗಿರಲು ಅಸಾಧ್ಯವಾದುದರಿಂದ ಅದು ಎಲ್ಲಿಯಾದರೂ ಒಂದು ಕಡೆ ಕೊನೆಗೊಳ್ಳಲೇಬೇಕಾಗಿದೆ. ಹೀಗೆ ಅತ್ಯಂತ ಕೊನೆಯ ಆ ಕಾರಣ ಪ್ರಪಂಚಕರ್ತನಾಗಿದ್ದಾನೆ. "ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ" ಎಂಬ ಪ್ರಸ್ತುತ ದೇವವಾಕ್ಯ ಈ ಅಂತಿಮ ಕಾರಣದೆಡೆಗೆ ಅಥವಾ ಆದಿಕಾರಣದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ.

ದೇವನ ಅಸ್ತಿತ್ವವನ್ನು ಸಾಬೀತುಪಡಿಸಲು ಪವಿತ್ರ ಖುರ್‌ಆನ್ ತೋರಿಸುವ ಮತ್ತೊಂದು ಪುರಾವೆ ಇದಾಗಿದೆ:

لَا الشَّمْسُ يَنْبَغِي لَهَآ أَنْ تُدْرِكَ الْقَمَرَ وَلَا الَّيْلُ سَابِقُ النَّهَارِ وَكُلٌّ فِي فَلَكٍ يَسْبَحُونَ

ಸೂರ್ಯನಿಗೆ ಚಂದ್ರನ ಜೊತೆಗೆ ಸೇರಲು ಸಾಧ್ಯವಿಲ್ಲ. ರಾತ್ರಿಗೆ ಹಗಲನ್ನು ಹಿಡಿದಿಡಲು ಸಾಧ್ಯವಿಲ್ಲ. ಎಲ್ಲವೂ ಅವುಗಳ ನಿರ್ದಿಷ್ಟ ಪಥಗಳಲ್ಲಿಯೇ ಸಂಚರಿಸುತ್ತವೆ. (36:41).

ಈ ಆಕಾಶಕಾಯಗಳಲ್ಲಿ ಯಾವುದೂ ಅದರ ಸಂಚಾರ ಪಥವನ್ನು ವ್ಯತಿಕ್ರಮಿಸುವುದಿಲ್ಲ. ಅವುಗಳಿಗೆ ಒಬ್ಬ ನಿಯಂತ್ರಕ ಅಥವಾ ನಿಯಾಮಕನಿಲ್ಲದಿರುತ್ತಿದ್ದರೆ ಅವು ನಾನಾ ವಿಧಗಳಲ್ಲಿ ಚಲಿಸಿ ಕ್ಷಣಮಾತ್ರದಲ್ಲಿ ನಾಶಗೊಳ್ಳುತ್ತಿದ್ದುವು. ಪ್ರಕೃತಿ ನಿಯಮಗಳ ಕುರಿತು ಗಾಢವಾಗಿ ಚಿಂತಿಸುವವರಿಗೆ ಈ ಪುರಾವೆ ಬಹಳ ಪ್ರಯೋಜನಕಾರಿಯಾಗಿದೆ. ಆಕಾಶದಲ್ಲಿ ಚಲಿಸುತ್ತಿರುವ ಅಸಂಖ್ಯಾತ ಗೋಳಗಳಿಗೆ ತುಸು ಮಾತ್ರವಾದರೂ ಗತಿ ವ್ಯತ್ಯಾಸವುಂಟಾದರೆ ಇಡೀ ಬ್ರಹ್ಮಾಂಡವೇ ನಾಶಹೊಂದುವುದು. ಈ ಆಕಾಶಕಾಯಗಳು ಪರಸ್ಪರ ಡಿಕ್ಕಿ ಹೊಡೆಯದೆಯೂ ಅವುಗಳ ಚಲನೆಯಲ್ಲಿ ಏನೂ ವ್ಯತ್ಯಾಸವಾಗದೆಯೂ ನಿರಂತರವಾದ ಚಲನೆಯಿಂದಾಗಿ ತೇವಮಾನವುಂಟಾಗದೆಯೂ ಅಥವಾ ಅವುಗಳಿಗೆ ತೇಮಾನವುಂಟಾಗದೆಯೂ ಸಂಚರಿಸಿಕೊಂಡಿರುವುದು ಎಷ್ಟು ಅದ್ಭುತಕರವಾಗಿದೆ! ಅತ್ಯಂತ ವಿಪುಲವಾದ ಈ ಉಜ್ವಲ ಕಾರ್ಖಾನೆ ಸರ್ವಸಮರ್ಥನಾದ ಒಬ್ಬ ಸೂತ್ರಧಾರನ ನಿಯಂತ್ರಣಕ್ಕೆ ಅಧೀನವಾಗಿರದಿದ್ದರೆ ಅಸಂಖ್ಯಾತ ವರ್ಷಗಳಿಂದ ಯಾವುದೇ ನ್ಯೂನತೆಯಿಲ್ಲದೆ ಹೇಗೆ ಸ್ವಯಂ ಚಲಿಸಲು ಸಾಧ್ಯ? ಈ ಪರಿಪೂರ್ಣವಾದ ದೇವಶಕ್ತಿ ಮತ್ತು ಜ್ಞಾನವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

أَفِي اللّٰهِ شَكٌّ فَاطِرِ السَّمٰوٰتِ وَالْأَرْضِ

ಹೀಗಿರುವಾಗ ಆಕಾಶಮಂಡಲವನ್ನೂ ಭೂಮಿಯನ್ನೂ ಸೃಷ್ಟಿಸಿದ ದೇವನ ಸತ್ತೆಯಲ್ಲಿ ಏನಾದರೂ ಸಂಶಯವಿದೆಯೇ? (14:11).

ಸೃಷ್ಟಿಕರ್ತನ ಅಸ್ತಿತ್ವವನ್ನು ಸಾಬೀತುಪಡಿಸಲು ಪವಿತ್ರ ಖುರ್‌ಆನ್ ತೋರಿಸುವ ಬೇರೊಂದು ಪುರಾವೆ ಇದಾಗಿದೆ:

كُلُّ مَنْ عَلَيْهَا فَانٍ وَيَبْقٰى وَجْهُ رَبِّكَ ذُو الْجَلٰلِ وَالْإِكْرَامِ

ಸರ್ವ ವಸ್ತುಗಳೂ ನಶ್ವರ; ಪ್ರತಾಪವಂತನೂ ಮಹಾಮಹಿಮನೂ ಆದ ನಿನ್ನ ಪ್ರಭು ಮಾತ್ರ ಶಾಶ್ವತನಾಗಿರುವನು. (55:27,28).

ಈ ಭೂಮಿಯಿಡೀ ಛಿದ್ರ ಛಿದ್ರವಾಗಿ, ಆಕಾಶಕಾಯಗಳೆಲ್ಲ

ನಾಶವಾಗಿ ಸಂಪೂರ್ಣ ಪ್ರಪಂಚವೇ ಶೂನ್ಯವಾಗುವುದೆಂದು ಭಾವಿಸೋಣ. ಆದರೂ ಎಂದೆಂದಿಗೂ ಅನಶ್ವರವೂ ಅಕ್ಷಯವೂ ಅಭೇದವೂ ಆದ ಯಾವುದೋ ಒಂದು ಶಕ್ತಿ ಯಥಾಸ್ಥಿತಿಯಲ್ಲಿ ನಂತರವೂ ಬಾಕಿಯಾಗಬೇಕೆಂದು ನಮ್ಮ ವಿವೇಕವೂ ಮನಃಸಾಕ್ಷಿಯೂ ಹೇಳುತ್ತದೆ. ಅಂತಹ ಆ ಶಕ್ತಿಯೇ ಸರ್ವ ನಶ್ವರ ವಸ್ತುಗಳನ್ನು ನಾಸ್ತಿಯಿಂದ ಸೃಷ್ಟಿಸಿದ ದೇವನು. 'ನಾಶ'ವು ಅವನಿಗೆ ಅಧೀನವಾಗಿರುವುದರಿಂದ ಅವನು ನಾಶದಿಂದ ಸುರಕ್ಷಿತನಾಗಿದ್ದಾನೆ.

ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ದೇವನ ಅಸ್ತಿತ್ವದ ಕುರಿತು ನುಡಿಯುವುದು ಈ ರೀತಿಯಾಗಿದೆ:

أَلَسْتُ بِرَبِّكُمْ قَالُوا بَلَىٰ

ಸರ್ವಶಕ್ತನಾದ ದೇವನು ಆತ್ಮಗಳೊಡನೆ 'ನಿಮ್ಮ ಸೃಷ್ಟಿಕರ್ತನೂ ರಕ್ಷಕನೂ ಪಾಲಕನೂ ನಾನಲ್ಲವೇ?' ಎಂದು ಕೇಳಿದಾಗ, 'ಹೌದು ಖಂಡಿತವಾಗಿಯೂ' ಎಂದು ಅವು ಹೇಳಿದವು. (7:173).

ಈ ವಾಕ್ಯದಲ್ಲಿ ದೇವನು ಸಂಭಾಷಣೆಯ ರೂಪದಲ್ಲಿ, ಆತ್ಮಗಳಲ್ಲಿ ಅವನು ನಿಕ್ಷೇಪಿಸಿಟ್ಟಿರುವ ಒಂದು ವಿಶಿಷ್ಟ ಸ್ವಭಾವವನ್ನು, ಅಂದರೆ ಯಾವ ಆತ್ಮವೂ ಸ್ವಾಭಾವಿಕವಾಗಿ ದೇವನ ಅಸ್ತಿತ್ವವನ್ನು ಅಲ್ಲಗಳೆಯಲು ಶಕ್ತವಲ್ಲ ಎಂಬ ಸಂಗತಿಯನ್ನು ವಿವರಿಸಿಕೊಟ್ಟಿದ್ದಾನೆ. ನಾಸ್ತಿಕರು ದೇವನ ಸತ್ತೆಯನ್ನು ನಿರಾಕರಿಸುವುದು ಅವರ ಸ್ವಭಾವ ಅವರನ್ನು ಅದರೆಡೆಗೆ ಪ್ರೇರೇಪಿಸುವುದರಿಂದಲ್ಲ; ಬದಲಾಗಿ, ದೇವನಿದ್ದಾನೆಂಬುದಕ್ಕೆ ಅವರು ಭಾವಿಸುವ ರೀತಿಯಲ್ಲಿ ಅವರಿಗೆ ರುಜುವಾತೇನೂ ಲಭಿಸದ ಕಾರಣದಿಂದಾಗಿದೆ. ದೇವನನ್ನು ಅಲ್ಲಗಳೆಯುವುದರೊಂದಿಗೆಯೇ ಅವರು ಪ್ರತಿಯೊಂದು ಕಾರ್ಯಕ್ಕೂ ಪ್ರತ್ಯೇಕ ಪ್ರತ್ಯೇಕ ಕಾರಣವುಂಟೆಂದು ನಂಬುತ್ತಾರೆ. ಶರೀರಕ್ಕೆ ರೋಗ ತಗಲುವುದಾದರೆ ಅದಕ್ಕೆ ಏನೋ ಕಾರಣವಿರಬೇಕೆಂಬುದನ್ನು ನಿರಾಕರಿಸುವಷ್ಟರ ಮಟ್ಟಿಗಿನ ಬುದ್ಧಿಶೂನ್ಯರು ಲೋಕದಲ್ಲಿರಬಹುದೆಂದು ತೋರುವುದಿಲ್ಲ. ಈ ಪ್ರಪಂಚದಲ್ಲಿ ನಡೆಯುತ್ತಿರುವ ಪ್ರತಿಯೊಂದು ಸಂಭವಕ್ಕೆ ಒಂದು ಪ್ರತ್ಯೇಕ ಕಾರಣವಿಲ್ಲವೆಂದಾದರೆ ಭೂಕಂಪ, ಬಿರುಗಾಳಿ, ಗ್ರಹಣ, ಸಾಂಕ್ರಾಮಿಕ ರೋಗಗಳ ಹಬ್ಬುವಿಕೆ ಇತ್ಯಾದಿ ಘಟನೆಗಳಿಗೆ ಸಂಬಂಧಿಸಿ ಮುಂಚಿತವಾಗಿ ಲೆಕ್ಕಹಾಕುವಿಕೆ ಹಾಗೂ ದಿನಂಪ್ರತಿ ನಡೆಯುತ್ತಿರುವ ಇನ್ನೂ ಹಲವು ಸಂಗತಿಗಳ ಕುರಿತು ನೀಡುವ ಮುನ್ಸೂಚನೆಗಳು ಅಸಾಧ್ಯವೆಂದಾಗುತ್ತದೆ. ಒಟ್ಟಾರೆ, ಒಬ್ಬ ಅನ್ವೇಷಕನು ದೇವನ ಅಸ್ತಿತ್ವವನ್ನು ಒಪ್ಪದೇ ಇದ್ದರೂ ಕಾರ್ಯಕಾರಣ ವ್ಯವಸ್ಥೆಯನ್ನು ನಿರಾಕರಿಸಲು ಆತನಿಗೆ ಸಾಧ್ಯವಿಲ್ಲವಾದುದರಿಂದ ಆದಿಕಾರಣ ಸತ್ತೆಯನ್ನು ಅಲ್ಲಗಳೆಯಲಿಕ್ಕೂ ಆತನು ಶಕ್ತನಲ್ಲ. ಇದು ಒಂದು ರೀತಿಯಲ್ಲಿ ದೇವನ ಅಸ್ತಿತ್ವವನ್ನು ಪರೋಕ್ಷವಾಗಿ ಅಂಗೀಕರಿಸಿದಂತೆಯೇ. ಆದರೆ ಅದು ಪೂರ್ಣವಾದ ಅಂಗೀಕಾರವಲ್ಲ. ದೇವನ ಅಸ್ತಿತ್ವವನ್ನು ಅಲ್ಲಗಳೆಯುವ ಒಬ್ಬ ನಾಸ್ತಿಕನನ್ನು ಈ ಪ್ರಾಪಂಚಿಕ ಭೋಗೇಚ್ಛೆಗಳ ಕುರಿತು ತಿಳಿದುಕೊಳ್ಳದಂತೆ ಪ್ರಜ್ಞಾಹೀನನನ್ನಾಗಿ ಮಾಡಿ ಒಂದು ಪರಮ ಶಕ್ತಿಯ ಆಜ್ಞೆಗೆ ವಿಧೇಯನನ್ನಾಗಿ ಮಾಡಿದರೆ ಆ ಸ್ಥಿತಿಯಲ್ಲಿ ಅವನು ದೇವಾಸ್ತಿತ್ವವನ್ನು ಒಪ್ಪುವನೆಂಬುದಕ್ಕೆ ಹಲವರ ಅನುಭವ ದೃಷ್ಟಾಂತಗಳಿವೆ. ಮೇಲಿನ ಪವಿತ್ರ ಖುರ್‌ಆನ್ ವಚನ ಅಂತಹ ಒಂದು ಸ್ಥಿತಿಯ ಕುರಿತು ಸೂಚಿಸಿದೆ. ಎಂದರೆ, ಮನುಷ್ಯನ ಮೇಲಿನ ಪ್ರಾಪಂಚಿಕ ಭೋಗೇಚ್ಛೆಗಳು ಬಲಗೊಳ್ಳುತ್ತಿರುವಾಗ ಮಾತ್ರ ದೇವನ ಸತ್ತೆಯನ್ನು ನಿರಾಕರಿಸುವ ಬುದ್ಧಿ ತೋರುವುದೆಂದೂ ಪರಿಶುದ್ಧವಾದ ಮನುಷ್ಯ ಪ್ರಕೃತಿಯಾದರೋ ದೈವಿಕ ವಿಚಾರದಿಂದ ಕೂಡಿಕೊಂಡಿದೆಯೆಂದೂ ಆ ವಾಕ್ಯ ತಿಳಿಸಿಕೊಡುತ್ತದೆ.

## ದೇವನ ಮಹಾತ್ಮೆ

ದೇವನ ಅಸ್ತಿತ್ವವನ್ನು ರುಜುವಾತುಪಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ತೋರಿಸಿದ ಪುರಾವೆಗಳಲ್ಲಿ ಕೆಲವನ್ನು ಮೇಲೆ ವಿವರಿಸಲಾಗಿದೆ. ಇನ್ನು, ಆ ಪವಿತ್ರ ಗ್ರಂಥ ಯಾವ ದೇವನೆಡೆಗೆ ನಮ್ಮನ್ನು ಕರೆಯುತ್ತದೋ ಅವನಿಗಿರುವುದೆಂದು ಅದು ಹೇಳುವ ಮಹತ್ವಗಳೂ ಗುಣವಿಶೇಷಗಳೂ ಯಾವುವೆಂದು ನೋಡೋಣ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

هُوَ اللَّهُ الَّذِي لَا إِلَٰهَ إِلَّا هُوَ عَالِمُ الْغَيْبِ وَالشَّهَادَةِ هُوَ الرَّحْمَٰنُ الرَّحِيمُ

ಆರಾಧನೆಗೂ ಅನುಸರಣೆಗೂ ಅರ್ಹನಾಗಿರುವ, ಭಾಗೀದಾರನಿಲ್ಲದ ಏಕನಾಗಿರುವವನೇ ದೇವನು. (59:23).

ಈ ವಚನದಲ್ಲಿ ದೇವನಿಗೆ ಭಾಗೀದಾರನಿಲ್ಲವೆಂದು ಹೇಳಿರುವುದೇಕೆಂದರೆ, ಅವನು ನಿಸ್ತುಲನೂ ಏಕನೂ ಅಲ್ಲವೆಂದಾದರೆ ಅವನ ಶಕ್ತಿ ಒಂದೊಮ್ಮೆ ಭಾಗೀದಾರನಿಗೆ ಅಧೀನವಾಗಿ ಅವನ ದೇವತ್ವ ನಷ್ಟಹೊಂದಲು ಹೇತುವಾಗುವುದು. ಮಾತ್ರವಲ್ಲ, ಅವನ ಹೊರತು ಆರಾಧನೆಗರ್ಹನು ಇನ್ನ್ಯಾರೂ ಇಲ್ಲವೆಂದು ಹೇಳಿರುವುದು ಅವನು ಸಕಲ ಗುಣ ಸಂಪೂರ್ಣನೆಂದು ಸ್ಪಷ್ಟೀಕರಿಸಲಿಕ್ಕಾಗಿದೆ. ಗುಣ ವೈಶಿಷ್ಟ್ಯಗಳ ಧಾರಾಳತ್ವವನ್ನು ಆಧಾರವಾಗಿರಿಸಿ ಸೃಷ್ಟಿಗಳಲ್ಲಿ ಒಂದನ್ನು ದೇವನೆಂದು ಆರಿಸಲು ಭಾವಿಸುವುದಾದರೆ, ದೇವನಿಗಿರಬೇಕಾದ ಪರಮ ಶ್ರೇಷ್ಠ ಗುಣಗಳು ಆ ಸೃಷ್ಟಿಯಲ್ಲಿವೆಯೆಂದು ಊಹಿಸುವುದಾದರೆ, ಅದೆಂದಿಗೂ ಸಕಲ ಶ್ರೇಷ್ಠ ಗುಣಗಳಿಂದಲೂ ವಿಶೇಷಣಗಳಿಂದಲೂ ವಿಭೂಷಿತನಾಗಿರುವ, ಸ್ವಯಂ ಪರಿಪೂರ್ಣನೂ ಅತ್ಯುನ್ನತನೂ ಆಗಿರುವ ನಿಜವಾದ ದೇವನಿಗೆ ಸಮಾನವಾಗಿರಲಾರದು. ಸೃಷ್ಟಿಕರ್ತನಿಗೆ ಮಾತ್ರ ಸಲ್ಲಿಸಲ್ಪಡಬೇಕಾದ ಆರಾಧನಾದಿ ಭಕ್ತಿಶ್ರದ್ಧೆಗಳಿಗೆ ಸೃಷ್ಟಿಗಳಲ್ಲಿ ಯಾರನ್ನಾದರೂ ಪಾಲುಗಾರನನ್ನಾಗಿ ಮಾಡುವುದು ಬಹುದೊಡ್ಡ ಅನ್ಯಾಯವಾಗಿದೆ.

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದಲ್ಲಿ ದೇವನನ್ನು **"ಆಲಿಮುಲ್ ಗೈಬ್"** ಎಂದು ಹೇಳಲಾಗಿದೆ. ಅಂದರೆ, ಅವನು "ತನ್ನ ತತ್ವವನ್ನು ತಾನು ಮಾತ್ರ ತಿಳಿಯುವ ಅಂತರ್ಯಾಮಿ" ಆಗಿದ್ದಾನೆ. ಅವನ ತತ್ವವನ್ನು ಪರಿಮಿತವಾದ ಮನುಷ್ಯ ಶಕ್ತಿಗೆ ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ. ಸೂರ್ಯ, ಚಂದ್ರ ಮತ್ತಿತರ ದೇವಸೃಷ್ಟಿಗಳ ಸ್ವರೂಪವನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಿದೆ. ಆದರೆ ಸೃಷ್ಟಿಕರ್ತನಾದ ದೇವನ ಸತ್ತೆಯನ್ನು ಸಮಗ್ರವಾಗಿ ಗ್ರಹಿಸಲಿಕ್ಕೆ ಸಾಧ್ಯವಿಲ್ಲ.

ಮೇಲಿನ ವಾಕ್ಯದಲ್ಲಿ ದೇವನನ್ನು **"ಆಲಿಮುಶ್ಶಹಾದತ್"** ಎಂದು ಸಹ ಹೇಳಲಾಗಿದೆ. ಅಂದರೆ "ತನಗೆ ಯಾವುದೂ ಗೋಪ್ಯವಾಗಿರದೆ ಸಕಲವನ್ನೂ ಸ್ಪಷ್ಟವಾಗಿ ತಿಳಿಯುವವನು." ಅವನು ಸೃಷ್ಟಿಸಿದ ವಸ್ತುಗಳಲ್ಲಿ ಯಾವುದೇ ವಸ್ತುವಿನ ಬಗ್ಗೆ ಅವನು ಪರಿಪೂರ್ಣವಾಗಿ ತಿಳಿಯದಿರುವುದು ಅವನ ದೇವತ್ವಕ್ಕೆ ಅನುಯೋಜ್ಯವಲ್ಲ. ಅವನು

ಪ್ರಪಂಚದ ಕಣ ಕಣಗಳನ್ನು ಸೂಕ್ಷ್ಮವಾಗಿ ಕಾಣುತ್ತಾನೆ. ಆದರೆ ಮನುಷ್ಯನಿಗೆ ಅದು ಸಾಧ್ಯವಲ್ಲ. ಈ ಪ್ರಪಂಚ ವ್ಯವಸ್ಥೆಯನ್ನು ಯಾವಾಗ ಕೊನೆಗೊಳಿಸಬೇಕೆಂದು ದೇವನು ಬಲ್ಲನು. ಅವನಿಗಲ್ಲದೆ ಮತ್ತ್ಯಾರಿಗೂ ಅದರ ಅರಿವಿಲ್ಲ. ಅವನೇ ಎಲ್ಲ ವಸ್ತುಗಳ ಕಾಲ ನಿರ್ಣಯವನ್ನು ಪೂರ್ಣವಾಗಿ ತಿಳಿಯುತ್ತಾನೆ.

ದೇವನ ಇನ್ನೊಂದು ವಿಶೇಷಣವಾಗಿ **"ಹುವರ್ರಹ್ಮಾನ್"** ಎಂದು ಹೇಳಲಾಗಿದೆ. ಅಂದರೆ, ಅವನು ಸಕಲ ಜೀವಜಾಲಗಳನ್ನು ಸೃಷ್ಟಿಸುವುದಕ್ಕೆ ಮುಂಚಿತವಾಗಿ ಅವುಗಳ ಸುಖಸೌಕರ್ಯಗಳಿಗೆ ಅವಶ್ಯವಾದ ಸಕಲ ಸಾಮಗ್ರಿಗಳನ್ನು ಯಾವುದೇ ಕರ್ಮದ ಪ್ರತಿಫಲವಾಗಿಯಲ್ಲದೆ, ತನ್ನ ಅಪಾರ ದಯೆಯಿಂದ ಸಿದ್ಧಪಡಿಸಿದವನಾಗಿದ್ದಾನೆ. ನಮ್ಮ ಸೃಷ್ಟಿಗೂ ಕರ್ಮಾನುಷ್ಠಾನಕ್ಕೂ ಮೊದಲೇ ಅವನು ನಮ್ಮ ಅಗತ್ಯಕ್ಕಾಗಿ ಸೂರ್ಯನನ್ನೂ ವಿಶಾಲ ಭೂಮಿಯನ್ನೂ ಅದರಲ್ಲಡಕವಾದ ಅಸಂಖ್ಯಾತ ಅನುಗ್ರಹ ವಸ್ತುಗಳನ್ನೂ ತಯಾರಿಸಿಟ್ಟು ತನ್ನ ನಿಸ್ಸೀಮ ದಯೆಯನ್ನು ಪ್ರಕಟಿಸಿದ್ದಾನೆ. ಅವನ ಈ ಅತೀವ ದಯಾಗುಣಕ್ಕೆ **"ರಹ್ಮಾನಿಯತ್"** ಎಂದೂ ಆ ಸರ್ವದಾತನನ್ನು **"ಅರ್ರಹ್ಮಾನ್"** ಅಥವಾ "ದಯಾವಂತ" ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ಇನ್ನೊಂದು ವಿಶೇಷಣ **"ಅರ್ರಹೀಂ"** ಎಂದಾಗಿದೆ. ಅಂದರೆ, ಸತ್ಕರ್ಮಗಳಿಗೆ ಸತ್ಫಲವನ್ನು ನೀಡುವವನೂ ಯಾರ ಪ್ರಯತ್ನವನ್ನು ಕೂಡ ನಿಷ್ಫಲಗೊಳಿಸದವನೂ ಆದ ಕರುಣಾವಂತ. ದೇವನ ಈ ಕರುಣಾ ಪ್ರಕಟಣೆಗೆ **"ರಹೀಮಿಯ್ಯತ್"** ಎಂದೂ ಆ ಕೃಪಾ ನಿಧಿಯನ್ನು **"ಅರ್ರಹೀಂ"** ಎಂದೂ ಹೇಳಲಾಗಿದೆ.

ಪವಿತ್ರ ಖುರ್‌ಆನಿನಲ್ಲಿ ದೇವನ ಕುರಿತು ಹೇಳಲಾದ ಮತ್ತೊಂದು ವಿಶೇಷ ಗುಣ ಇದಾಗಿದೆ:

مَٰلِكِ يَوْمِ ٱلدِّينِ

ಅವನು ಪ್ರತಿಫಲ ನೀಡಲ್ಪಡುವ ದಿನದ ಒಡೆಯನಾಗಿರುವನು. (1:4).

ಅಂದರೆ, ಕರ್ಮಕ್ಕನುಸಾರವಾದ ಶಿಕ್ಷಾರಕ್ಷೆಯ ಸರ್ವಾಧಿಕಾರವನ್ನು ಹೊಂದಿರುವವನು. ಸರ್ವಲೋಕದ ನ್ಯಾಯಾಧೀಶ ಅವನೇ ಆಗಿದ್ದಾನೆ. ಅವನು ತನಗೆ ಸೃಷ್ಟಿಗಳೊಂದಿಗೆ ಯಾವುದೇ ಸಂಬಂಧವಿಲ್ಲದಂತೆ ಭೂಮ್ಯಾಕಾಶಗಳ ಅಧಿನಾಯಕತ್ವವನ್ನು ಇನ್ನ್ಯಾರಿಗಾದರೂ ಒಪ್ಪಿಸಲಿಲ್ಲ; ಹಾಗೆಯೇ ಸ್ವತಂತ್ರವಾಗಿ ಲೋಕದಲ್ಲಿ ಶಿಕ್ಷಾರಕ್ಷ ಕ್ರಮವನ್ನು ನಡೆಸುವ ಅಧಿಕಾರವನ್ನೂ ಯಾರಿಗೂ ನೀಡಿಲ್ಲ.

ದೇವನ ಗುಣ ಮಹಿಮೆಗಳನ್ನು ಮತ್ತೂ ವಿವರಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

ٱلْمَلِكُ ٱلْقُدُّوسُ ٱلسَّلَٰمُ ٱلْمُؤْمِنُ ٱلْمُهَيْمِنُ ٱلْعَزِيزُ ٱلْجَبَّارُ ٱلْمُتَكَبِّرُ

ಈ ವಾಕ್ಯದಲ್ಲಿ ಹೇಳಲಾದ ದೇವನ ಮಹಿಮೆಗಳಲ್ಲಿ ಒಂದು, **"ಅಲ್ ಮಲಿಕುಲ್ ಖುದ್ದೂಸ್"** ಎಂದಾಗಿದೆ. ಅಂದರೆ, ಯಾವುದೇ ನ್ಯೂನತೆಯಿಲ್ಲದ ಪರಿಶುದ್ಧನಾದ ರಾಜ. ಲೌಕಿಕ ಅರಸೊತ್ತಿಗೆ ದೋಷರಹಿತವಲ್ಲ ಎಂಬುದು ಸ್ಪಷ್ಟ. ಒಂದು ರಾಜ್ಯದ ಪ್ರಜೆಗಳೆಲ್ಲ ಆ ರಾಜ್ಯವನ್ನು ಬಿಟ್ಟು ಬೇರೆಡೆಗೆ ವಲಸೆ ಹೋದರೆ ಆ ತ್ಯಜಿಸಲ್ಪಟ್ಟ ರಾಜ್ಯದ ರಾಜನಿಗೆ ಯಾವ ರಾಜತನ ಬಾಕಿಯಾಗುತ್ತದೆ? ಅಥವಾ ಭಯಂಕರವಾದ ಕ್ಷಾಮಬಾಧೆ ಕಾರಣದಿಂದ ಪ್ರಜೆಗಳೆಲ್ಲ ರಾಜ್ಯಕರ ತೆರಲು ಅಶಕ್ತರಾದರೆ ಆ ರಾಜ್ಯದ ರಾಜನ ಸ್ಥಿತಿಯೇನಾದೀತು? ಹಾಗೆಯೇ, ಪ್ರಜೆಗಳೆಲ್ಲ ರಾಜನಿಗೆದುರಾಗಿ ದಂಗೆಯೆದ್ದು ಆತನ ರಾಜತನಕ್ಕೆ ಸವಾಲೊಡ್ಡಿದರೆ, ಆ ರಾಜ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಬಗೆ ಹೇಗೆ? ಆದರೆ ಸರ್ವಾಧಿನಾಥನಾದ ದೇವನ ಪ್ರಭುತ್ವ ಈ ರೀತಿಯದ್ದಲ್ಲ. ಅವನ ಆಡಳಿತೆ ಲೌಕಿಕ ರಾಜಾಧಿಕಾರದಿಂದ ಸಂಪೂರ್ಣ ಭಿನ್ನವಾದುದು. ಅವನಾದರೋ, ಸಮಸ್ತ ಬ್ರಹ್ಮಾಂಡವನ್ನು ಒಂದೇ ಕ್ಷಣದಲ್ಲಿ ನಾಶಪಡಿಸಲಿಕ್ಕೂ ಪುನಃ ಹೊಸದಾಗಿ ಸೃಷ್ಟಿಜಾಲಗಳನ್ನು ಉಂಟುಮಾಡಲಿಕ್ಕೂ ಶಕ್ತನಾದ ಕರ್ತನಾಗಿದ್ದಾನೆ. ಅವನು ಹೀಗೆ ಸರ್ವಶಕ್ತನಾದ ಸೃಷ್ಟಿಕರ್ತನಲ್ಲದಿರುತ್ತಿದ್ದರೆ ನ್ಯಾಯ ಪಾಲಿಸಿ, ತನ್ನ ಆಡಳಿತೆ ಸಡೆಸಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಹೊಸದಾಗಿ ಸೃಷ್ಟಿಸಲು ಅವನು ಶಕ್ತನಲ್ಲವೆಂದಾದರೆ ಅವನು ಸೃಷ್ಟಿಲೋಕಕ್ಕೆ ಒಮ್ಮೆ ಮುಕ್ತಿಯನ್ನು ನೀಡಿದ ನಂತರ ಆ ಮೊದಲ ಸೃಷ್ಟಿಯನ್ನೇ ಇನ್ನೊಮ್ಮೆ ಈ ಲೋಕಕ್ಕೆ ಕಳುಹಿಸಲಿಕ್ಕಾಗಿ ಅವರೆಡೆಯಿಂದ ಅನ್ಯಾಯವಾದ ರೀತಿಯಲ್ಲಿ ಅವರ ಮುಕ್ತಿಯನ್ನು ವಾಪಸು ಪಡೆಯಲು ನಿರ್ಬಂಧಿತನಾಗುವನು. ಈ ಕ್ರಮ ಅವನ ದೇವತ್ವಕ್ಕೆ ಕಳಂಕಕಾರಿಯಾಗಿದೆ; ಮಾತ್ರವಲ್ಲ ಇದರಿಂದ ಅವನ ರಾಜತನ ಭೌತಿಕ ರಾಜತನದಂತೆಯೇ ನ್ಯೂನತೆಯಿಂದ ಕೂಡಿದ್ದೆಂದು ವ್ಯಕ್ತವಾಗುವುದು. ರಾಜ್ಯಭಾರಕ್ಕಾಗಿ ಆಡಳಿತಾಧಿಕಾರಿಗಳು ನಿರ್ಮಿಸುವ ನಿಯಮಗಳು ಯಾವಾಗಲೂ ಕುಂದು ಕೊರತೆಗಳಿಂದ ಕೂಡಿರುತ್ತವೆ. ಅವರು ಸ್ವಾರ್ಥ ಉದ್ದೇಶಗಳನ್ನು ಸಾಧಿಸಲು ಅನ್ಯಾಯದ ಮಾರ್ಗವನ್ನು ಅವಲಂಬಿಸಬೇಕೆಂದು ತೋರುವಾಗ ಸಂಕೋಚಪಡದೆ ಅದನ್ನೇ ರಾಜ್ಯ ನೀತಿಯೆಂದು ಪರಿಗಣಿಸುತ್ತಾರೆ. ಉದಾಹರಣೆಗೆ, ಒಂದು ಹಡಗನ್ನು ರಕ್ಷಿಸಲಿಕ್ಕಾಗಿ ಒಂದು ದೋಣಿಯನ್ನು ಅದರ ನಾವಿಕರ ಸಹಿತ ನಾಶಪಡಿಸಲು ಈ ರಾಜ ನಿಯಮಗಳು ಅನುಮತಿ ನೀಡುತ್ತವೆ. ದೇವನಿಗಾದರೆ ಇಂತಹ ಸಂದಿಗ್ಧ ಕ್ರಮದ ಆವಶ್ಯಕತೆ ಇಲ್ಲ. ಒಟ್ಟಾರೆ, ದೇವನು ಸರ್ವಶಕ್ತನೂ ನಾಸ್ತಿಯಿಂದ ಸಕಲವನ್ನು ಸೃಷ್ಟಿಸುವವನೂ ಅಲ್ಲವಾಗಿದ್ದರೆ, ಬಲಹೀನರಾದ ರಾಜರಂತೆ ಅವನು ಸಹ ತನ್ನ ಶಕ್ತಿಯನ್ನು ತೋರ್ಪಡಿಸುವುದರ ಬದಲಿಗೆ ಅನ್ಯಾಯ ಮಾರ್ಗವನ್ನು ಕೈಗೊಳ್ಳಬೇಕಾಗುತ್ತಿತ್ತು; ಅಥವಾ ನೀತಿ – ನ್ಯಾಯ ಪಾಲಿಸಲಿಕ್ಕಾಗಿ ತನ್ನ ದೇವತ್ವವನ್ನೇ ಕೈಬಿಡಬೇಕಾಗುತ್ತಿತ್ತು. ಆದರೆ ದೇವನ ಹಡಗು ಪೂರ್ಣ ಶಕ್ತಿಪ್ರಭಾವದಿಂದ ನೀತಿ ಮತ್ತು ನ್ಯಾಯದ ಸಮುದ್ರದಲ್ಲಿ ಸಂಚರಿಸುತ್ತಲಿದೆ.

ದೇವನ ಮತ್ತೊಂದು ಹೆಸರು **"ಅಸ್ಸಲಾಮ್"** ಎಂದಾಗಿದೆ. ಅಂದರೆ, ದೇವನು ನ್ಯೂನತೆಗಳಿಂದಲೂ ವಿಪತ್ತುಗಳಿಂದಲೂ ಕಷ್ಟತೆಗಳಿಂದಲೂ ಸುರಕ್ಷಿತನೂ ರಕ್ಷಣೆ ನೀಡುವವನೂ ಆಗಿದ್ದಾನೆ. ಈ ವಿಶಿಷ್ಟ ನಾಮದ ಅರ್ಥ ಬಹಳ ಸ್ಪಷ್ಟ. ಸೃಷ್ಟಿಗಳಂತೆಯೇ ದೇವನು ಸಹ ವಿಪತ್ತುಗಳಿಗೆ ಗುರಿಯಾಗಿ, ಜನರ ಕೈಯಿಂದ ಪೀಡನೆಗಳನ್ನು ಅನುಭವಿಸಿ ಅಥವಾ ತನ್ನ ಜನರ ಕೈಯಿಂದಲೇ ವಧಿಸಲ್ಪಟ್ಟು ತನ್ನ ಉದ್ದೇಶಗಳನ್ನು ಸಾಧಿಸಲಾಗದೆ ಪರಾಭವಗೊಂಡರೆ ಅಂತಹ ದೇವನು ನಮಗೆ ಆಪತ್ಕಾಲದಲ್ಲಿ ಸಹಾಯವನ್ನೂ ರಕ್ಷಣೆಯನ್ನೂ ನೀಡಲು ಸಮರ್ಥನೆಂದು ನಂಬಿ ಭರವಸೆಯನ್ನಿಡುವುದು ಹೇಗೆ? ಮಿಥ್ಯಾ ದೈವಗಳ ಕುರಿತು ಖುರ್‌ಆನ್ ಹೀಗೆ ಹೇಳುತ್ತದೆ:

إِنَّ ٱلَّذِينَ تَدْعُونَ مِن دُونِ ٱللَّهِ لَن يَخْلُقُوا۟ ذُبَابًا وَلَوِ ٱجْتَمَعُوا۟ لَهُۥ
وَإِن يَسْلُبْهُمُ ٱلذُّبَابُ شَيْـًٔا لَّا يَسْتَنقِذُوهُ مِنْهُ ضَعُفَ ٱلطَّالِبُ وَٱلْمَطْلُوبُ
مَا قَدَرُوا۟ ٱللَّهَ حَقَّ قَدْرِهِۦٓ إِنَّ ٱللَّهَ لَقَوِىٌّ عَزِيزٌ

ನಿಜವಾದ ಪರಮಾತ್ಮನನ್ನು ಬಿಟ್ಟು, ನೀವು ಸಹಾಯ ಯಾಚಿಸುವ ಮಿಥ್ಯಾ ದೇವರುಗಳೆಲ್ಲ ಒಟ್ಟು ಸೇರಿದರೂ ಅವರಿಗೆ ಒಂದು ನೊಣವನ್ನಾಗಲಿ ಸೃಷ್ಟಿಸಲು ಸಾಧ್ಯವಿಲ್ಲ. ಮಾತ್ರವಲ್ಲ. ನೊಣ ಅವರ ಕೈಯಿಂದ ಏನಾದರೂ ವಸ್ತುವನ್ನು ಕಿತ್ತುಕೊಂಡು ಹೋದರೆ ಅವರಿಗೆ ಅದನ್ನು ನೊಣದಿಂದ ವಾಪಸು ಪಡೆಯುವ ಶಕ್ತಿ ಕೂಡ ಇರುವುದಿಲ್ಲ. ಇಂತಹ ದೇವರುಗಳನ್ನು ಆರಾಧಿಸುವವರು ವಿವೇಕಹೀನರೂ ಆ ದೇವರುಗಳು ಶಕ್ತಿಹೀನರೂ ಆಗಿದ್ದಾರೆ. ಯಥಾರ್ಥ ಪರಮಾತ್ಮ, ಶಕ್ತರಲ್ಲಿ ಅತ್ಯಂತ ಶಕ್ತನೂ ಎಲ್ಲವನ್ನು ಜಯಿಸುವವನೂ ಆಗಿದ್ದಾನೆ. ಅವನನ್ನು ಹಿಡಿಯಲಿಕ್ಕೋ ಹೊಡೆಯಲಿಕ್ಕೋ ಸಾಧ್ಯವಿಲ್ಲ. ದೇವನ ಕುರಿತು ಅಸಂಬದ್ಧ ಕಲ್ಪನೆಗಳಿಗೆ ಅಧೀನರಾದವರು ದೇವನ ಮಹತ್ವವನ್ನಾಗಲಿ, ಅವನ ಸ್ಥಾನವನ್ನಾಗಲಿ ಸರಿಯಾಗಿ ತಿಳಿದಿರುವುದಿಲ್ಲ. (22: 74,75).

ಇದಕ್ಕೆ ಮೊದಲು ಉದ್ಧರಿಸಲಾದ ಖುರ್‌ಆನ್ ವಾಕ್ಯದಲ್ಲಿ ಹೇಳಲಾದ ದೇವನ ವಿಶೇಷತೆಗಳಲ್ಲಿ ಇನ್ನೊಂದು **'ಅಲ್‌ಮುಅ್‌ಮಿನ್'** ಎಂದಾಗಿದೆ. ಅಂದರೆ, ಸಮಾಧಾನ ಮತ್ತು ಶಾಂತಿಯನ್ನು ಪ್ರದಾನ ಮಾಡುವವನೂ ತನ್ನ ಏಕತೆಗೂ ಶ್ರೇಷ್ಠತೆಗೂ ಸಾಕ್ಷ್ಯಗಳನ್ನು ನೀಡಿ ಶಾಂತಿಯನ್ನು ದಯಪಾಲಿಸುವವನೂ ಆಗಿರುವ ದೇವ. ಈ ಪಾವನನಾಮ ಸೂಚಿಸುವುದೇನೆಂದರೆ, ಸತ್ಯದೇವನನ್ನು ನಂಬುವವನು ತನ್ನ ಬಳಿ ಶಕ್ತಿಯುತ ಪುರಾವೆಗಳಿರುವುದರಿಂದ ಯಾರ ಮುಂದೆಯೂ ಲಜ್ಜಿತನಾಗಲಾರ. ಅವನು ದೇವನ ಮುಂದೆಯೂ ಲಜ್ಜಿತನಾಗಲಾರ. ಆದರೆ ಮಿಥ್ಯಾ ದೇವರುಗಳನ್ನು ನಂಬುವವನು ಸದಾ ಕ್ಲೇಶಕ್ಕೊಳಗಾಗುತ್ತಾನೆ. ಅವನು ತನ್ನ ನಂಬಿಕೆಯ ಆಧಾರವಾಗಿ ಸಾಕ್ಷ್ಯಗಳನ್ನು ತೋರಿಸುವುದರ ಬದಲು ಪರಿಹಾಸಕ್ಕೆ ಗುರಿಯಾಗದಿರಲು ಪ್ರತಿಯೊಂದು ವಿವೇಕಹೀನ ಸಂಗತಿಯನ್ನು ಗೂಢತತ್ವವೆಂದು ವ್ಯಾಖ್ಯಾನಿಸುತ್ತಾನೆ ಮತ್ತು ಸಾಬೀತಾದ ತಪ್ಪುಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಾನೆ.

ಆ ಪವಿತ್ರ ಖುರ್‌ಆನ್ ವಾಕ್ಯ ಮುಂದುವರಿದು ಹೇಳುವ ದೇವನ ವಿಶೇಷತೆಗಳಿವು:

ٱلْمُهَيْمِنُ ٱلْعَزِيزُ ٱلْجَبَّارُ ٱلْمُتَكَبِّرُ

ಅವನು ಸರ್ವ ರಕ್ಷಕನೂ ಪರಿಪಾಲಕನೂ ಸರ್ವವನ್ನು ಜಯಿಸುವ ಪ್ರತಾಪಶಾಲಿಯೂ ಕುಂದು ಕೊರತೆಗಳನ್ನು ನೀಗಿಸುವವನೂ ಯಾರಿಂದಲೂ ಯಾವುದೇ ನೆರವನ್ನು ಬಯಸದವನೂ ಎಲ್ಲರಿಗೂ ಆಸರೆಯಾಗಿರುವ ಪ್ರಭಾವಶಾಲಿಯೂ ಆಗಿದ್ದಾನೆ. (59:24).

ಪವಿತ್ರ ಖುರ್‌ಆನ್ ಮುಂದುವರಿದು ಹೇಳುತದೆ:

هُوَ ٱللَّهُ ٱلْخَالِقُ ٱلْبَارِئُ ٱلْمُصَوِّرُ لَهُ ٱلْأَسْمَآءُ ٱلْحُسْنَىٰ
يُسَبِّحُ لَهُۥ مَا فِى ٱلسَّمَٰوَٰتِ وَٱلْأَرْضِ وَهُوَ ٱلْعَزِيزُ ٱلْحَكِيمُ

ಅವನು ಶರೀರಗಳನ್ನು ಮತ್ತು ಆತ್ಮಗಳನ್ನು ಸೃಷ್ಟಿಸುವವನೂ ಗರ್ಭದಲ್ಲಿರುವ ಭ್ರೂಣಕ್ಕೆ ರೂಪಕೊಡುವವನೂ ಆಗಿದ್ದಾನೆ. ಸಕಲ ಉತ್ಕೃಷ್ಟ ನಾಮಗಳು ಅವನಿಗಿವೆ. ಆಕಾಶ ಮಂಡಲಗಳಲ್ಲಿ ಮತ್ತು ಭೂಮಿಯಲ್ಲಿರುವವರು ಅವನ ಮಹತ್ವವನ್ನು ಕೊಂಡಾಡುತ್ತಾರೆ; ಅವನ ಪರಿಶುದ್ಧತೆಯನ್ನು ಶ್ಲಾಘಿಸುತ್ತಾರೆ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. (59:25).

ಈ ವಾಕ್ಯ ಬಾಹ್ಯಾಕಾಶದಲ್ಲಿ ಸಹ ನಿವಾಸಿಗಳಿರುವರೆಂದೂ ಅವರು ದೇವನ ಮಾರ್ಗದರ್ಶನ ಪ್ರಕಾರ ವರ್ತಿಸುವವರಾಗಿದ್ದಾರೆಂದೂ ಸೂಚಿಸುತ್ತದೆ.

ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೇಳುತ್ತದೆ:

عَلَىٰ كُلِّ شَىْءٍ قَدِيرٌ

ಅಲ್ಲಾಹನು ಎಲ್ಲ ಕಾರ್ಯಗಳಲ್ಲೂ ಸಾಮರ್ಥ್ಯವುಳ್ಳ ಸರ್ವಶಕ್ತನಾಗಿದ್ದಾನೆ. (2:149).

ಈ ವಾಕ್ಯ, ಸತ್ಯ ದೇವನನ್ನು ಆರಾಧಿಸುವವರಿಗೆ ಒಂದು ಸಾಂತ್ವನ ವಚನವಾಗಿದೆ. ದೇವನು ಅಶಕ್ತನೂ ಬಲಹೀನನೂ ಎಂದಾದರೆ ಅಂತಹ ದೇವನಿಂದ ಮನುಷ್ಯನು ಏನನ್ನು ಆಶಿಸಲಿಕ್ಕಿದೆ?

ಪವಿತ್ರ ಖುರ್‌ಆನ್ ಇನ್ನೂ ದೇವನ ಗುಣಗಳನ್ನು ವಿವರಿಸುತ್ತದೆ:

رَبِّ ٱلْعَٰلَمِينَ ٱلرَّحْمَٰنِ ٱلرَّحِيمِ مَٰلِكِ يَوْمِ ٱلدِّينِ

ಪರಮಾತ್ಮನು ಸರ್ವಲೋಕ ಪರಿಪಾಲಕನೂ ಪರಮ ದಯಾಳುವೂ ಕೃಪಾನಿಧಿಯೂ ವಿಧಿ ದಿನದ ಸರ್ವಾಧಿಪತಿಯೂ ಆಗಿದ್ದಾನೆ. (1:2–4).

أُجِيبُ دَعْوَةَ ٱلدَّاعِ إِذَا دَعَانِ

ಅವನು ಪ್ರಾರ್ಥಿಸುವವನ ಪ್ರಾರ್ಥನೆಗಳನ್ನು ಕೇಳುವವನೂ ಉತ್ತರ ನೀಡುವವನೂ ಆಗಿದ್ದಾನೆ. (2:187).

ٱلْحَىُّ ٱلْقَيُّومُ

ಅವನು ಸದಾ ಜೀವಂತನೂ ಸರ್ವಜೀವಿಗಳ ಜೀವನೂ ಸಕಲ ಜೀವಿಗಳಿಗೆ ಆಸರೆಯೂ ಆಗಿದ್ದಾನೆ. (3:3, 2:256).

ಈ ವಚನದಲ್ಲಿ ದೇವನು ಸದಾ ಜೀವಂತನು ಎಂದು ಹೇಳಿದ್ದು, ಅವನು ಸದಾ ಜೀವಿಸುತ್ತಿರುವ ಶಾಶ್ವತನು ಅಲ್ಲವೆಂದಾದ ಪಕ್ಷದಲ್ಲಿ, ಅವನು ಒಂದು ವೇಳೆ ನಮಗಿಂತ ಮೊದಲು ತೀರಿಹೋಗುವನೋ ಎಂಬ ಶಂಕೆಯನ್ನು ನಿವಾರಿಸಲಿಕ್ಕೋಸ್ಕರವಾಗಿದೆ.

قُلْ هُوَ ٱللَّهُ أَحَدٌ ٱللَّهُ ٱلصَّمَدُ لَمْ يَلِدْ وَلَمْ يُولَدْ وَلَمْ يَكُن لَّهُۥ كُفُوًا أَحَدٌۢ

ದೇವನು ಏಕನೂ ಎಲ್ಲಕ್ಕೂ ಆಸರೆಯಾಗಿರುವ ಅಧಿನಾಥನೂ ಆಗಿದ್ದಾನೆ. ಅವನಿಗೆ ಪುತ್ರನಿಲ್ಲ; ಅವನು ಯಾರ ಪುತ್ರನೂ ಅಲ್ಲ. ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ. (112:2–5).

ಪರಮಾತ್ಮನ ಏಕತೆಯ ಕುರಿತು ಸರಿಯಾಗಿ ನಂಬಿಕೊಂಡು ಆ ನಂಬಿಕೆಯಲ್ಲಿ ಲವಲೇಶವಾದರೂ ಹೆಚ್ಚುಕಮ್ಮಿ ಮಾಡಬಾರದೆಂಬ

ವಿಚಾರ ಜ್ಞಾಪಕದಲ್ಲಿರಿಸಬೇಕಾಗಿದೆ. ಸೃಷ್ಟಿಕರ್ತನಾದ ದೇವನಿಗೆ ಸಂಬಂಧಿಸಿ ಕೈಗೊಳ್ಳಬೇಕಾದ ನೀತಿಧರ್ಮ ಇದೇ ಆಗಿದೆ. ಇದುವರೆಗೆ ಪ್ರತಿಪಾದಿಸಲಾದ ನೈತಿಕ ತತ್ವಗಳು ಪವಿತ್ರ ಖುರ್‌ಆನಿನ ನೀತಿ ಶಾಸ್ತ್ರದ ಒಂದು ಭಾಗವಾಗಿದೆ. ಪವಿತ್ರ ಖುರ್‌ಆನಿನ ಈ ಅಧ್ಯಾಪನದ ಒಂದು ವೈಶಿಷ್ಟ್ಯವೇನೆಂದರೆ, ಸಕಲ ನೈತಿಕ ಗುಣಗಳು ಅಮಿತತೆ ಹಾಗೂ ನ್ಯೂನತೆಗಳಿಂದ ಹೊರತಾಗಿವೆ. ಯಾವುದೇ ಸದ್ಗುಣ ಸರಿಯಾದ ನೈತಿಕ ಸೀಮೆಯೊಳಗೆ ಪ್ರಕಟವಾಗುವುದಾದರೆ ಮಾತ್ರವೇ ಪವಿತ್ರ ಖುರ್‌ಆನಿನ ಅಧ್ಯಾಪನೆಗನುಸಾರವಾದ ಯಥಾರ್ಥ ಸದ್ಗುಣವಾಗುತ್ತದೆ. ನೈಜ ಸದ್ಗುಣ ಎರಡು ಮೇರೆಗಳ ಮಧ್ಯದಲ್ಲಿರುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಮಿತತೆ ಮತ್ತು ನ್ಯೂನತೆ ಎಂಬ ಎರಡು ತುದಿಗಳ ಮಧ್ಯದ ಸ್ಥಾನ ಸದ್ಗುಣದ್ದಾಗಿದೆ. ಮಧ್ಯಮ ಮಾರ್ಗಕ್ಕೆ ಪ್ರೇರೇಪಿಸುವ ಮತ್ತು ಮಧ್ಯಮ ಸ್ಥಾನದಲ್ಲಿ ಸ್ಥಿರಗೊಳ್ಳುವ ಎಲ್ಲ ಸ್ವಭಾವಗಳು ಶ್ರೇಷ್ಠವಾದ ನೈತಿಕ ಗುಣಗಳನ್ನು ಸೃಷ್ಟಿಸಲು ಸಾಧಕವಾಗಿವೆ. ಸಂದರ್ಭವನ್ನರಿತು ಯಥೋಚಿತವಾಗಿ ವರ್ತಿಸುವುದು ಮಧ್ಯಮ ಪಥವಾಗಿದೆ. ಒಬ್ಬ ರೈತ ಕಾಲಕ್ಕೆ ಬಹಳ ಮುಂಚಿತವಾಗಿ ಅಥವಾ ಬಹಳ ತಡವಾಗಿ ಬಿತ್ತುವನಾದರೆ ಅವನು ಮಧ್ಯಮ ವಿಧಾನವನ್ನು ಕೈಬಿಟ್ಟಂತಾಗುತ್ತದೆ. ಸದ್ಗುಣ, ಸತ್ಯ, ವಿವೇಕ ಎಲ್ಲವೂ ಮಧ್ಯಮ ಪಥದಲ್ಲಿವೆ. ಮಧ್ಯಮ ಮಾರ್ಗವಾದರೋ ಔಚಿತ್ಯದಿಂದ ಕೂಡಿಕೊಂಡಿದೆ. ಎರಡು ತುದಿಗಳಲ್ಲಿರುವ ಅಸತ್ಯ ಮಾರ್ಗಗಳ ಮಧ್ಯದಲ್ಲಿ ಸತ್ಯ ಮಾರ್ಗವಿದೆ. ಯಥೋಚಿತ ನೀತಿ ಮನುಷ್ಯನನ್ನು ಮಧ್ಯಮ ಪಥದಲ್ಲಿ ಸಂಚರಿಸುವಂತೆ ಮಾಡುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಪರಮಾತ್ಮನನ್ನು ಅರಿತು ನಂಬುವ ವಿಚಾರದಲ್ಲೂ ಮಧ್ಯಮಾರ್ಗವನ್ನು ಅವಲಂಬಿಸಬೇಕಾಗಿದೆ. ದೇವ ವಿಶ್ವಾಸಕ್ಕೆ ಸಂಬಂಧಿಸಿದ ಮಧ್ಯಮಾರ್ಗವೇನೆಂದರೆ, ಅವನ ಪರಮಾರ್ಥ ಗುಣಗಳನ್ನು ಅಲ್ಲಗಳೆದು ಅವನನ್ನು ನಿರ್ಗುಣನೆಂದು ಕಲ್ಪಿಸದಿರುವುದು ಹಾಗೂ ಅವನಿಗೆ ಭೌತಿಕ ವಸ್ತುಗಳೊಡನೆ ಸಾದೃಶ್ಯ ಕಲ್ಪಿಸದಿರುವುದು. ಪವಿತ್ರ ಖುರ್‌ಆನ್ ಪರಮಾತ್ಮನ ವೈಶಿಷ್ಟ್ಯಗಳನ್ನು ವಿವರಿಸುವಾಗ ಈ ಮಧ್ಯಮಾರ್ಗವನ್ನು ಕೈಗೊಂಡಿದೆ. ದೇವನು ಕಾಣುತ್ತಾನೆ, ಕೇಳುತ್ತಾನೆ, ತಿಳಿಯುತ್ತಾನೆ, ಮಾತನಾಡುತ್ತಾನೆ ಮುಂತಾಗಿ ಕಲಿಸುವುದರೊಂದಿಗೆ ಅವನನ್ನು ಯಾವುದೇ ಸೃಷ್ಟಿಯೊಂದಿಗೆ ಸಾದೃಶ್ಯಪಡಿಸದಿರಲಿಕ್ಕೂ ಆ ಪವಿತ್ರ ಗ್ರಂಥ ನಮ್ಮನ್ನು ಎಚ್ಚರಿಸಿದೆ. ಅದು ಹೀಗೆ ಹೇಳುತ್ತದೆ:

لَيْسَ كَمِثْلِهِ شَيْءٌ

ದೇವನೊಡನೆ ಅಸ್ತಿತ್ವದಲ್ಲೂ ಗುಣದಲ್ಲೂ ತುಲ್ಯವಾಗಿರುವ ಯಾವ ವಸ್ತುವೂ ಇಲ್ಲ. (42:12).

فَلَا تَضْرِبُوا لِلَّهِ الْأَمْثَالَ

ದೇವನನ್ನು ಸೃಷ್ಟಿಗಳಲ್ಲಿ ಯಾವುದರೊಂದಿಗೂ ಹೋಲಿಸಬೇಡಿರಿ. (16:75).

ಒಟ್ಟಿನಲ್ಲಿ, ದೇವನಿಗೆ ಸಂಬಂಧಿಸಿ ಅವನನ್ನು ನಿರ್ಗುಣನೆಂದು ಕಲ್ಪಿಸುವುದು ಹಾಗೂ ಅವನ ಗುಣ ಮಹಾತ್ಮೆಗಳನ್ನು ಇತರ ಸೃಷ್ಟಿಗಳೊಂದಿಗೆ ಹೋಲಿಸುವುದು ಎಂಬೀ ಎರಡು ಮೇರೆಗಳ ಮಧ್ಯಮಾರ್ಗವೇ ಯಥಾರ್ಥ ದೇವನಿರೂಪಣೆಯಾಗಿದೆ. ಇಸ್ಲಾಂ ಅದರ ಸಕಲ ಅಧ್ಯಾಪನೆಗಳಲ್ಲೂ ಈ ಮಧ್ಯನೆಲೆಯನ್ನು ಕೈಗೊಂಡಿದೆ. ಪವಿತ್ರ ಖುರ್‌ಆನ್ ಅದರ ಪ್ರಥಮ ಅಧ್ಯಾಯವಾದ ಸೂರಃ ಫಾತಿಹದಲ್ಲಿ ನಿರ್ದೇಶಿಸಿದ ಪ್ರಾರ್ಥನಾ ವಾಕ್ಯದಲ್ಲೇ ಮಧ್ಯಮಾರ್ಗ ಕೈಗೊಳ್ಳಲು ಬೋಧಿಸಿದೆ:

اهْدِنَا الصِّرَاطَ الْمُسْتَقِيمَ صِرَاطَ الَّذِينَ أَنْعَمْتَ عَلَيْهِمْ

غَيْرِ الْمَغْضُوبِ عَلَيْهِمْ وَلَا الضَّالِّينَ

ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು; ನೀನು ಅನುಗ್ರಹಿಸಿದವರ ಮಾರ್ಗದಲ್ಲಿ. ನಿನ್ನ ಕ್ರೋಧಕ್ಕೆ ಗುರಿಯಾಗದವರ ಮತ್ತು ಪಥಭ್ರಷ್ಟರಾಗದವರ ಮಾರ್ಗದಲ್ಲಿ. (1:6.7).

ಈ ವಾಕ್ಯದಲ್ಲಿ ಮೂರು ವಿಧ ಜನರ ಕುರಿತು ಹೇಳಲಾಗಿದೆ. ಎರಡನೆಯದಾಗಿ ಹೇಳಿದ **"ಕ್ರೋಧಕ್ಕೆ ಗುರಿಯಾದವರು"** ಎಂಬುದರ ತಾತ್ಪರ್ಯ ದೇವನಿಗೆದುರಾಗಿ ಕ್ರೋಧವನ್ನು ತೋರಿಸಿ ಪಾಶವೀಯವಾಗಿ ವರ್ತಿಸಿದುದರ ಫಲವಾಗಿ ದೇವಕ್ರೋಧಕ್ಕೆ ಗುರಿಯಾದವರು. ಮೂರನೆಯದಾಗಿ ಹೇಳಿದ **"ಪಥಭ್ರಷ್ಟರಾದವರು"** ಎಂಬುದರ ತಾತ್ಪರ್ಯ ಮೃಗೀಯ ಪ್ರೇರಣೆಗಳಿಗೆ ಅಧೀನರಾಗಿ ಇಂದ್ರಿಯೇಚ್ಛೆಗಳಿಗೆ ಬಲಿಯಾದವರು. ಈ ಎರಡು ಮಾರ್ಗಗಳನ್ನು ಬಿಟ್ಟು ಸತ್ಪಥದಲ್ಲಿ ಚಲಿಸುವವರನ್ನು **"ಅನ್‌ಅಮ್ತ ಅಲೈಹಿಮ್"** ಅಥವಾ **"ಅನುಗ್ರಹೀತರು"** ಎಂಬ ಪದದಿಂದ ಪವಿತ್ರ ಖುರ್‌ಆನ್ ಕರೆಯುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯರನ್ನು ಮಧ್ಯಮ ಮಾರ್ಗದೆಡೆಗೆ ಕೊಂಡೊಯ್ಯುವುದು ಪವಿತ್ರ ಖುರ್‌ಆನಿನ ಉದ್ದೇಶವಾಗಿದೆ. ಮೂಸಾ ಪ್ರವಾದಿಯ ಧರ್ಮಗ್ರಂಥವಾದ **"ತೌರಾತ್"** ಪ್ರತೀಕಾರವನ್ನೂ ಈಸಾ ಪ್ರವಾದಿಯ **"ಇಂಜೀಲ್"** ಸಹನೆಯನ್ನೂ ನಿಷ್ಕರ್ಷಿಸುವಾಗ, ಪವಿತ್ರ ಖುರ್‌ಆನ್ ಈ ಗುಣಗಳನ್ನು ಯಥೋಚಿತವಾಗಿ ಪ್ರಯೋಗಿಸಿ ಮಧ್ಯನೆಲೆಯನ್ನು ಸ್ವೀಕರಿಸಬೇಕೆಂದು ಬೋಧಿಸುತ್ತದೆ. ಅದು ಹೀಗೆ ಹೇಳುತ್ತದೆ: وَكَذَٰلِكَ جَعَلْنَاكُمْ أُمَّةً وَسَطًا

ನಾವು ನಿಮ್ಮನ್ನು ಮಧ್ಯಮ ಮಾರ್ಗದಲ್ಲಿ ಚಲಿಸುವ ಸಮುದಾಯವನ್ನಾಗಿ ಮಾಡಿರುವೆವು. (2:144). ಅಂದರೆ, ಎಲ್ಲ ಕಾರ್ಯಗಳಲ್ಲೂ ಮಧ್ಯ ನೆಲೆಯನ್ನು ಕೈಗೊಳ್ಳಲು ಬೋಧಿಸಲಾಗಿದೆ.

ಈ ಮಧ್ಯಮಾರ್ಗವನ್ನು ಅವಲಂಬಿಸುವವರು ಅನುಗ್ರಹೀತರು. "ಮಧ್ಯಮಾರ್ಗವೇ ಶ್ರೇಷ್ಠವಾದುದು" ♦

**("ಇಸ್ಲಾಂ ಧರ್ಮ ತತ್ವಜ್ಞಾನ"ದಿಂದ – ಅನುವಾದಕ: ಮುಹಮ್ಮದ್ ಯೂಸುಫ್)**

# LOVE FOR ALL - HATRED FOR NONE
# ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ

# ಜಿಹಾದ್ ಎಂದರೇನು?

♦ ಬಿಲಾಲ್ ಅಟ್‌ಕಿನ್‌ಸನ್

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: "ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನಪಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಸತ್ಕರ್ಮಿಗಳ ಜೊತೆಯಲ್ಲಿರುತ್ತಾನೆ." (29:70).

ಪವಿತ್ರ ಖುರ್‌ಆನಿನ ಈ ವಚನದಲ್ಲಿ "ಜಿಹಾದ್" ಎಂಬ ಅರಬಿ ಪದವನ್ನು ಬಳಸಲಾಗಿದೆ. ಇದನ್ನು "ಅತ್ಯಂತ ಪ್ರಯತ್ನಪಡು" ಎಂದು ಭಾಷಾಂತರಿಸಲಾಗಿದೆ. ಜಿಹಾದ್ ಎಂಬ ಪದವು ಚಿಕ್ಕದಾಗಿದ್ದರೂ ಅದು ಇಸ್ಲಾಮೀ ಸಮುದಾಯದಲ್ಲಿ ಸಾಮೂಹಿಕವಾಗಿ ಬಹಳ ಪ್ರಭಾವವನ್ನು ಬೀರುತ್ತದೆ. ಮಾತ್ರವಲ್ಲ, ಮುಸ್ಲಿಮನೊಬ್ಬನ ದೈನಂದಿನ ವೈಯಕ್ತಿಕ ಜೀವಿತದಲ್ಲೂ ಅದು ವಿಶಿಷ್ಟ ಪ್ರಭಾವ ಹೊಂದಿರುತ್ತದೆ.

ಇಸ್ಲಾಮ್ ಧರ್ಮವು ಪ್ರತಿಪಾದಿಸುವ ಜಿಹಾದ್ ಎಂಬ ಪರಿಕಲ್ಪನೆಯು ಕೊಲ್ಲುವುದು ಮತ್ತು ಕೊಲ್ಲಲ್ಪಡುವುದಕ್ಕೆ ಸೀಮಿತವಾಗಿರದೆ ಅದರ ಅರ್ಥ ದೇವನ ಪ್ರೀತಿಯನ್ನು ಗಳಿಸಲಿಕ್ಕಾಗಿ ಕಠಿಣ ಪ್ರಯತ್ನ ಮಾಡುವುದು ಎಂದಾಗಿದೆ. ಆತ್ಮೋನ್ನತಿಗಾಗಿ ವ್ಯಕ್ತಿಗಳು ಮತ್ತು ಸಮುದಾಯ ಜೊತೆಗೂಡಿ ಕಠಿಣವಾಗಿ ಪ್ರಯತ್ನಿಸುವುದು ಎಂದರೆ ಜಿಹಾದ್ ಮಾಡುವುದು ಆವಶ್ಯಕವಾಗಿದೆ. ನಾವು ಜಗಳ ಮಾಡಲು ಮತ್ತು ಯುದ್ಧಕ್ಕಾಗಿ ಸದಾ ಸನ್ನದ್ಧರಾಗಿರುವೆವು ಎಂಬ ಅರ್ಥ ಈ ಪದಕ್ಕೆ ನೀಡಲು ಎಂದೂ ಸಾಧ್ಯವಿಲ್ಲ.

ಹೀಗೆ ಅರ್ಥೈಸುವುದು ಸತ್ಯಾಂಶಕ್ಕೆ ಮತ್ತು ವಾಸ್ತವಿಕತೆಗೆ ವಿರುದ್ಧವಾಗಿದೆ. "ಇಸ್ಲಾಮ್" ಎಂಬ ಪದದ ಅರ್ಥ "ಶಾಂತಿ" ಎಂದಾಗಿದೆ. ಆದುದರಿಂದ ನಮ್ಮ ಪ್ರಯತ್ನಗಳನ್ನು ಮತ್ತು ಶಕ್ತಿಗಳನ್ನು ನಮ್ಮೊಳಗೆ ಆಂತರಿಕ ಶಾಂತಿ ಸ್ಥಾಪಿಸಲು, ನಮ್ಮ ಸಮುದಾಯದಲ್ಲಿ ಮತ್ತು ನಾವಿರುವ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಬಳಸಬೇಕು.

ಆಕ್ಸ್‌ಫರ್ಡ್ ಇಂಗ್ಲಿಷ್ ರೆಫರೆನ್ಸ್ ಡಿಕ್ಷನರಿ (1995) ಜಿಹಾದ್ ಪದಕ್ಕೆ ನೀಡಿದ ಅರ್ಥ "ಪವಿತ್ರ ಯುದ್ಧ" ಎಂದಾಗಿದೆ. ಅದು ನೀಡಿದ ಇನ್ನೊಂದು ತಪ್ಪು ವಿವರಣೆ ಹೀಗಿದೆ: "ಬಾಹ್ಯ ಬೆದರಿಕೆಗಳ ವಿರುದ್ಧ ಇಸ್ಲಾಮನ್ನು ಸಂರಕ್ಷಿಸಲು ಅಥವಾ ಮುಸ್ಲಿಮೇತರರ ಮಧ್ಯೆ ಧರ್ಮಪ್ರಚಾರ ಮಾಡಲು ಜಿಹಾದ್ ಮಾಡಬಹುದು."

"ಪವಿತ್ರ" ಮತ್ತು "ಯುದ್ಧ" ಎಂಬ ಪದಗಳು ಪರಸ್ಪರ ಜೋಡಣೆಗೊಳ್ಳುವಂಥವುಗಳಲ್ಲ. ವಾಸ್ತವಿಕವಾಗಿ ಅವು ಪರಸ್ಪರ ವಿರುದ್ಧವಾಗಿರುವ ಪದಗಳಾಗಿವೆ. ಯುದ್ಧದ ಪರಿಣಾಮಗಳಲ್ಲಿ ಮತ್ತು ಭೀಕರತೆಯಲ್ಲಿ ಪವಿತ್ರತೆ ಏನೂ ಇರುವುದಿಲ್ಲ.

ಇಂದಿನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳು ಮತ್ತು ವಿಶಿಷ್ಟವಾಗಿ ಅವರ ಸಂಪರ್ಕ ಮಾಧ್ಯಮಗಳು "ಜಿಹಾದ್" ಪದಕ್ಕೆ ದುರ್ವ್ಯಾಖ್ಯಾನ ನೀಡುತ್ತಿರುವುದು ಬಹಳ ದುರದೃಷ್ಟಕರವಾಗಿದೆ. ಒಂದು ರೀತಿಯಲ್ಲಿ ಇದನ್ನು ಹೀಗೆ ವಿವರಿಸಬಹುದು: ಕಳೆದ ಸಾವಿರ ವರ್ಷಗಳ ಕಾಲಾವಧಿಯಲ್ಲಿ ಕೆಲವು ಮುಸ್ಲಿಮ್ ಉಗ್ರವಾದಿ ಗುಂಪುಗಳು ಮತ್ತು ಅವರ ನಾಯಕರು ಜಿಹಾದ್ ಪದಕ್ಕೆ ಪವಿತ್ರಯುದ್ಧ ಎಂದು ಅರ್ಥ ಹೇಳಿ ಅವರ ಯುದ್ಧಗಳನ್ನು ರಾಜಕೀಯ, ಆರ್ಥಿಕ ಅಥವಾ ರಾಜ್ಯ ವಿಸ್ತರಣೆಯ ಉದ್ದೇಶದಿಂದ ಮಾಡಿದ್ದರೂ ಆ ಎಲ್ಲಾ ಯುದ್ಧಗಳನ್ನು ಜಿಹಾದ್ ಎಂದು ಹೆಸರಿಸಿದರು. ಅವರು ನೀಡಿದ ಅಪಾರ್ಥದ ಕಾರಣದಿಂದ ಇಸ್ಲಾಮ್ ಧರ್ಮವು ಮತಪರಿವರ್ತನೆಗಾಗಿ ಬಲಾತ್ಕಾರವನ್ನು ಬಳಸುತ್ತದೆ ಎಂದು ತಪ್ಪಾಗಿ ಆಕ್ಷೇಪಿಸಲ್ಪಡಲು ಹೇತುವಾಯಿತು.

ಪವಿತ್ರ ಖುರ್‌ಆನ್ ಪ್ರಕಾರ ಜಿಹಾದ್ ಪದಕ್ಕೆ ಎರಡು ಅರ್ಥಗಳಿವೆ. ಒಂದನೆಯದು "ಜಿಹಾದ್ ಫೀ ಸಬೀಲಿಲ್ಲಾಹಿ" – ಅಲ್ಲಾಹನ ಮಾರ್ಗದಲ್ಲಿ ಕಠಿಣ ಪರಿಶ್ರಮ ಮಾಡುವುದು. ಎರಡನೆಯದು "ಜಿಹಾದ್ ಫಿಲ್ಲಾಹ್" – ಅಲ್ಲಾಹನ ಸಂಪ್ರೀತಿ ಗಳಿಸಲು ಮಾಡುವ ಕಠಿಣ ಪರಿಶ್ರಮ.

"ಜಿಹಾದ್ ಫೀ ಸಬೀಲಿಲ್ಲಾಹ್" ಎಂದರೆ ಇಸ್ಲಾಮ್ ಧರ್ಮವನ್ನು ನಾಶ ಮಾಡಲು ಪ್ರಯತ್ನಿಸುವ ಸತ್ಯದ ಶತ್ರುಗಳ ವಿರುದ್ಧ ಮಾಡುವ ಪ್ರತಿರೋಧಕ ಯುದ್ಧ. "ಜಿಹಾದ್ ಫಿಲ್ಲಾಹ್" ಎಂದರೆ ಅಲ್ಲಾಹನ ಪ್ರೀತಿ ಮತ್ತು ಸಾಮೀಪ್ಯವನ್ನು ಗಳಿಸಲು ಮಾಡುವ ಕಠಿಣ ಪರಿಶ್ರಮ. ಇದು ಆಧ್ಯಾತ್ಮಿಕ ಉನ್ನತಿ ಗಳಿಸಲು ಮಾಡುವ ಆರಾಧನೆಗಳಿಗೆ ಸಂಬಂಧಿಸಿದ್ದು, ಮೊದಲನೆಯದಕ್ಕಿಂತ ಮಹತ್ತರವಾಗಿದೆ.

## ಜಿಹಾದ್ ಮೂರು ವಿಧಗಳು

1. ಮನುಷ್ಯನ ಕೆಟ್ಟ ಆಶಾಭಿಲಾಷೆಗಳ ವಿರುದ್ಧ ಹೋರಾಡುವುದು, ಆತ್ಮ ಸಂಯಮವನ್ನು ಸಾಧಿಸಲು ಪ್ರಯತ್ನಿಸುವುದು.

2. ಲೇಖನ, ಭಾಷಣ ಮತ್ತು ಧನ ವಿನಿಯೋಗ ಮೂಲಕ ಇಸ್ಲಾಮ್ ಧರ್ಮದ ಸತ್ಯ ಮತ್ತು ಸೌಂದರ್ಯವನ್ನು ಮುಸ್ಲಿಮೇತರರಿಗೆ ಪರಿಚಯ ಮಾಡಿಕೊಡಲು ಕಠಿಣವಾಗಿ ಪ್ರಯತ್ನಿಸುವುದು.

3. ಆತ್ಮ ರಕ್ಷಣೆಗಾಗಿ ಸತ್ಯದ ಶತ್ರುಗಳ ವಿರುದ್ಧ ಯುದ್ಧ ಮಾಡುವುದು.

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರವರು ಮೇಲೆ ವಿವರಿಸಿದ ಪ್ರಾರಂಭದ ಎರಡು ವಿಧಗಳ ಜಿಹಾದನ್ನು "ಜಿಹಾದುಲ್ ಅಕ್‌ಬರ್" (ದೊಡ್ಡ ಜಿಹಾದ್) ಎಂದೂ ಮೂರನೆಯ ವಿಧದ ಜಿಹಾದನ್ನು "ಜಿಹಾದುಲ್ ಅಸ್‌ಗರ್" (ಚಿಕ್ಕ ಜಿಹಾದ್) ಎಂದೂ ಹೆಸರಿಸಿರುವರು. ಅವರು ಒಂದು ಯುದ್ಧ ಸಮಾಪ್ತಿಯ ನಂತರ ಹಿಂದಿರುಗುವಾಗ ಹೀಗೆ ಹೇಳಿದರು: "ನೀವು ಚಿಕ್ಕ ಜಿಹಾದ್ (ಇಸ್ಲಾಮ್ ಧರ್ಮದ ವಿರೋಧಿಗಳ ವಿರುದ್ಧ ಮಾಡಿದ ಯುದ್ಧ)ನಿಂದ ದೊಡ್ಡ ಜಿಹಾದ್ (ಕೀಳು ಆಶಾಭಿಲಾಷೆಗಳ ವಿರುದ್ಧ ಮಾಡುವ ಯುದ್ಧ) ಕಡೆಗೆ ಮರಳಿರುವಿರಿ."

ಜಿಹಾದುಲ್ ಅಸ್‌ಗರ್ (ಚಿಕ್ಕ ಜಿಹಾದ್) ಕುರಿತು ನಾವು ಮೊದಲು ವಿವರಿಸುವೆವು. ಅನಂತರ ಜಿಹಾದುಲ್ ಅಕ್‌ಬರ್ (ದೊಡ್ಡ ಜಿಹಾದ್) ಕುರಿತು ಹೇಳುವೆವು.

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ನಲ್ವತ್ತು ವರ್ಷ ಪ್ರಾಯದವರಾದಾಗ ದೈವಿಕ ಕರೆಯು ಅವರಿಗೆ ಲಭಿಸಿತು. ಅವರಿಗೆ ಮೊತ್ತ ಮೊದಲು ಅವತೀರ್ಣವಾದ ಪವಿತ್ರ ಖುರ್‌ಆನ್ ವಚನಗಳು ಇವುಗಳಾಗಿವೆ:

"(ಸರ್ವವನ್ನೂ) ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು. ಅವನು ಮನುಷ್ಯನನ್ನು (ಗರ್ಭಾಶಯದಲ್ಲಿ) ಅಂಟಿಕೊಳ್ಳುವ ಮಾಂಸ ಪಿಂಡದಿಂದ ಸೃಷ್ಟಿಸಿದನು. ಪಠಿಸು; ನಿನ್ನ ಪ್ರಭು ಅತಿ ಕೀರ್ತಿವಂತನಾಗಿದ್ದಾನೆ. (ಅವನು) ಲೇಖನಿಯಿಂದ ಕಲಿಸಿದನು. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ (ಮನುಷ್ಯನಿಗೆ) ಕಲಿಸಿದನು." (96: 2–6)

ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ(ಸ) ದೊರೆತ ಪ್ರಥಮ ಉಪದೇಶ: ಇಸ್ಲಾಮಿನ ಸಂದೇಶವನ್ನು ಮೌಖಿಕವಾಗಿ ಮತ್ತು ಲೇಖನಗಳ ಮೂಲಕ ತಲುಪಿಸಬೇಕು. ಯಾವುದೇ ರೀತಿಯ ಶಕ್ತಿ ಪ್ರಯೋಗವನ್ನು – ಖಡ್ಗ ಅಥವಾ ಬೇರೆ ಯಾವುದಾದರೂ ಆಯುಧ ಬಳಸಿ ಬಲಾತ್ಕಾರ ಮಾಡುವುದನ್ನು ಇಲ್ಲಿ ಪ್ರತಿಪಾದಿಸಿಲ್ಲ.

ಪಠಿಸು, ಓದು ಎಂಬರ್ಥದ ಪದವನ್ನು ಪ್ರಥಮವಾಗಿ ಬಳಸಿರುವುದು ಇಸ್ಲಾಮ್ ಧರ್ಮದ ಸಂದೇಶವನ್ನು ಮೌಖಿಕವಾಗಿ ತಲಪಿಸಬೇಕೆಂದೂ ಲೋಕದಾದ್ಯಂತ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಪ್ರಚಾರಗೊಳಿಸಬೇಕೆಂದೂ ಉದ್ದೇಶಿಸಿ ಆಗಿದೆ.

ತನಗೆ ಅವತೀರ್ಣವಾದ ದೈವಿಕ ಸಂದೇಶವನ್ನು ಬಹಿರಂಗವಾಗಿ ಜನರಿಗೆ ಪ್ರಕಟಿಸಬೇಕೆಂದು ಆಜ್ಞಾಪಿಸಲ್ಪಟ್ಟ ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಮಕ್ಕದ ನಿವಾಸಿಗಳಿಗೆ ಸಂದೇಶವನ್ನು ತಲಪಿಸಿದಾಗ ವಿರೋಧವನ್ನೂ ಪರಿಹಾಸವನ್ನೂ ಎದುರಿಸಬೇಕಾಯಿತು. ಆರಂಭದಲ್ಲಿ ಕೇವಲ ನಾಲ್ವರು ಅವರಿಗೆ ನಿಷ್ಠೆಯನ್ನು ಪ್ರಕಟಿಸಿದರು. ಈ ವಿಷಯ ಮಕ್ಕದ ಜನರಿಗೆ ತಿಳಿದಾಗ ಅವರು ನಕ್ಕು ಪರಿಹಾಸ ಮಾಡಿದರು. ಪವಿತ್ರ ಖುರ್‌ಆನಿನ ಇನ್ನಷ್ಟು ವಚನಗಳು ಅವತೀರ್ಣಗೊಂಡಾಗ ಹೆಚ್ಚು ಜನರು ಅದರ ಬಗ್ಗೆ ಆಸಕ್ತಿ ಹೊಂದಿ ಅದರ ಕಡೆಗೆ ಆಕರ್ಷಿತರಾದರು. ಅವರಲ್ಲಿ ಬಹುತೇಕ ಮಂದಿ ವಿಶಿಷ್ಟವಾಗಿ ಯುವಕರು, ಬಲಹೀನರು ಮತ್ತು ಮಕ್ಕದ ಸಮಾಜದ ದೌರ್ಜನ್ಯ ಪೀಡಿತರು ಆಗಿದ್ದರು. ಮಹಿಳೆಯರಿಗೆ ತಮ್ಮ ಪಿತ, ಪತಿ, ಪುತ್ರರ ಮಧ್ಯದಲ್ಲಿ ಗೌರವದ ಸ್ಥಾನ ಲಭಿಸಿದ ಕಾರಣ ಅವರು ವಿಶಿಷ್ಟವಾಗಿ ಆ ಸಂದೇಶದ ಕಡೆಗೆ ಆಕರ್ಷಿಸಲ್ಪಟ್ಟರು. ಅದರ ಮೊದಲು ಅವರೊಂದಿಗೆ ಮೃಗಗಳಿಗಿಂತಲೂ ಕೀಳಾಗಿ ವರ್ತಿಸಲಾಗುತ್ತಿತ್ತು.

ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಗಳು ಹೆಚ್ಚುತ್ತಾ ಹೋದಾಗ ಅವರ ಮತ್ತು ಅವರ ಅನುಯಾಯಿಗಳ ವಿರುದ್ಧ ಶತ್ರುಗಳ ಪ್ರತಿಕ್ರಿಯೆಯು ತೀವ್ರ ಸ್ವರೂಪ ಪಡೆಯಿತು. ಮಕ್ಕದ ಜನರು ಹಿಂಸಾಚಾರವನ್ನು ಪ್ರಾರಂಭಿಸಿದರು ಮತ್ತು ದಿನಗಳೆದಂತೆ ಅವರ ಹಿಂಸಾತ್ಮಕ ಪ್ರವೃತ್ತಿಗಳು ಹೆಚ್ಚು ಕ್ರೂರವೂ ಹೆಚ್ಚು ಅನಾಗರಿಕವೂ ಆಗತೊಡಗಿದವು. ಹೊಸ ಧರ್ಮವು ಸ್ಥಾಪಿತವಾಗಿ ತಮ್ಮ ಧರ್ಮ ಮತ್ತು ಸಂಸ್ಕೃತಿ ನಾಶವಾಗುವುದೆಂದು ಅವರು ಭಯಭೀತರಾಗಿದ್ದರು. ಈ ಭೀತಿಯ ಕಾರಣದಿಂದ ಅವಿಶ್ವಾಸಿಗಳಾದ ಮಕ್ಕ ನಗರದ ನಿವಾಸಿಗಳು ಖಡ್ಗವೆತ್ತಿ ಸತ್ಯವಿಶ್ವಾಸಿಗಳನ್ನು ಕೊಲ್ಲುವುದರಲ್ಲಿ ಆನಂದವನ್ನು ಹೊಂದಿದರು. ಅವರು ತಮ್ಮ ಹಿಂಸಾಚಾರವನ್ನು ದೀರ್ಘಕಾಲ ಮುಂದುವರಿಸಿದರು. ಮಕ್ಕದ ಮಾರ್ಗಗಳು ಮುಸ್ಲಿಮರ ರಕ್ತ ಸಿಂಚನದ ಕಾರಣದಿಂದ ಕೆಂಪಗಾಯಿತು. ಆದರೆ ಮುಸ್ಲಿಮರು ಯಾವುದೇ ಪ್ರತೀಕಾರ ಮಾಡಲಿಲ್ಲ. ಅವರ ದೈನ್ಯತೆ ಮತ್ತು ಅವರ ಸ್ಥಿರತೆ ಹಿಂಸಕರನ್ನು ಹೆಚ್ಚು ಕ್ರೂರಿಗಳಾಗಲು ಉತ್ತೇಜಿಸಿದವು ಮತ್ತು ಅವರು ಹಿಂಸೆಯನ್ನು ಉಗ್ರರೂಪದಲ್ಲಿ ಮುಂದುವರಿಸಿದರು. ಕೆಲವು ತಂದೆ ತಾಯಂದಿರ ಮುಂದೆಯೇ ಅವರ ಮಕ್ಕಳನ್ನು ಹತ್ಯೆ ಮಾಡಲಾಯಿತು. ಕೆಲವು ತಂದೆ ತಾಯಂದಿರನ್ನು ಅವರ ಮಕ್ಕಳ ಮುಂದೆಯೇ ಕೊಲ್ಲಲಾಯಿತು.

ಯಾವುದೇ ಶಕ್ತಿ ಅಥವಾ ಸಂಪತ್ತನ್ನು ಹೊಂದಿರದಿದ್ದರೂ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಈ ಜನರು ಅಂಗೀಕರಿಸುವಂತೆ ಮಾಡಿದುದರ ಕಾರಣವಾದರೂ ಏನು? ತನ್ನ ಸಂದೇಶವನ್ನು ಅಂಗೀಕರಿಸಬೇಕೆಂದು ಅವರು ಖಡ್ಗ ಹಿಡಿದು ಬಲಾತ್ಕಾರವನ್ನೇನೂ ಮಾಡಲಿಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಕೈಯಲ್ಲಿ ಇದ್ದ 'ಖಡ್ಗ' ಪವಿತ್ರ ಖುರ್‌ಆನ್ ಮಾತ್ರವಾಗಿತ್ತು. ಅದು ಆಧ್ಯಾತ್ಮಿಕ ಖಡ್ಗವಾಗಿತ್ತು. ಅದು ಸತ್ಯವೆಂಬ ಖಡ್ಗವಾಗಿತ್ತು. ಅದು ಅವಿಶ್ವಾಸಿಗಳ ಹೃದಯಗಳನ್ನು ಯಾವುದೇ ಬಲಾತ್ಕಾರವಿಲ್ಲದೆ ಸಹಜವಾಗಿಯೇ ಬದಲಾಯಿಸಿತು. ಇಸ್ಲಾಮ್ ಧರ್ಮ ಮತ್ತು ಅದನ್ನು ಪ್ರಚಾರ ಮಾಡುತ್ತಾ ಸ್ವತಃ ಅನುಷ್ಠಾನಕ್ಕೆ ತಂದ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಸೌಂದರ್ಯ, ವೈಭವ ಮತ್ತು ಕಾಂತಿಯು ಆಕರ್ಷಕ ಶಕ್ತಿ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಒಳಿತನ್ನೂ ಪ್ರೀತಿಯನ್ನೂ ಸ್ರವಿಸುತ್ತಿದ್ದ ಅವರಿಂದ ಪ್ರಭಾವಿತರಾಗಿ ಅನುಯಾಯಿಗಳು ಸ್ವಂತ ಇಚ್ಛೆಯಿಂದ ತಮ್ಮ ಜೀವಗಳನ್ನು ಅವರಿಗಾಗಿ ಅರ್ಪಿಸಿದರು.

ಮುಸ್ಲಿಮರ ವಿರುದ್ಧ ಖಡ್ಗವೆತ್ತಿ ಅವರನ್ನು ತಮ್ಮ ಹಳೆಯ ಧರ್ಮಕ್ಕೆ ಮತ್ತು ಸಂಸ್ಕೃತಿಗೆ ಮರಳಲು ಬಲಾತ್ಕಾರ ಮಾಡಿದವರು ಮುಸ್ಲಿಮೇತರರು ಮತ್ತು ವಿಶಿಷ್ಟವಾಗಿ ಮಕ್ಕದ ಅವಿಶ್ವಾಸಿಗಳಾಗಿದ್ದರು.

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಮದೀನಕ್ಕೆ ವಲಸೆ ಹೋದ ನಂತರ ಖುರೈಶಿ ಗೋತ್ರದ ಅವಿಶ್ವಾಸಿಗಳು ಮಾಡುತ್ತಿದ್ದ ಹಿಂಸಾಚಾರಗಳು ಮಿತಿಮೀರಿದವು. ಮಕ್ಕದಲ್ಲಿ ಬಾಕಿಯಾಗಿ ಉಳಿದಿದ್ದ ಅಸಹಾಯಕರಾದ ಮುಸ್ಲಿಮ್ ಮಹಿಳೆಯರನ್ನೂ ಅನಾಥ ಮಕ್ಕಳನ್ನೂ ಕೊಲ್ಲಲು ಅವರು ಆರಂಭಿಸಿದರು. ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಅವರ ಅನೇಕ ಶಿಷ್ಯರು ಮದೀನಕ್ಕೆ ವಲಸೆ ಹೋಗಿದ್ದರೂ ಅವರನ್ನು ಸಹ ನೆಮ್ಮದಿಯಿಂದಿರಲು ಮಕ್ಕದ ಅವಿಶ್ವಾಸಿಗಳು ಬಿಡಲಿಲ್ಲ. ಅವರಿಗೆ ಅಲ್ಲಿ ಸಹ ನಿರಂತರವಾಗಿ ಕಿರುಕುಳ ಕೊಡಲಾಯಿತು.

ಇಸ್ಲಾಮ್ ಧರ್ಮವು ಎಲ್ಲಾ ಕಡೆಗಳಿಂದಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟು ಅದು ಸಂಪೂರ್ಣವಾಗಿ ನಾಶವಾಗುವ ಬೆದರಿಕೆ ಉಂಟಾಯಿತು. ಇಂತಹ ಸಂದರ್ಭದಲ್ಲಿ ಕಿರು ಜಿಹಾದ್ ಕುರಿತು ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣಗೊಳಿಸಲ್ಪಟ್ಟಿತು.

"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ (ಪ್ರತಿ ಯುದ್ಧ ಮಾಡುವ) ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ." (22:40).

ಆತ್ಮರಕ್ಷಣೆಗಾಗಿ ಖಡ್ಗವನ್ನೆತ್ತಲು ಮುಸ್ಲಿಮರಿಗೆ ಅನುಮತಿ ನೀಡಿದ ಪ್ರಥಮ ವಚನ ಇದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮುಸ್ಲಿಮರು ಅತ್ಮರಕ್ಷಣೆಗಾಗಿ ಮಾಡಬಹುದಾದ ಯುದ್ಧದ ಕುರಿತು ಅದು ನೀತಿ ಸೂತ್ರಗಳನ್ನು ರೂಪಿಸುತ್ತದೆ. ಮುಸ್ಲಿಮರು ಆತ್ಮರಕ್ಷಣೆಗಾಗಿ ಖಡ್ಗವೆತ್ತಲು ಅನುಮತಿಸಲ್ಪಟ್ಟ ಕಾರಣಗಳನ್ನು ಅದು ಸ್ಪಷ್ಟವಾಗಿ ಸೂಚಿಸುತ್ತದೆ. ಮಕ್ಕದಲ್ಲಿ ಮುಸ್ಲಿಮರು ನಿರಂತರವಾಗಿ ಹಿಂಸಾಚಾರಗಳಿಗೆ ಗುರಿಯಾದರೂ ಅವರು ಸಹಿಷ್ಣುತೆಯನ್ನು ಪಾಲಿಸುತ್ತಾ ಬಂದರು. ಅವರು ಮದೀನಕ್ಕೆ ವಲಸೆ ಹೋದಾಗ ಅವರನ್ನು ಶತ್ರುಗಳು ಬೆನ್ನಟ್ಟಿ ದ್ವೇಷಭರಿತರಾಗಿ ನಿರಂತರವಾಗಿ ಕಿರುಕುಳ ಮುಂದುವರಿಸಿದರು. ಇದೇ ಕಾರಣದಿಂದ ಶತ್ರುಗಳ ವಿರುದ್ಧ ಖಡ್ಗವೆತ್ತಲು ಅನುಮತಿಯನ್ನು ಅಲ್ಲಾಹನು ನೀಡಿದನು.

ಮುಸ್ಲಿಮರು ಆಕ್ರಮಣಕ್ಕೊಳಗಾದ ಕಾರಣದಿಂದ ಅವರಿಗೆ ಶತ್ರುಗಳ ವಿರುದ್ಧ ಖಡ್ಗವೆತ್ತಲು ಅನುಮತಿಸಲಾಯಿತು. ಅವರು ಅತ್ಯಂತ ಹಿಂಸಾಚಾರಗಳಿಗೆ ಗುರಿಯಾಗಿದ್ದರು ಮತ್ತು ಯುದ್ಧ ಮಾಡಲು ಅವರು ನಿರ್ಬಂಧಿತರಾದರು.

ಪವಿತ್ರ ಖುರ್‌ಆನಿನ ಮುಂದಿನ ವಚನ ಇದನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ:

"'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ದೇವ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22:41).

ಮುಸ್ಲಿಮರ ಮೇಲೆ ಮೊದಲು ಆಕ್ರಮಣ ಮಾಡುವವರ ವಿರುದ್ಧ ಮಾತ್ರ ಈ ರೀತಿಯ ಜಿಹಾದ್ (ಯುದ್ಧ) ನಡೆಸಲು ಅನುಮತಿಸಲಾಗಿದೆ ಎಂದು ಈ ವಚನ ಸ್ಪಷ್ಟಪಡಿಸುತ್ತದೆ. ಪವಿತ್ರ ಖುರ್‌ಆನ್‌ನಲ್ಲಿರುವ ಬೇರೆ ವಚನಗಳು ಇದನ್ನು ಬೆಂಬಲಿಸುತ್ತವೆ. ಮುಸ್ಲಿಮರು ದೌರ್ಜನ್ಯಕ್ಕೆ ಗುರಿಯಾಗಿದ್ದಲ್ಲಿ ಮಾತ್ರ ತಮ್ಮನ್ನು ಆಕ್ರಮಣ ಮಾಡಿದವರ ವಿರುದ್ಧ ಯುದ್ಧ ಮಾಡಬಹುದು. ಇಸ್ಲಾಮ್ ಪ್ರತಿಪಾದಿಸುವ ಜಿಹಾದಿನ ಸಾರಾಂಶ ಇದೇ ಆಗಿದೆ. ಇದನ್ನು ದ್ವೇಷದಿಂದ ಅಪಾರ್ಥ ಮಾಡಲಾಗುತ್ತಿದೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಜನರಿಗೆ ಮತಪರಿವರ್ತನೆ ಮತ್ತು ಹತ್ಯೆ ಇವುಗಳಲ್ಲಿ ಒಂದನ್ನು ಹಾಗೂ ಇಸ್ಲಾಮ್ ಮತ್ತು ಖಡ್ಗ ಇವುಗಳಲ್ಲೊಂದನ್ನು ಆಯ್ಕೆ ಮಾಡಲು ಹೇಳಿದರೆಂದು ವಾದಿಸುವುದು ಸಂಪೂರ್ಣ ತಪ್ಪು ಆಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಆದಿ ಕಾಲೀನ ಮುಸ್ಲಿಮರು ಇಸ್ಲಾಮ್ ಧರ್ಮದ ಬೆಳವಣಿಗೆಯ ದಾಟಿಹೋದ ಒಂದು ಕಾಲಘಟ್ಟದಲ್ಲಿ ಅಂದಿನ ವಿಶಿಷ್ಟ ಸಂದರ್ಭದಲ್ಲಿ ಇಸ್ಲಾಮಿನ ಅಸ್ತಿಭಾರವನ್ನು ಸ್ಥಾಪಿಸಲು ಖಡ್ಗವನ್ನು ಎತ್ತಿಕೊಳ್ಳಬೇಕಾಯಿತು. ಇಸ್ಲಾಮ್ ಧರ್ಮವನ್ನು ಖಡ್ಗದ ಮೂಲಕ ನಾಶ ಮಾಡಲು ಬಯಸಿದವರು ಖಡ್ಗದಿಂದಲೇ ಹತರಾದರು. ಒಂದು ದೇಶ ಅಥವಾ ಜನತೆ ಇಸ್ಲಾಮ್ ಧರ್ಮವನ್ನು ನಾಶ ಮಾಡಲು ಮುಸ್ಲಿಮರ ವಿರುದ್ಧ ಯುದ್ಧ ಮಾಡುವುದಾದರೆ ಅವರನ್ನು ಎದುರಿಸಲು ಮುಸ್ಲಿಮರು ಮಾಡುವ ಪ್ರತಿರೋಧಕ ಯುದ್ಧವು ಜಿಹಾದ್ ಎಂದು ಕರೆಯಲ್ಪಡಲು ಅರ್ಹವಾಗುವುದೇ ಹೊರತು ಬೇರೆ ಕಾರಣಗಳಿಂದ ಮುಸ್ಲಿಮರು ಮಾಡುವ ಯುದ್ಧವು ಜಿಹಾದ್ ಎಂದು ಕರೆಯಲು ಅರ್ಹವಾಗದು.

ಮುಸ್ಲಿಮರು ಆಯುಧಗಳನ್ನು ಕೈಗೆತ್ತಿಕೊಂಡದ್ದು ಯಾರನ್ನಾದರೂ ಮನೆಗಳಿಂದ ಹೊರಹಾಕಲು, ಅವರ ಸ್ವತ್ತನ್ನು ಅಪಹರಿಸಲು ಅಥವಾ ಅವರ ಸ್ವಾತಂತ್ರ್ಯವನ್ನು ಹರಣ ಮಾಡುವ ಉದ್ದೇಶದಿಂದಾಗಿರಲಿಲ್ಲ. ಅದು ಇಸ್ಲಾಮ್ ಧರ್ಮವನ್ನು ನಾಶ ಮಾಡಲು ಹೊರಟವರನ್ನು ತಡೆಗಟ್ಟಲು, ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ಸ್ಥಾಪಿಸಲು, ಅನ್ಯಧರ್ಮೀಯರ ಆರಾಧನಾಲಯಗಳನ್ನು ನಾಶದಿಂದ ಮತ್ತು ಅಪವಿತ್ರಗೊಳಿಸುವಿಕೆಯಿಂದ ರಕ್ಷಿಸುವ ಉದ್ದೇಶದಿಂದ ಮಾತ್ರವಾಗಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ಲಾಮ್ ಧರ್ಮದವರು ಮಾಡಿದ ಯುದ್ಧಗಳ ಮುಖ್ಯ ಉದ್ದೇಶ ಧಾರ್ಮಿಕ ವಿಶ್ವಾಸ ಮತ್ತು ಆರಾಧನೆಯ ಸ್ವಾತಂತ್ರ್ಯ ಕಾಪಾಡಲಿಕ್ಕೂ ಯಾವುದೇ ರೀತಿಯಲ್ಲಿ ಕೆಣಕದಿದ್ದರೂ ಹೋರಾಟಕ್ಕೆ ಮುಂದಾಗುವವರಿಂದ ಗೌರವ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕೂ ಆಗಿತ್ತು. ಮುಂದೆ ಸಹ ಇಂತಹ ಸಂದರ್ಭಗಳಲ್ಲಿ ಮಾತ್ರ ಜಿಹಾದ್ ಅನುಮತಿಸಲ್ಪಡುವುದು.

ಆದಿ ಕಾಲೀನ ಮುಸ್ಲಿಮರು ಯುದ್ಧ ಮಾಡಲು ನಿರ್ಬಂಧಕ್ಕೊಳಪಟ್ಟ ಕಾರಣದಿಂದ ಯುದ್ಧ ಮಾಡಬೇಕಾಯಿತು. ಅವರಿಗೆ ಬೇರೆ ಯಾವ ಆಯ್ಕೆಯೂ ಇರಲಿಲ್ಲ. ಆಕ್ರಮಣಕಾರಿ ಯುದ್ಧಗಳನ್ನು ಇಸ್ಲಾಮ್ ಧರ್ಮವು ಹಿಂದೆಯೂ ನಿಷಿದ್ಧಗೊಳಿಸಿದ್ದಿತು ಮತ್ತು ಈಗಲೂ ಅದನ್ನು ನಿಷಿದ್ಧಗೊಳಿಸುತ್ತದೆ. ಮುಸ್ಲಿಮ್ ದೇಶಗಳು ತಮ್ಮ ಶಕ್ತಿ ಮತ್ತು ಸಂಪನ್ಮೂಲಗಳನ್ನು ಸ್ವಾರ್ಥ ಮತ್ತು ಮಹತ್ವಾಕಾಂಕ್ಷೆಯ ಈಡೇರಿಕೆಗೆ ಬಳಸಬಾರದೆಂದೂ ಬಡಜನರ ಏಳಿಗೆಗಾಗಿ, ಶಾಂತಿ ಮತ್ತು ಪ್ರಗತಿಗಾಗಿ ಬಳಸಬೇಕೆಂದೂ ಇಸ್ಲಾಮ್ ಆವಶ್ಯಪಡುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ತನ್ನ ಹತ್ತು ಸಾವಿರ ಅನುಯಾಯಿಗಳೊಂದಿಗೆ ಮಕ್ಕ ನಗರವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ತೋರಿಸಿದ ಮಾದರಿ ವರ್ತನೆಗಿಂತ ಭವ್ಯವಾದುದು ಬೇರೊಂದಿಲ್ಲ. ಅವರು ಮಕ್ಕದ ನಿವಾಸಿಗಳೊಂದಿಗೆ ಹೀಗೆ ಹೇಳಿದರು:

"ಅಲ್ಲಾಹನು ಮಾಡಿದ ವಾಗ್ದಾನಗಳು ಹೇಗೆ ಸತ್ಯವಾಗಿ ನೆರವೇರಿದವು ಎಂದು ನೀವು ನೋಡಿರುವಿರಿ. ನಿಮ್ಮನ್ನು ಏಕದೇವಾರಾಧನೆಗೆ ಆಮಂತ್ರಿಸಿದ ಏಕಮಾತ್ರ ತಪ್ಪಿಗಾಗಿ ನೀವು ಅವರ ಮೇಲೆ ಮಾಡಿದ ಕ್ರೂರ ಹಿಂಸಾಚಾರಗಳಿಗೆ ನಿಮಗೆ ಯಾವ ಶಿಕ್ಷೆ ನೀಡಬೇಕೆಂದು ನೀವೇ ಹೇಳಿರಿ."

ಆಗ ಮಕ್ಕದ ನಿವಾಸಿಗಳು ಹೇಳಿದರು: "ಪ್ರವಾದಿ ಯೂಸುಫ್ ತನ್ನ ತಪ್ಪುಗಾರರಾದ ಸಹೋದರರೊಂದಿಗೆ ವರ್ತಿಸಿದ ಹಾಗೆ ನೀವು ನಮ್ಮೊಂದಿಗೆ ವರ್ತಿಸುವಿರೆಂದು ನಾವು ಪ್ರತೀಕ್ಷಿಸುತ್ತೇವೆ."

ಈ ಮಾತನ್ನು ಆಲಿಸಿದ ಕೂಡಲೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೇಳಿದರು: "ಅಲ್ಲಾಹನಾಣೆ, ನಿಮಗೆ ಯಾವ ಶಿಕ್ಷೆಯೂ ಈ ದಿನ ವಿಧಿಸಲ್ಪಡದು. ನಿಮ್ಮ ಮೇಲೆ ಯಾವ ದೋಷಾರೋಪಣೆಯೂ ಇಲ್ಲ." (ಹಿಶಾಮ್)

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಫಿತ್ನ (ಹಿಂಸಾಚಾರ) ಕೊನೆಗೊಳ್ಳುವ ತನಕ ಮತ್ತು ಧರ್ಮ (ಸ್ವೀಕಾರವು) ಸಂಪೂರ್ಣವಾಗಿ ಅಲ್ಲಾಹನಿಗೋಸ್ಕರ ಆಗುವವರೆಗೆ ನೀವು ಅವರೊಡನೆ ಹೋರಾಡಿರಿ. ಆದರೆ ಅವರು (ಹಿಂಸೆ) ತೊರೆದರೆ ಅವರ ವರ್ತನೆಯನ್ನು ಅಲ್ಲಾಹನು ಖಂಡಿತವಾಗಿಯೂ ಸೂಕ್ಷ್ಮಾವಲೋಕನ ಮಾಡುವವನಾಗಿದ್ದಾನೆ." (8:40).

ಹಿಂಸಾಚಾರ ಮುಂದುವರಿಯುತ್ತಿರುವಾಗ ಮಾತ್ರ ಯುದ್ಧ ಮಾಡಬಹುದೆಂದೂ ಜನರು ತಾವು ಬಯಸುವ ಧರ್ಮವನ್ನು ಅವಲಂಬಿಸಲು ಸ್ವಾತಂತ್ರ್ಯವನ್ನು ಪಡೆಯುವ ತನಕ ಅದನ್ನು ಮುಂದುವರಿಸಬಹುದೆಂದೂ ಮೇಲಿನ ವಚನ ಸೂಚಿಸುತ್ತದೆ. ಇಸ್ಲಾಮ್ ಧರ್ಮದ ಶತ್ರುಗಳು ಯುದ್ಧವನ್ನು ನಿಲ್ಲಿಸಿದರೆ ಮುಸ್ಲಿಮರೂ ಯುದ್ಧವನ್ನು ನಿಲ್ಲಿಸಬೇಕು.

ಯಾರಿಗಾದರೂ ಶಿಕ್ಷೆ ನೀಡಬಹುದಾಗಿದ್ದರೆ ಅವರಲ್ಲಿ ಅತ್ಯಂತ ಅರ್ಹರು ಮಕ್ಕದ ಜನರಾಗಿದ್ದರು. ಇಸ್ಲಾಮ್ ಧರ್ಮವು ಖಡ್ಗದಿಂದ ಪ್ರಚಾರಗೊಳಿಸಲ್ಪಟ್ಟಿತು ಎಂಬ ಆಕ್ಷೇಪ ಸತ್ಯವಾಗಿದ್ದರೆ, ಮಕ್ಕವನ್ನು ಜಯಿಸಿದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಖಡ್ಗವನ್ನು ಶಿಕ್ಷೆ ನೀಡಲು ಮತ್ತು ಬಲಾತ್ಕಾರದ ಮತಪರಿವರ್ತನೆಗೆ ಬಳಸುತ್ತಿದ್ದರು. ಮಕ್ಕದ ಜನರು ಬಲಾತ್ಕಾರದಿಂದ ಮತಪರಿವರ್ತನೆ ಮಾಡಲ್ಪಡಲಿಲ್ಲ. ಆದರೆ ಅವರು ಪ್ರೀತಿಯ ಮೂಲಕ ಮತಪರಿವರ್ತನೆಗೆ ಆಕರ್ಷಿಸಲ್ಪಟ್ಟರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರೀತಿ ಮತ್ತು ಪವಿತ್ರ ಖುರ್‌ಆನಿನ ವಿಮೋಚಕ, ಬೆಳಕನ್ನು ನೀಡುವ ಮತ್ತು ಪರಿಷ್ಕಾರವನ್ನುಂಟುಮಾಡುವ ಉಪದೇಶಗಳ ಪ್ರೀತಿ ಅವರನ್ನು ಇಸ್ಲಾಮ್ ಧರ್ಮವನ್ನು ಅಂಗೀಕರಿಸುವಂತೆ ಮಾಡಿತು.

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (2:257).

ಈ ವಚನ ಬಹಳ ಸ್ಪಷ್ಟ ಮತ್ತು ಬಲಯುತವಾದ ಪದಗಳನ್ನು ಬಳಸಿ ಮುಸ್ಲಿಮರು ಮುಸ್ಲಿಮೇತರರನ್ನು ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಸೇರಿಸಬಾರದೆಂದು ಒತ್ತಿ ಹೇಳುತ್ತದೆ. ಅದು ಬಲಪ್ರಯೋಗವು ಏಕೆ ನಿಷಿದ್ಧ ಎಂಬುದಕ್ಕೆ ಕಾರಣವನ್ನು ಸಹ ನೀಡುತ್ತದೆ. ಸತ್ಯಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ ಎಂದೂ ಬಲಪ್ರಯೋಗ ಯಾವ ರೀತಿಯಲ್ಲಿ ನ್ಯಾಯ ಸಮ್ಮತವಲ್ಲವೆಂದೂ ಅದು ಹೇಳುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಸಮಾಜ ಸುಧಾರಣೆಗಾಗಿ ಬಲಪ್ರಯೋಗ ಮಾಡಬಾರದೆಂದು ಅಲ್ಲಾಹನು ಎಚ್ಚರಿಕೆ ನೀಡಿದ್ದಾನೆ. ಅವರ ಬಾಧ್ಯಸ್ಥಿತಿ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ: "ಆದುದರಿಂದ ನೀನು ಉಪದೇಶಿಸು. ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲೆ ಕಾವಲುಗಾರನಲ್ಲ." (88:22, 23).

ಆಶ್ಚರ್ಯಕರ ವಿಷಯವೇನೆಂದರೆ ಈ ವಚನ ಮಕ್ಕದಲ್ಲಿ ಪ್ರವಾದಿತ್ವದ ಆರಂಭದ ಕಾಲದಲ್ಲಿ ಅವತೀರ್ಣಗೊಂಡಿತು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಂದೆ ಬಹಳ ಶಕ್ತಿಗಳಿಸುವರೆಂದೂ ಆದರೆ ಅವರು ತನ್ನ ಶಕ್ತಿಯನ್ನು ಇತರರ ಮೇಲೆ ಬಲಪ್ರಯೋಗಕ್ಕಾಗಿ ಬಳಸಬಾರದೆಂದೂ ಈ ವಚನದ ಮೂಲಕ ಮುಂಚಿತವಾಗಿ ಅವರನ್ನು ಎಚ್ಚರಿಸಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಯಾರನ್ನೂ ಬಲಾತ್ಕಾರವಾಗಿ ಖಡ್ಗ ಮೂಲಕ ಇಸ್ಲಾಮ್ ಧರ್ಮಕ್ಕೆ ಸೇರಿಸಲಿಲ್ಲ. ಅವರ ಸಾತ್ವಿಕತೆ, ಅವರ ಪರಿಶುದ್ಧಿ, ಅವರ ಪ್ರೀತಿ ಮತ್ತು ಅಲ್ಲಾಹನ ಬಗ್ಗೆ ಅವರಿಗಿದ್ದ ಭಕ್ತಿ ಅವರ ಕಡೆ ಜನರನ್ನು ಆಕರ್ಷಿಸಿತು. ಅವರ ನಡವಳಿಕೆ ಅವರ ಶತ್ರುಗಳನ್ನು ಭಾವಪರವಶರಾಗುವಂತೆ ಮಾಡಿತು. ಅವರನ್ನು ಕೊಲ್ಲಲು ಉದ್ದೇಶಿಸಿದವರು ಕೊನೆಗೆ ಅವರ ಪಾದಕ್ಕೆ ಬಿದ್ದರು ಮತ್ತು ದೌರ್ಜನ್ಯಗಾರರಿಂದ ಅವರನ್ನು ರಕ್ಷಿಸಲು ತಮ್ಮ ಪ್ರಾಣತ್ಯಾಗ ಮಾಡುವವರಾದರು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮಾಡಿದ ಕೊನೆಯ ಹಜ್ಜ್ (ಹಜ್ಜತುಲ್ ವಿದಾ) ಸಂದರ್ಭದಲ್ಲಿ ತನ್ನ ಬೀಳ್ಕೊಳ್ಳುವ ಭಾಷಣದಲ್ಲಿ ಹೀಗೆಂದರು:

"ಈ ತಿಂಗಳು ಪವಿತ್ರವಾಗಿರುವ ಹಾಗೆ, ಈ ನೆಲ ಪವಿತ್ರವಾಗಿರುವ ಹಾಗೆ, ಈ ದಿನ ಪವಿತ್ರವಾಗಿರುವ ಹಾಗೆ ಪ್ರತಿಯೊಬ್ಬ ಮನುಷ್ಯನ ಜೀವ, ಸ್ವತ್ತು ಮತ್ತು ಗೌರವವನ್ನು ಅಲ್ಲಾಹನು ಪವಿತ್ರವನ್ನಾಗಿ ಮಾಡಿದ್ದಾನೆ. ಯಾರಾದರೊಬ್ಬನ ಜೀವಹತ್ಯೆ ಮಾಡುವುದು, ಅವನ ಸ್ವತ್ತುಗಳನ್ನು ಸ್ವಾಧೀನಪಡಿಸುವುದು, ಅವನ ಗೌರವಕ್ಕೆ ಕುಂದುಂಟುಮಾಡುವುದು ಅನ್ಯಾಯಕರವೂ ಪಾಪದೋಷ ಉಂಟುಮಾಡುವುದೂ ಆಗಿದ್ದು ಈ ದಿನ, ಈ ತಿಂಗಳು ಮತ್ತು ಈ ಪ್ರದೇಶದ ಪಾವಿತ್ರ್ಯವನ್ನು ಭಂಗಪಡಿಸಿದುದಕ್ಕೆ ಸಮವಾಗುವುದು. ನಾನು ನಿಮಗೆ ಆಜ್ಞಾಪಿಸುತ್ತಿರುವುದು ಇಂದಿನ ದಿನಕ್ಕೆ ಮಾತ್ರವಲ್ಲ; ಮುಂದಿನ ಎಲ್ಲಾ ಕಾಲಗಳಿಗೂ ಅನ್ವಯಿಸುವುದು. ನೀವು ಇಹಲೋಕ ತ್ಯಜಿಸಿ ಪರಲೋಕದ ಕಡೆಗೆ ನಿಮ್ಮ ಸೃಷ್ಟಿಕರ್ತನನ್ನು ಭೇಟಿಯಾಗಲು ಹೋಗುವ ತನಕ ನೀವು ನನ್ನ ಉಪದೇಶಗಳನ್ನು ನೆನಪಿನಲ್ಲಿಟ್ಟುಕೊಂಡು ಅದನ್ನು ಕೃತಿರೂಪಕ್ಕೆ ತರುವವರಾಗಬೇಕೆಂದು ನಾನು ಆಶಿಸುತ್ತೇನೆ." ಕೊನೆಯದಾಗಿ ಅವರು ಹೀಗೆ ಹೇಳಿದರು:

"ನಾನು ನಿಮ್ಮೊಂದಿಗೆ ಹೇಳಿದುದನ್ನು ನೀವು ಭೂಮಿಯ ಎಲ್ಲೆಗಳ ತನಕ ತಲುಪಿಸಬೇಕು. ನನ್ನಿಂದ ನೇರವಾಗಿ ಆಲಿಸಿದವರಿಗಿಂತ ನನ್ನನ್ನು ನೇರವಾಗಿ ಆಲಿಸದವರು ಹೆಚ್ಚು ಲಾಭ ಪಡೆಯಲೂಬಹುದು." (ಸಿಹಾಹ್ ಸಿತ್ತ, ತಬರಿ, ಹಿಶಾಮ್ ಮತ್ತು ಖಾಮಿಸ್)

ಮಾನವರೆಲ್ಲರ ಹಿತಕ್ಕಾಗಿ ಅವರಿಗಿದ್ದ ಅತ್ಯಂತ ಹೆಚ್ಚಿನ ಕಾಳಜಿ

ಮತ್ತು ಲೋಕದಾದ್ಯಂತ ಶಾಂತಿ ಸ್ಥಾಪನೆಗಾಗಿ ಅವರಿಗಿದ್ದ ಹಾರೈಕೆಯು ಸೀಮಾತೀತವಾಗಿತ್ತು.

ಆದರೆ ಕಳೆದ ಒಂದು ಸಾವಿರ ವರ್ಷಗಳ ಕಾಲ ಹಲವಾರು ಮುಸ್ಲಿಮ್ ನಾಯಕರು ಮತ್ತು ಮುಸ್ಲಿಮ್ ದೇಶಗಳು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳನ್ನು, ತಮ್ಮ ದುರಾಶೆಗಳನ್ನು ಈಡೇರಿಸಲು ಹಾಗೂ ಲೌಕಿಕ ಶಕ್ತಿಗಳನ್ನು ಮತ್ತು ಸಂಪತ್ತನ್ನು ಗಳಿಸಲಿಕ್ಕೋಸ್ಕರ ಕಡೆಗಣಿಸುತ್ತಾ ಬಂದುದು ಒಂದು ದುರಂತವಾಗಿದೆ. ಅವರು ಲೌಕಿಕ ಲಾಭಕ್ಕಾಗಿ ಪರಸ್ಪರ ಹೋರಾಟ ನಡೆಸಿದರು. ಅವರು ಅನ್ಯಾಯದಿಂದ ನಿರಪರಾಧಿಗಳನ್ನು ಹಿಂಸಿಸಿದರು ಮತ್ತು ಅಪರಾಧಿಗಳಿಗೆ ಪ್ರೋತ್ಸಾಹ ನೀಡಿದರು. ಅವರು ತಮ್ಮ ಸ್ವಂತ ದೇಶದ ನಿವಾಸಿಗಳಿಗೆ ವಿಶ್ವಾಸ ದ್ರೋಹ ಮಾಡಿದರು. ಅವರು ಮುಸ್ಲಿಮ್ ದೇಶಗಳ ವಿರುದ್ಧ ಕಾರಸ್ಥಾನ ನಡೆಸಲು ಶತ್ರುಗಳಿಂದ ಆರ್ಥಿಕ ಸಹಾಯ, ಸಂಪತ್ತು ಮತ್ತು ಶಕ್ತಿಯನ್ನು ಕೇಳಿ ಪಡೆದುಕೊಂಡರು. ಬಹುತೇಕ ಆಧ್ಯಾತ್ಮಿಕ ಮತ್ತು ಲೌಕಿಕ ನೇತಾರರು ತಮ್ಮ ಜನರನ್ನೇ ತಪ್ಪು ಮಾರ್ಗದಲ್ಲಿ ನಡೆಸಿ ಜನರ ಶರೀರ, ಮನಸ್ಸು ಮತ್ತು ಆತ್ಮ ಭ್ರಷ್ಟವಾಗುವಂತೆ ಮಾಡಿದರು.

ಇಂದಿನ ಕಾಲದಲ್ಲಿ ಸಹ ಅನೇಕ ಮುಗ್ಧ ಯುವಕರನ್ನೂ ಯುವತಿಯರನ್ನೂ 'ಬ್ರೈನ್‌ವಾಶ್' ಮಾಡಲಾಗುತ್ತಿದೆ. ಅವರು ನಡೆಸುವ ಅನಾಗರಿಕ ಕ್ರೂರಕೃತ್ಯಗಳು, ಭಯೋತ್ಪಾದಕ ಕೃತ್ಯಗಳು, ಹತ್ಯೆಗಳು ಮತ್ತು ಆತ್ಮಹತ್ಯೆಗಳು ಸಹ ಅವರನ್ನು ಶಹೀದ (ಹುತಾತ್ಮ)ರನ್ನಾಗಿ ಮಾಡುತ್ತದೆ ಎಂದು ಅವರಿಗೆ ಉಪದೇಶಿಸಲಾಗುತ್ತಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾವ ಧರ್ಮವನ್ನು ತಾವು ಪ್ರೀತಿಸುತ್ತೇವೆ ಎಂದು ಅವರು ಹೇಳುತ್ತಾರೋ ಆ ಧರ್ಮದ ಹೆಸರಿಗೆ ಅವರು ಅಪಮಾನವನ್ನು ತಂದಿರಿಸುತ್ತಾರೆ. ಇಂದು ಇಸ್ಲಾಮ್ ಎಂಬ ಹೆಸರು "ಶಾಂತಿ" ಎಂಬುದಕ್ಕೆ ಪ್ರತಿಯಾಗಿ ಭಯೋತ್ಪಾದನೆ ಎಂಬ ಪದಕ್ಕೆ ಪರ್ಯಾಯವಾಗಿ ಬಳಸಲ್ಪಡುತ್ತದೆ. ಲೋಕದ ಬಹುತೇಕ ದೇಶಗಳು ರಾಜಕೀಯ ಯುದ್ಧಗಳನ್ನು ಮಾಡಿವೆಯಾದರೆ ಮುಸ್ಲಿಮ್ ದೇಶಗಳು ಜಿಹಾದ್ ಎಂಬ ಹೆಸರಿನಲ್ಲಿ ಮಾಡಿದ ಯುದ್ಧಗಳು ಮುಸ್ಲಿಮ್ ಗುಂಪುಗಳು ಪರಸ್ಪರ ಕೊಲ್ಲಲು ಮಾಡಿದವುಗಳಾಗಿವೆ.

ಈ ಸಂದರ್ಭದಲ್ಲಿ ಅಮೇರಿಕದಲ್ಲಿ ಸಂಭವಿಸಿದ 9/11ರ ಹಿಂಸಾಚಾರ, ಅಫ್ಘಾನಿಸ್ತಾನದಲ್ಲಿ ಮತ್ತು ಇತರ ದೇಶಗಳಲ್ಲಿ ನಡೆಯುತ್ತಿರುವ ಘಟನೆಗಳ ಕುರಿತು ಪ್ರಸ್ತಾಪಿಸದಿರಲು ಅಸಾಧ್ಯವಾಗಿದೆ. ಉಗ್ರವಾದಿ ಮುಸ್ಲಿಮ್ ಸಂಘಟನೆಗಳು ಗೊತ್ತು ಗುರಿಯಿಲ್ಲದೆ ಮುಸ್ಲಿಮೇತರ ದೇಶಗಳ ವಿರುದ್ಧ ತಥಾಕಥಿತ 'ಇಸ್ಲಾಮೀ ಜಿಹಾದ್' ನಡೆಸುತ್ತಾ ಇವೆ.

ಲೋಕದ ಅಂತಿಮ ಕಾಲಘಟ್ಟದಲ್ಲಿ ಮುಸ್ಲಿಮರು ಮತ್ತು ವಿಶಿಷ್ಟವಾಗಿ ಮುಸ್ಲಿಮ್ ನೇತಾರರು ಇಸ್ಲಾಮ್ ಧರ್ಮದಿಂದ ದೂರ ಸರಿಯಲ್ಪಡುವರೆಂದೂ ಅವರಲ್ಲಿ ಕೆಲವರು ಸೃಷ್ಟಿಗಳಲ್ಲಿ ಅತ್ಯಂತ ನೀಚರಾಗುವರೆಂದೂ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಎಚ್ಚರಿಕೆ ನೀಡಿರುವರು. ಈ ನೀಚ ನಾಯಕರು ಬುದ್ಧಿವಂತರಾದ ಮುಸ್ಲಿಮ್ ತರುಣರನ್ನೂ ತರುಣಿಯರನ್ನೂ ದಾರಿತಪ್ಪಿಸುತ್ತಿದ್ದಾರೆ. ಅವರಿಗೆ ಎಂತಹ ತರಬೇತಿ ನೀಡಲಾಗುತ್ತಿದೆ ಎಂದರೆ ಅವರು ತಮ್ಮ ಜೀವವನ್ನು ಇಸ್ಲಾಮಿಗಾಗಿ ಅರ್ಪಿಸುವುದಾದರೆ ಅವರು ಶಹೀದ್ (ಹುತಾತ್ಮ)ರಾಗಿ ಕೂಡಲೇ ಸ್ವರ್ಗವನ್ನು ಗಳಿಸುವರೆಂದು ಅವರ ಮನಸ್ಸು ತಪ್ಪಾಗಿ ಮನವರಿಕೆ ಮಾಡುವಂತಾಗುತ್ತದೆ. ಎಂತಹ ಸುಳ್ಳು! ಎಂತಹ ಮೋಸ! ಎಲ್ಲಾ ಮುಸ್ಲಿಮರು ಅವರನ್ನು ಕೇಳಬೇಕು: "ನೀವು ಯಾವ ಆಧಾರದಿಂದ ಹೀಗೆ ವಾದಿಸುತ್ತೀರಿ?"

ಆತ್ಮಾಹತ್ಯಾತ್ಮಕ ಆಕ್ರಮಣ ಮಾಡಲು ಉತ್ತೇಜಿಸಲ್ಪಡುವ ತರುಣ ಮುಸ್ಲಿಮರೊಂದಿಗೆ ನಾನು ಹೀಗೆ ಹೇಳಬಯಸುತ್ತೇನೆ: ಅವರು ಹೇಳುತ್ತಾರೆ ನೀವು ಹುತಾತ್ಮರಾದರೆ ಕೂಡಲೇ ಸ್ವರ್ಗವನ್ನು ಪ್ರವೇಶಿಸುವಿರಿ ಎಂದು. ಹಾಗಾದರೆ ಆ ಕೆಲಸವನ್ನು ಮಾಡಲು ನಿಮಗೆ ಉಪದೇಶಿಸುವವರು ಆ ಕೆಲಸಕ್ಕೆ ನಿಮಗಿಂತ ಮುಂಚಿತವಾಗಿ ಮುನ್ನುಗಬೇಕು. ಆದರೆ ಅವರು ಮುಂದಾಗದಿದ್ದರೆ ಅವರನ್ನು ಪವಿತ್ರ ಖುರ್‌ಆನಿನ ಈ ವಚನದ ಮೂಲಕ ಪ್ರಶ್ನಿಸಬೇಕು: "ನೀವು ಮಾಡದಿರುವುದನ್ನು ನೀವೇಕೆ ಹೇಳುವಿರಿ?" (61:3).

ಆತ್ಮಾಹುತಿಯು ಪ್ರಶಂಸನೀಯ ಕೃತ್ಯವೇನೂ ಅಲ್ಲ. ಅದು ಇಸ್ಲಾಮ್ ಧರ್ಮದ ಹೆಸರಲ್ಲಿ ಮಾಡುವ ಒಂದು ದುಷ್ಕೃತ್ಯವಾಗಿದೆ. ಅದನ್ನು ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸಿ ಮಾಡಲಾಗುತ್ತಿದೆ. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳುತ್ತದೆ:

"ಹೇ ವಿಶ್ವಾಸಿಗಳೇ, ನಿಮ್ಮ ಧನವನ್ನು ಪರಸ್ಪರ ಅನ್ಯಾಯವಾಗಿ ತಿನ್ನಬೇಡಿರಿ. ಆದರೆ ನೀವು ಉಭಯ ಸಮ್ಮತದಿಂದ ವ್ಯಾಪಾರ ಮೂಲಕ ಧನ ಸಂಪಾದನೆ ಮಾಡಬಹುದು. ನಿಮ್ಮನ್ನೇ ನೀವು ಕೊಲ್ಲಬೇಡಿರಿ. ನಿಸ್ಸಂದೇಹವಾಗಿಯೂ ಅಲ್ಲಾಹನು ನಿಮ್ಮ ಮೇಲೆ ಅತಿ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ." (4:30).

"ನಿಮ್ಮನ್ನೇ ನೀವು ಕೊಲ್ಲಬೇಡಿರಿ" ಎಂಬ ಆಜ್ಞೆ ಆತ್ಮಾಹುತಿಯೆಂಬ ದುಷ್ಕೃತ್ಯವನ್ನು ನಿಷಿದ್ಧಗೊಳಿಸುತ್ತದೆ.

ನಿರಪರಾಧಿಗಳಾದ ಜನರನ್ನು ಕೊಲ್ಲುವುದು ಒಬ್ಬ ಮುಸ್ಲಿಮನಿಗೆ ಸ್ವರ್ಗವನ್ನು ದಯಪಾಲಿಸುವಂತಹ ಪ್ರಶಂಸನೀಯ ಕೃತ್ಯವೇ? ಖಂಡಿತವಾಗಿಯೂ ಅಲ್ಲ. ಹಾಗೆ ಮಾಡುವವನಿಗೆ ಅದು ನರಕದ ಬಾಗಿಲನ್ನು ತೆರೆದು ಕೊಡುವುದು.

ಅಬೂ ಝೈದ್ ಬಿನ್ ಸಾಬಿತ್ ಬಿನ್ ಧಹಕ್ ಹೀಗೆ ವರದಿ ಮಾಡಿದ್ದಾರೆ: "'ನಾನು ಸತ್ಯವನ್ನು ಹೇಳುತ್ತಾ ಇಲ್ಲವಾದರೆ ನಾನು ಮುಸ್ಲಿಮೇತರನಾಗುವೆನು' ಎಂದು ಸುಳ್ಳು ಪ್ರಮಾಣವನ್ನು ಮಾಡುವವನು ಆಗಲೇ ಇಸ್ಲಾಮ್ ಧರ್ಮದಿಂದ ದೂರ ಸರಿದಿದ್ದಾನೆ. ಯಾರಾದರೂ ತನ್ನನ್ನು ತಾನೇ ಒಂದು ಆಯುಧದ ಮೂಲಕ ಕೊಂದರೆ ಅದೇ ಆಯುಧದ ಮೂಲಕ ನ್ಯಾಯ ತೀರ್ಮಾನದ ದಿನ ಪರಲೋಕದಲ್ಲಿ ಶಿಕ್ಷಿಸಲ್ಪಡುವನು. ತನಗೆ ಸೇರದ ವಸ್ತುವನ್ನು ಹರಕೆಯಾಗಿ ಅರ್ಪಿಸಬಾರದು. ಒಬ್ಬ ಸತ್ಯವಿಶ್ವಾಸಿಯನ್ನು ಶಪಿಸುವುದು ಅವನನ್ನು ಕೊಲ್ಲುವುದಕ್ಕೆ ಸಮವಾಗಿದೆ." (ಬುಖಾರಿ).

ಸ್ವತಃ ಆತ್ಮಾಹುತಿ ಮಾಡುವ ಯೋಚನೆ ಹೊಂದಿರುವ ಮತ್ತು ಇತರರನ್ನು ಆತ್ಮಾಹುತಿಗೆ ಪ್ರಚೋದಿಸುವ ಹಾಗೂ ಬಾಂಬ್ ಮತ್ತಿತರ

ಆಯುಧಗಳಿಂದ ಆಕ್ರಮಣ ನಡೆಸಿ ನಿರಪರಾಧಿಗಳನ್ನು ಕೊಲ್ಲಲು ಉದ್ದೇಶಿಸುವ ಮುಸ್ಲಿಮರೆಂದು ತಮ್ಮನ್ನು ಹೇಳಿಕೊಳ್ಳುವ ಜನರು ಮೇಲಿನ ಪವಿತ್ರ ಖುರ್‌ಆನ್ ವಚನವನ್ನು ಮತ್ತು ಮೇಲೆ ಉದ್ಧರಣೆ ಮಾಡಲಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಚನವನ್ನು ಗಮನಿಸಬೇಕು. ನೀವು ಆತ್ಮಹತ್ಯಾತ್ಮಕ ಆಕ್ರಮಣ ಮಾಡಿ ಹುತಾತ್ಮರಾಗಲಾರಿರಿ. ಬದಲು, ನೀವು ನರಕಾಗ್ನಿಗೆ ಪ್ರವೇಶ ಪಡೆಯುವಿರಿ.

ಇಂದಿನ ಕಾಲದ ಭೀಕರ ಕೃತ್ಯಗಳು ಇಸ್ಲಾಮೀ ಜಿಹಾದ್ ಎಂಬ ಕಲ್ಪನೆಗೆ ಮತ್ತು ಅದರ ನಿಜವಾದ ಸ್ಥಿತಿಗೆ ವಿರುದ್ಧವಾಗಿದೆ. ರಾಜಕೀಯ ಉದ್ದೇಶದ ಯುದ್ಧಗಳು ಜಿಹಾದ್ ಆಗಲಾರವು. ಜಿಹಾದ್‌ಗಾಗಿ ಕರೆ ಪದೇ ಪದೇ ವಿವಿಧ ಕಡೆಗಳಿಂದ ಕೇಳಿಸುತ್ತಾ ಇದೆ. ಆದರೆ ಅಲ್ಲಾಹನು ಮತ್ತು ಅವನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮರನ್ನು ಆಮಂತ್ರಿಸಿದ ಜಿಹಾದ್ ಯಾವುದು? ಈಗಿನ ಕಾಲದಲ್ಲಿ ನಾವು ಆಮಂತ್ರಿಸಲ್ಪಡುವ ಜಿಹಾದ್ ಯಾವುದು?

ಪವಿತ್ರ ಖುರ್‌ಆನ್ ಜಿಹಾದನ್ ಕಬೀರ್ (ದೊಡ್ಡ ಜಿಹಾದ್) ಎಂಬ ಇನ್ನೊಂದು ಜಿಹಾದ್ ಕುರಿತು ಪ್ರಸ್ತಾಪಿಸುತ್ತದೆ. ಅದು ಹೀಗೆ ಹೇಳುತ್ತದೆ: **"ನೀವು ಅವಿಶ್ವಾಸಿಗಳಿಗೆ ವಿಧೇಯರಾಗಬೇಡಿರಿ. ಅವರ ವಿರುದ್ಧ ಅದರ (ಖುರ್‌ಆನಿನ) ಮೂಲಕ ಹೋರಾಡಿರಿ – ಬಲು ದೊಡ್ಡ ಹೋರಾಟ (ಜಿಹಾದನ್ ಕಬೀರಾ)"** (25:53).

ದೊಡ್ಡ ಮತ್ತು ವಾಸ್ತವಿಕವಾದ ಜಿಹಾದ್ ಈ ವಚನದ ಪ್ರಕಾರ, ಪವಿತ್ರ ಖುರ್‌ಆನಿನ ತತ್ವಗಳನ್ನು ಸ್ವಯಂ ಅನುಷ್ಠಾನಕ್ಕೆ ತಂದು ಇತರರಿಗೆ ಅದನ್ನು ಪ್ರಚಾರಮಾಡುವುದಾಗಿದೆ.

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅಲೈಹಿಸ್ಸಲಾಮ್)ರವರು ಮಹ್‌ದೀ ಎಂದೂ ಮಸೀಹ್ ಎಂದೂ ಅಹ್ಮದೀ ಮುಸ್ಲಿಮರಾದ ನಾವು ನಂಬುತ್ತೇವೆ. ಹಝ್ರತ್ ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಆಗಿರುವ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಪರಿಪೂರ್ಣವಾಗಿ ಅಧೀನವಾಗಿರುವ ಉಮ್ಮತೀ ನಬಿ (ಶಿಷ್ಯ ಪ್ರವಾದಿ) ತಾನೆಂದು ಅವರು ವಾದಿಸಿದರು. ಅವರು ಭಾರತದ ಪಂಜಾಬ್ ರಾಜ್ಯದ ಖಾದಿಯಾನ್‌ನಲ್ಲಿ 1835ರಲ್ಲಿ ಜನಿಸಿ 1908ರಲ್ಲಿ ನಿಧನ ಹೊಂದಿದರು. ಅವರು ಸತ್ಯವಾದಿ ಎಂಬುದಕ್ಕೆ ಸಾಕ್ಷ್ಯವಾಗಿ ಅಲ್ಲಾಹನು ಅಸಂಖ್ಯಾತ ದೃಷ್ಟಾಂತಗಳನ್ನು ತೋರಿಸಿದನು. ಅವರ ಸಂದೇಶ ಲೋಕದಾದ್ಯಂತ ತಲಪುವುದೆಂಬ ಸಂದೇಶವಾಣಿಯನ್ನು ಅಲ್ಲಾಹನು ಅವರಿಗೆ ಅರುಹಿದ್ದನು.

ಅವರು ನೀಡಿದ ಅನೇಕ ಉಪದೇಶಗಳಲ್ಲಿ ಒಂದು ಹೀಗಿದೆ: **"ಹೇ ಜನರೇ, ಈ ಕಾಲದಲ್ಲಿ ಖಡ್ಗ ಹಿಡಿದು ಹೋರಾಡುವುದು ಆವಶ್ಯಕವಾಗಿಲ್ಲ. ಈಗ ಲೇಖನಿ ಮೂಲಕ ಹೋರಾಡಬೇಕಾಗಿದೆ. ಇಸ್ಲಾಮ್ ಕುರಿತು ಶತ್ರುಗಳು ಸೂಚಿಸಿದ ಸಂಶಯಗಳು ಮತ್ತು ವಿವಿಧ ವೈಚಾರಿಕ ಆಕ್ರಮಣಗಳು ನನ್ನನ್ನು ಈ ವಾಸ್ತವಿಕ ಅಂಶದ ಕಡೆಗೆ ಗಮನ ಸೆಳೆಯುವಂತೆ ಮಾಡಿದೆ: ನಾನು ಲೇಖನಿಯೊಂದಿಗೆ ರಣಾಂಗಣವನ್ನು ಪ್ರವೇಶಿಸಬೇಕು ಮತ್ತು ಇಸ್ಲಾಮ್ ಧರ್ಮದ ಪವಾಡ ಸದೃಶ ಶೌರ್ಯವನ್ನೂ ಶಕ್ತಿಯನ್ನೂ ಪ್ರದರ್ಶಿಸಬೇಕು."**

(ಮಲ್‌ಫೂಝಾತ್–ಸಂಪುಟ 1 ಪುಟ 57)

ಇದು ಖಡ್ಗ ಹಿಡಿದು ಹೋರಾಡುವ ಕಾಲವಲ್ಲ, ಇದು ಲೇಖನಿಯಿಂದ ಸಮರ ನಡೆಸುವ ಕಾಲವೆಂದು ಹಝ್ರತ್ ವಾಗ್ದತ್ತ ಮಸೀಹ್(ಅ) ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಅರ್ಥವೇನು? ಇಸ್ಲಾಮ್ ಧರ್ಮದ ವಾಸ್ತವಿಕ ಸೌಂದರ್ಯವನ್ನು ಸವಿಯಲು ಮತ್ತು ಅದರ ತತ್ವಗಳನ್ನು ಮನವರಿಕೆ ಮಾಡಲು ಜನರಿಗೆ ಆಮಂತ್ರಣ ನೀಡಲು ನಾವು ರಣರಂಗವನ್ನು ಪ್ರವೇಶಿಸುವುದು ಹೇಗೆ?

ಇದಕ್ಕಿರುವ ಒಂದು ಉತ್ತರ: ಜಿಹಾದ್ ಫಿಲ್ಲಾಹ್ ಎಂದರೆ ಅಲ್ಲಾಹನ ಸಾಮೀಪ್ಯಗಳಿಸಲು ಮಾಡುವ ಹೋರಾಟವಾಗಿದೆ. ಇದು ಜಿಹಾದುಲ್ ಅಕ್‌ಬರ್ (ದೊಡ್ಡ ಜಿಹಾದ್) ಆಗಿದೆ. ಅದು ನಮ್ಮ ಸ್ವಂತ ಆತ್ಮದ ಕೀಳು ಆಶಾಭಿಲಾಷೆಗಳ ವಿರುದ್ಧ ಮಾಡುವ ಹೋರಾಟವಾಗಿದೆ. ಅದು ಶೈತಾನನ ಕೆಟ್ಟ ಪ್ರೇರೇಪಣೆಗಳಿಗೆ ವಿರುದ್ಧ ಮಾಡುವ ಹೋರಾಟವಾಗಿದೆ. ಇದು ನಿಜವಾದ ಜಿಹಾದ್ ಆಗಿದೆ. ಇದು ನಮ್ಮನ್ನು ನಾವೇ ಸುಧಾರಣೆ ಮಾಡಿ ನಮ್ಮನ್ನು ಸಾತ್ವಿಕರನ್ನಾಗಿ ಮಾಡುವ ಹೋರಾಟವಾಗಿದೆ. ನಾವು ನಮ್ಮೊಳಗಿನ ಶೈತಾನ ಶಕ್ತಿಗಳನ್ನು (ದುಷ್ಟ ಉತ್ತೇಜನಗಳನ್ನು) ಹತ್ತಿಕ್ಕಿ ನಮ್ಮನ್ನು ಸಾತ್ವಿಕರಾದ ಮುಸ್ಲಿಮರನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ. ಹಾಗೆ ಮಾಡಿದರೆ ನಾವು ಮುಸ್ಲಿಮೇತರರನ್ನು ಇಸ್ಲಾಮ್ ಧರ್ಮಕ್ಕೆ ಆಕರ್ಷಿಸುವವರಾಗುವೆವು.

ಪವಿತ್ರ ಖುರ್‌ಆನ್ ಈ ಬಗ್ಗೆ ಹೇಳಿದೆ: **"ಯಾರಾದರೂ (ಅಲ್ಲಾಹನ ಮಾರ್ಗದಲ್ಲಿ) ಪರಿಶ್ರಮಪಡುವರಾದರೆ, ಅವನು ತನ್ನ ಸ್ವಂತ ಒಳಿತಿಗಾಗಿ ಪರಿಶ್ರಮಪಡುತ್ತಾನೆ. ದಿಟವಾಗಿಯೂ ಅಲ್ಲಾಹನು ಸಕಲ ಲೋಕಗಳಿಂದಲೂ ಸ್ವಾವಲಂಬಿಯಾಗಿದ್ದಾನೆ."** (29:7).

ಈ ವಚನ ಮುಜಾಹಿದ್ (ಜಿಹಾದ್ ಮಾಡುವ ವ್ಯಕ್ತಿ) ಯಾರೆಂಬುದನ್ನು ವಿವರಿಸುತ್ತದೆ. ಉನ್ನತ ಮತ್ತು ಶ್ರೇಷ್ಠ ಪರಿಕಲ್ಪನೆಗಳನ್ನು ಹೊಂದಿ ಅವುಗಳನ್ನು ಅನುಷ್ಠಾನಕ್ಕೆ ತರಲು ನಿರಂತರವಾಗಿ ಪರಿಶ್ರಮ ಮಾಡುವುದೇ ಇಸ್ಲಾಮೀ ಸಾಂಕೇತಿಕ ಪದವಾದ ಜಿಹಾದ್ ಪದದ ವಾಸ್ತವಿಕ ಅರ್ಥವಾಗಿದೆ. ಶ್ರೇಷ್ಠ ಪರಿಕಲ್ಪನೆಗಳನ್ನು ಹೊಂದಿ ಅವುಗಳನ್ನು ಕೃತಿರೂಪಕ್ಕೆ ತರುವವನೇ ಮುಜಾಹಿದ್ ಆಗಿದ್ದಾನೆ.

ನಾವು ಇಸ್ಲಾಮ್ ಧರ್ಮದ ಪರಿಪೂರ್ಣ ಮಾದರಿಯಾಗಬೇಕು. ಹಾಗೆ ಆಗಲು ನಾವು ಪವಿತ್ರ ಖುರ್‌ಆನ್ ಕಲಿಸುವ ಉಪದೇಶಗಳನ್ನು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಗಳನ್ನು ತಿಳಿದುಕೊಳ್ಳಬೇಕು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ: **"ನಮ್ಮ ಶಕ್ತಿಯ ಮೂಲಕ ರಕ್ಷಿಸಲ್ಪಟ್ಟು ಶಾಂತಿಯ ಜೀವನವನ್ನು ಯಾವಾಗಲೂ ಇತರರು ಅನುಭವಿಸುತ್ತಿದ್ದರೆ ಅದೇ ನಮ್ಮ ಸತ್ಯ ವಿಶ್ವಾಸದ ಚಿಹ್ನೆಯಾಗಿದೆ. ನಾವು ಇತರರನ್ನು ಕೈಗಳಿಂದಾಗಲೀ ನಾಲಗೆಗಳಿಂದಾಗಲೀ ನೋಯಿಸದಂತೆ ಸದಾ ಪ್ರಯತ್ನಿಸುವುದೇ ಉತ್ತಮ ಇಸ್ಲಾಮ್ ಧರ್ಮ ಪರಿಪಾಲನೆಯಾಗಿದೆ."** (ಬುಖಾರಿ).

ಇದು ಮುಸ್ಲಿಮರು ಸಮಾಜದಲ್ಲಿ ವರ್ತಿಸಬೇಕಾದ ರೀತಿಗೆ ಮಾರ್ಗದರ್ಶನ ನೀಡುವ ಪರಿಪೂರ್ಣ ಸಂಕ್ಷಿಪ್ತ ವಿವರಣೆಯಾಗಿದೆ.

ಮುಸ್ಲಿಮರ ನಡೆವಳಿಕೆಯು ಇತರರಿಗೆ ಮಾದರಿಯಾಗಬೇಕಾದುದು ಆವಶ್ಯಕವಾಗಿದೆ. ಮುಸ್ಲಿಮರಿಂದ ಯಾರಾದರೂ ಎಂದಾದರೂ ಹಾನಿಗೊಳಗಾಗಬಾರದು. ಈ ತತ್ವಗಳು ನಮ್ಮ ಧರ್ಮದ ಭಾಗಗಳಾಗಿವೆ ಮತ್ತು ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ಸ್ಥಾಪಿಸಲು ನೆರವಾಗುವ ಮೂಲತತ್ವವಾಗಿದೆ. ಸತ್ಯವಿಶ್ವಾಸಿಗಳಾದ ನಮ್ಮ ಜೀವಿತದ ಮುಖ್ಯ ಉದ್ದೇಶ ಲಕ್ಷ್ಯವು ಅಲ್ಲಾಹನ ಸಾನ್ನಿಧ್ಯವನ್ನು ತಲಪುವುದಾಗಿದೆ. ನಮ್ಮ ಜೀವಿತವು ಚಿಕ್ಕದಾಗಿದೆ. ನಾವು ಅದರ ಬಗ್ಗೆ ಮನವರಿಕೆ ಮಾಡುವಾಗ ನಮ್ಮ ಜೀವಿತದ ಅರ್ಧಾಂಶ ಕಾಲ ದಾಟಿಹೋಗಿರುತ್ತದೆ.

ಅಲ್ಲಾಹನೊಂದಿಗೆ ನಾವು ಸಂಬಂಧವನ್ನು ಸ್ಥಾಪಿಸಬಹುದೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಆದರೆ ನಾವು ಕಠಿಣ ಪರಿಶ್ರಮವನ್ನು ಮಾಡಬೇಕು. ನಾವು ನಮ್ಮ ಲೌಕಿಕ ಜೀವಿತದಲ್ಲಿ ಜಯಗಳಿಸಲು ಎಂತಹ ಪರಿಶ್ರಮ ಮಾಡುತ್ತೇವೆಂದು ನೋಡಿರಿ. ನಿಶ್ಚಯವಾಗಿಯೂ ಅದೇ ರೀತಿಯ ಕಠಿಣ ಪ್ರಯತ್ನವನ್ನು ಅಲ್ಲಾಹನ ಮಾರ್ಗದಲ್ಲಿ ಮಾಡಿದರೆ ನಾವು ಅಲ್ಲಾಹನನ್ನು ಭೇಟಿಯಾಗುವ ಭಾಗ್ಯ ಗಳಿಸುವೆವು. ನಾವು ನಮ್ಮ ಹೃದಯಗಳೊಳಗೆ ನೋಡಬೇಕು, ನಾವು ಪ್ರತಿ ದಿನ ಎಷ್ಟು ಸಮಯವನ್ನು ಆಧ್ಯಾತ್ಮಿಕ ಕಾರ್ಯಗಳಿಗಾಗಿ ವಿನಿಯೋಗಿಸುತ್ತೇವೆ? ನಾವು ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಎಷ್ಟು ಭಾಗವಹಿಸುತ್ತೇವೆ? ಎಂಬುದನ್ನು ಪರಿಶೀಲಿಸಬೇಕು. ನಾವು ಲೌಕಿಕ ವ್ಯವಹಾರಕ್ಕಾಗಿ ವಿನಿಯೋಗಿಸುವ ಕಾಲದ ಅರ್ಧಾಂಶವನ್ನಾಗಲೀ ಕಾಲು ಭಾಗವನ್ನಾಗಲೀ ಆಧ್ಯಾತ್ಮಿಕ ಚಟುವಟಿಕೆಗಳಿಗಾಗಿ ವಿನಿಯೋಗಿಸುತ್ತೇವೋ? ನಮ್ಮ ಹೃದಯಗಳು ಲೌಕಿಕ ಸುಖಭೋಗಗಳಿಗಾಗಿ ಆಶಿಸುವ ಹಾಗೆ ನಾವು ಅಲ್ಲಾಹನ ಪ್ರೀತಿ ಗಳಿಸಲು ಆಶಿಸುತ್ತೇವೋ? ನಾವು ನಮ್ಮ ಸಮಯವನ್ನು ಪ್ರಾರ್ಥನೆಗಾಗಿ, ಪವಿತ್ರ ಖುರ್‌ಆನ್ ಪಾರಾಯಣಕ್ಕಾಗಿ ಸಾಕಷ್ಟು ವಿನಿಯೋಗಿಸುತ್ತೇವೋ? ನಾವು ನಮ್ಮ ಸಂಪತ್ತನ್ನು ಮತ್ತು ಸಮಯವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತೇವೋ? ನಮ್ಮ ಹೃದಯಗಳು ನಮ್ಮ ಸಹೋದರ ಮತ್ತು ಸಹೋದರಿಯರಾದ ಮಾನವರ ಹಿತಕ್ಕಾಗಿ ಅಳುತ್ತಾ ಪ್ರಾರ್ಥಿಸುತ್ತಿವೆಯೋ ಅಥವಾ ವಿನೀತರಾಗಿ ಅವರನ್ನು ಸಮೀಪಿಸಿ ಅಲ್ಲಾಹನ ಸಂದೇಶ ತಲುಪಿಸಲು ಪ್ರಯತ್ನಿಸುತ್ತಿವೆಯೋ?

ಅಲ್ಲಾಹನ ಗ್ರಂಥದ ಆಜ್ಞೆಗಳನ್ನು ನಾವು ಪಾಲಿಸುತ್ತಿದ್ದೇವೋ? ಅಲ್ಲಾಹನ ಗ್ರಂಥಗಳಲ್ಲಿ ವಿವರಿಸಲಾದ ಆಜ್ಞೆಗಳಿಗಿಂತಲೂ ಉಪದೇಶಗಳಿಗಿಂತಲೂ ಉತ್ತಮವಾಗಿ ನಮ್ಮ ಜೀವಿತಕ್ಕೆ ಮಾರ್ಗದರ್ಶನ ನೀಡುವಂತಹ ಮತ್ತು ನಮ್ಮನ್ನು ಪ್ರಗತಿಗೆ ಒಯ್ಯುವಂತಹ ಬೇರೆ ತತ್ವಗಳು ಯಾವುದೂ ಇಲ್ಲ. ಅಲ್ಲಾಹನ ಹೊರತು ಬೇರೆ ಯಾರಿಗೆ ತಾನೇ ಉತ್ತಮ ಮಾರ್ಗದರ್ಶನ ನೀಡಲು ಸಾಧ್ಯ? ನಾವು ಅಂತರಿಕ ಮತ್ತು ಬಾಹ್ಯ ಕೆಡುಕುಗಳಿಂದ ರಕ್ಷಿಸಲ್ಪಡಲಿಕ್ಕಾಗಿ ಮತ್ತು ಆಧ್ಯಾತ್ಮಿಕ ಪ್ರಯಾಣವನ್ನು ಸುಗಮಗೊಳಿಸಲು ದೈವಿಕ ನಿಯಮಗಳನ್ನು ಅನುಸರಿಸಬೇಕು. ನಾವು ನಮ್ಮ ಜೀವಿತದಲ್ಲಿ ಇದುವರೆಗೆ ಮೈಗೂಡಿಸಿಕೊಂಡ ಅಭ್ಯಾಸಗಳನ್ನು ಮತ್ತು ಜೀವಿತ ಶೈಲಿಯನ್ನು ಬದಲಾಯಿಸಬೇಕು. ಯೋಚನೆಗಳನ್ನು ಮತ್ತು ಕಲ್ಪನೆಗಳನ್ನು ಬದಲಾಯಿಸಬೇಕಾದೀತು. ಅಥವಾ ಪರಿಷ್ಕರಿಸಬೇಕಾದೀತು. ಇದು ಬಹಳ ಕಷ್ಟದಾಯಕವೂ ನೋವನ್ನುಂಟುಮಾಡುವುದೂ ಆಗಿ ಪರಿಣಮಿಸಬಹುದು. ಆದರೆ ಜೀವಿತದ ಎಲ್ಲಾ ಹೋರಾಟಗಳು ಮತ್ತು ಸಂಘರ್ಷಗಳು ನೋವನ್ನುಂಟುಮಾಡುವಂತಹದೂ ಬಳಲಿಕೆ ಉಂಟುಮಾಡುವುದೂ ಆಗಿವೆ. ಅಲ್ಲಾಹನು ನಿರ್ದೇಶಿಸಿದ ನಿಯಮಗಳ ಪ್ರಕಾರ ಜೀವನ ನಡೆಸುವವರು ಮತ್ತು ಅವನ ಮಾರ್ಗದಲ್ಲಿ ನಿರಂತರವಾಗಿ ಕಠಿಣ ಪರಿಶ್ರಮ ಮಾಡುವವರು ದೈವಿಕ ಸಂಬಂಧ ಹೊಂದಿದ ಜನರ ಜೀವಂತ ಪ್ರತೀಕಗಳಾಗುತ್ತಾರೆ. ಅವರು ಜನರ ಗುಂಪಿನ ಮಧ್ಯದಲ್ಲಿ ಎದ್ದು ಕಾಣಿಸುತ್ತಾರೆ. ಅವರ ವ್ಯಕ್ತಿತ್ವ ಆಂತರಿಕವಾಗಿ ಮತ್ತು ಬಾಹ್ಯವಾಗಿ ಪರಿಪೂರ್ಣ ಬದಲಾವಣೆ ಹೊಂದುತ್ತದೆ ಮತ್ತು ಅವರ ಮುಖಗಳಿಂದ ದೈವದತ್ತ ಪ್ರಭೆಯು ಹೊರಹೊಮ್ಮುತ್ತದೆ. ಆದುದರಿಂದ ಜನರು ಅವರ ಮುಂದೆ ಆದರ ಭಾವದಿಂದ ಮತ್ತು ಭಯಭಕ್ತಿಯಿಂದ ಎದ್ದು ನಿಂತುಕೊಳ್ಳುತ್ತಾರೆ. ಅವರು ಈ ಕೆಳಗಿನ ಪವಿತ್ರ ಖುರ್‌ಆನ್ ವಚನದ ಜೀವಂತ ಸಾಕ್ಷ್ಯವಾಗುತ್ತಾರೆ:

"ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಶ್ರಮಪಡುತ್ತಾರೋ ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಸತ್ಕರ್ಮಿಗಳ ಜೊತೆಯಲ್ಲಿರುತ್ತಾನೆ." (29:70).

ಮುಸ್ಲಿಮನು ತನ್ನ ಜೀವಿತದಲ್ಲಿ ಮಾಡುವ ಎಲ್ಲಾ ಗುಣಾತ್ಮಕ ಚಟುವಟಿಕೆಗಳು ಜಿಹಾದ್ ಪದದ ಅರ್ಥದಲ್ಲಿ ಅಡಕವಾಗಿದೆ. ಜಿಹಾದ್ ಮಾಡುವ ಮುಜಾಹಿದ್‌ಗಳಾದ ನಾವು ನಮ್ಮನ್ನು ಸುಧಾರಣೆ ಮಾಡುತ್ತಾ ಸತ್ಕರ್ಮ ನಿರತರಾಗಬೇಕು. ಅಲ್ಲಾಹನ ಮಾರ್ಗದಲ್ಲಿ ಕಠಿಣ ಪರಿಶ್ರಮ ಮಾಡಬೇಕಾದರೆ ಅದಕ್ಕೆ ದೃಢಸಂಕಲ್ಪ ಮತ್ತು ಸ್ಥಿರಚಿತ್ತತೆ ಬೇಕು. ಸತ್ಯವಿಶ್ವಾಸ ಹಾಗೂ ಸರ್ವಶಕ್ತನೂ ಸರ್ವೋನ್ನತನೂ ಆಗಿರುವ ಸೃಷ್ಟಿಕರ್ತನಲ್ಲಿ ಮತ್ತು ಪರಲೋಕ ಜೀವಿತದ ಕುರಿತು ನಿಜವಾದ ನಂಬಿಕೆ ಹೊಂದದೆ ಇದನ್ನು ಸಾಧಿಸಲಾಗದು.

ಒಬ್ಬ ಮುಸ್ಲಿಮನು ತನ್ನ ಧರ್ಮವನ್ನು ಸತ್ಯ ಧರ್ಮ ಎಂದು ದೃಢ ನಂಬಿಕೆಹೊಂದಿ, ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅನುಷ್ಠಾನಕ್ಕೆ ತರುವವನಾದರೆ ಅವನನ್ನು ಧರ್ಮಾಂತರ ಮಾಡಲು ಯತ್ನಿಸುವವರ ಬಗ್ಗೆ ಅವನು ಎಂದೂ ಹೆದರಬೇಕಾಗಿಲ್ಲ. ಅವನು ತನ್ನ ಸಾತ್ವಿಕ ನಡೆವಳಿಕೆ ಮತ್ತು ಮಾತುಗಳ ಮೂಲಕ ತನ್ನನ್ನು ಎದುರಿಸುವವರನ್ನು ತನ್ನ ಮನೆಗೆ ಆಮಂತ್ರಿಸಬೇಕು. ಅದರ ಫಲಸ್ವರೂಪವಾಗಿ ದೇವನಿಚ್ಛಿಸಿದರೆ ಅವರು ಸಹ ಸತ್ಯಧರ್ಮಕ್ಕೆ ಪರಿವರ್ತನೆ ಹೊಂದಲು ಸಾಧ್ಯತೆಗಳಿವೆ.

ಹದಿನಾಲ್ಕು ವರ್ಷಗಳ ಹಿಂದೆ ನಾನು ಅಹ್ಮದೀ ಮುಸ್ಲಿಮನಾದೆನು. ಅದರ ಮೊದಲು ಅಂದಾಜು ಎರಡು ವರ್ಷಗಳ ಕಾಲ ನಾನು ನನ್ನ ಒಬ್ಬ ಅಹ್ಮದೀ ಸ್ನೇಹಿತರನ್ನು ಕ್ರೈಸ್ತ ಧರ್ಮಕ್ಕೆ ಮತಪರಿವರ್ತನೆ ಮಾಡಲು ಪ್ರಯತ್ನಿಸುತ್ತಾ ಇದ್ದೆನು. ಆ ಸ್ನೇಹಿತ ನನ್ನ ವಿರುದ್ಧ ಯಾವುದೇ ದ್ವೇಷ ಭಾವನೆ ಹೊಂದದೆ ತನ್ನ ಧರ್ಮದ ಸತ್ಯಾಂಶವನ್ನು ತನ್ನ ಮಾತು ಮತ್ತು ನಡೆವಳಿಕೆ ಮೂಲಕ ಪ್ರಕಟಿಸಿದರು. ಆಗ ನಾನು ಇಸ್ಲಾಮ್ ಧರ್ಮವನ್ನು ಪ್ರೀತಿಸತೊಡಗಿದೆನು. ಒಬ್ಬ ಸಹೋದರ ತನ್ನ ನಿಜವಾದ ಸಹೋದರನನ್ನು ಪ್ರೀತಿಸುವ ಹಾಗೆ ನಾನು ಆ ಸ್ನೆಹಿತರನ್ನು ಪ್ರೀತಿಸತೊಡಗಿದೆನು. ಆ ಸ್ನೇಹಿತ ತನ್ನ ಕುಟುಂಬ

ಮತ್ತು ಇತರ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಕರ್ತವ್ಯಗಳಿಗಿಂತ ತನ್ನ ಧಾರ್ಮಿಕ ಕರ್ತವ್ಯಗಳಿಗೆ ಆದ್ಯತೆ ನೀಡುತ್ತಿದ್ದರು. ಆ ಸ್ನೇಹಿತ ತನ್ನ ಸಾತ್ವಿಕ ನಡೆನುಡಿಗಳಿಂದ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಯನ್ನು ಮೈಗೂಡಿಸಿ ವರ್ತಿಸುತ್ತಾ ಇದ್ದುದರಿಂದ ನನ್ನನ್ನು ಮಾತ್ರವಲ್ಲ ಇತರ ಅನೇಕ ಆಂಗ್ಲೇಯರನ್ನು ಸತ್ಯಧರ್ಮವಾದ ಇಸ್ಲಾಮಿಗೆ ಆಹ್ವಾನಿಸಲು ಅವರಿಗೆ ಸಾಧ್ಯವಾಯಿತು. ಅವರು ಬಲಪ್ರಯೋಗದಿಂದಲ್ಲ, ಉಪದೇಶಗಳ ಮೂಲಕ ನಿಜವಾದ ಜಿಹಾದ್ ಮಾಡಿದರು. ಅವರು ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಿದ್ದರೂ ಅವರ ಸಹಿಷ್ಣುತಾ ಭಾವನೆ, ಅವರ ಸ್ಥಿರತೆ ಮತ್ತು ವಿಶಿಷ್ಟವಾಗಿ ಅವರು ತನ್ನ ಸೃಷ್ಟಿಕರ್ತನ ಕುರಿತು ಹೊಂದಿದ ಪ್ರೀತಿಯ ಕಾರಣದಿಂದ ಅತ್ಯಂತ ಜಯಶಾಲಿ "ದಾಈ ಇಲಲ್ಲಾಹ್" (ಅಲ್ಲಾಹನ ಕಡೆಗೆ ಆಮಂತ್ರಿಸುವವ) ಆಗಲು ಅವರಿಗೆ ಸಾಧ್ಯವಾಯಿತು.

ಕೆಲವು ಪಾಶ್ಚಿಮಾತ್ಯ ದೇಶಗಳು ಮುಸ್ಲಿಮರ ಮತ್ತು ಮುಸ್ಲಿಮ್ ದೇಶಗಳ ವಿರುದ್ಧ ಮಾಡುವ ಅನ್ಯಾಯ ಬಹಳ ನೋವನ್ನುಂಟುಮಾಡುತ್ತದೆ. ಇದೇ ರೀತಿ ತಾವು ಇಸ್ಲಾಮ್ ಧರ್ಮಕ್ಕೆ ನೀಡುವ ವ್ಯಾಖ್ಯಾನವನ್ನು ಅಂಗೀಕರಿಸದವರ ವಿರುದ್ಧ ತಥಾಕಥಿತ ಮುಸ್ಲಿಮರು ಮಾಡುವ ಜಿಹಾದ್ ಘೋಷಣೆ ಮತ್ತು ಅವರು ಇಸ್ಲಾಮ್ ಧರ್ಮದ ಹೆಸರಿನಲ್ಲಿ ಮಾಡುವ ದೌರ್ಜನ್ಯ ಹಾಗೂ ಇಸ್ಲಾಮಿಗೆ ಅಪಮಾನ ಉಂಟುಮಾಡುವ ಕೃತ್ಯಗಳನ್ನು ನೋಡುತ್ತಾ ಇರುವುದು ಇನ್ನಷ್ಟು ಮನೋವೇದನೆಯನ್ನುಂಟುಮಾಡುತ್ತದೆ. ಈ ರೀತಿ ವರ್ತಿಸುವವರು ಹೇಗೆ ತಾನೆ ಜನರನ್ನು ಇಸ್ಲಾಮ್ ಧರ್ಮಕ್ಕೆ ಆಕರ್ಷಿಸಲು ಸಾಧ್ಯ?

ಕೊನೆಯದಾಗಿ ನಾನು ಹಝ್ರತ್ ವಾಗ್ದತ್ತ ಮಸೀಹರ(ಅ) (ಅಹ್ಮದಿಯಾ ಸಂಘಟನೆಯ ಸ್ಥಾಪಕರ) ಒಂದು ಉಲ್ಲೇಖವನ್ನು ನಿಮ್ಮ ಮುಂದಿರಿಸುತ್ತೇನೆ. ಅವರು ಹೀಗೆಂದರು:

"ಅಜ್ಞರಾದ ಮೌಲವಿಗಳು – ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡಲಿ – ಮುಗ್ಧರಾದ ಸಾಮಾನ್ಯ ಜನರನ್ನು ಬಹಳ ಮೋಸಕ್ಕೊಳಪಡಿಸಿರುವರು. ದೌರ್ಜನ್ಯ, ದಯಾಹೀನತೆ ಮತ್ತು ಮನುಷ್ಯತ್ವ ರಹಿತ ಕೃತ್ಯಗಳಲ್ಲಿ ಸ್ವರ್ಗದ ಕೀಲಿಕೈಗಳಿವೆ ಎಂದು ಮೌಲವಿಗಳು ಅವರಿಗೆ ಉಪದೇಶಿಸಿದ್ದಾರೆ. ಒಬ್ಬನು ತನ್ನದೇ ಯೋಚನೆಯಲ್ಲಿ ಮಗ್ನನಾಗಿ ಮಾರ್ಗದಲ್ಲಿ ನಡೆದು ಹೋಗುತ್ತಿದ್ದಾನೆಂದು ಭಾವಿಸಿರಿ. ನಮಗೂ ಅವನಿಗೂ ಯಾವುದೇ ಸಂಬಂಧವಿರುವುದಿಲ್ಲ ಮತ್ತು ಅವನ ಹೆಸರು ಸಹ ನಮಗೆ ತಿಳಿಯದು. ಅವನಿಗೆ ನಮ್ಮ ಬಗ್ಗೆ ಸಹ ಏನೂ ತಿಳಿದಿಲ್ಲ. ಹೀಗಿದ್ದರೂ ನಾವು ಅವನನ್ನು ಕೊಲ್ಲುವ ನಿರ್ಧಾರ ಮಾಡಿ ಅವನಿಗೆ ಗುಂಡು ಹೊಡೆಯುತ್ತೇವೆ. ಏನು ಇದೊಂದು ಧಾರ್ಮಿಕ ಸತ್ಕೃತ್ಯವಾಗಿದ್ದರೆ ಕಾಡುಮೃಗಗಳು ಇಂತಹ ಸತ್ಕೃತ್ಯಗಳನ್ನು ಮಾಡುವ ನಿಟ್ಟಿನಲ್ಲಿ ಮನುಷ್ಯರಿಗಿಂತ ಶ್ರೇಷ್ಠವಾಗುತ್ತವೆ. ಸುಬ್‌ಹಾನಲ್ಲಾಹ್ (ಅಲ್ಲಾಹನು ಪರಿಶುದ್ಧನು). ಮಕ್ಕದ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಹೀಗೆ ಆಜ್ಞಾಪಿಸಿದನು: 'ನೀವು ತುಂಡರಿಸಲ್ಪಡುವುದಾದರೂ ನೀವು ಕೆಡುಕನ್ನು ಶಕ್ತಿ ಮೂಲಕ ಎದುರಿಸಬೇಡಿರಿ.' ಪ್ರವಾದಿಗಳ ಆತ್ಮವನ್ನು ತಮ್ಮಲ್ಲಿ ಹೊಂದಿದ್ದ ಆ ಸಾತ್ವಿಕರಾದ ಜನರು ಅಲ್ಲಾಹನ ಆಜ್ಞೆಗೆ ವಿಧೇಯರಾಗಿ ತಾಯಿಯ ಹಾಲು ಕುಡಿಯುತ್ತಿರುವ ಶಿಶುಗಳಂತೆ ವಿನೀತರಾದ ನಿರ್ಬಲರ ಹಾಗೆ ವರ್ತಿಸಿದರು. ಒಬ್ಬ ನಿರಪರಾಧಿಯನ್ನು ಕೊಂದು ಅವನ ಪತ್ನಿಯನ್ನು ವಿಧವೆಯನ್ನಾಗಿಯೂ ಅವನ ಮಕ್ಕಳನ್ನು ಅನಾಥರನ್ನಾಗಿಯೂ ಅವನ ಮನೆಯನ್ನು ಶೋಕ ಭರಿತವನ್ನಾಗಿಯೂ ಮಾಡುವ ಕೃತ್ಯವು ಎಷ್ಟು ಮನೋವೇದನೆ ಉಂಟುಮಾಡುವಂತಹದೂ ನಾಚಿಕೆಗೆ ಕಾರಣವೂ ಆಗಿರುತ್ತದೆ? ಯಾವ ಹದೀಸು ಮತ್ತು ಪವಿತ್ರ ಖುರ್‌ಆನಿನ ಯಾವ ವಚನ ಇದಕ್ಕೆ ಅನುಮತಿ ನೀಡುತ್ತದೆ? ಯಾರಾದರೂ ಮೌಲವಿಗೆ ಈ ಪ್ರಶ್ನೆಗೆ ಉತ್ತರ ನೀಡಲು ಸಾಧ್ಯವೇ? ಜಿಹಾದ್ ಎಂಬ ಪದವನ್ನು ಆಲಿಸಿದ ಮೂಢ ಜನರು ತಮ್ಮ ಸ್ವಾರ್ಥ ಆಶಾಭಿಲಾಷೆಗಳನ್ನು ಈಡೇರಿಸಲು ಅದನ್ನು ನೆವನವನ್ನಾಗಿ ಮಾಡಿಕೊಳ್ಳುತ್ತಾರೆ.

"ನಾನು ನಿಮಗೊಂದು ಆಜ್ಞೆ ತಂದಿದ್ದೇನೆ. ಖಡ್ಗದಿಂದ ಮಾಡುವ ಜಿಹಾದ್ ಕೊನೆಗೊಂಡಿದೆ. ಆದರೆ ನಿಮ್ಮ ಆತ್ಮದ ಶುದ್ಧೀಕರಣಕ್ಕಾಗಿ ಮಾಡುವ ಜಿಹಾದ್ ಮುಂದುವರಿಯುವುದು. ನಾನು ಇದನ್ನು ನನ್ನ ಇಷ್ಟದಿಂದ ಹೇಳುವುದಲ್ಲ. ಅಲ್ಲಾಹನ ಇಷ್ಟವನ್ನು ನಾನು ಪ್ರಕಟಿಸುತ್ತಿದ್ದೇನೆ." (ಗವರ್ನಮೆಂಟ್ ಅಂಗ್ರೇಝಿ ಔರ್ ಜಿಹಾದ್)

(Review of Religions - September 2002 **ಸಂಚಿಕೆಯಿಂದ. ಕನ್ನಡಕ್ಕೆ ಅನುವಾದ : ಎಮ್. ಉಬೈದುಲ್ಲಾ)**

■

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಭಾರತದ ಪ್ರವಾದಿಗಳು

♦ ಮೌಲವಿ ಮುಬಶ್ಶಿರ್ ಅಹ್ಮದ್ ಖಾದಿಮ್,
ಪ್ರಾಧ್ಯಾಪಕ, ಜಾಮಿಅ ಅಹ್ಮದಿಯಾ ಖಾದಿಯಾನ್

آمَنَ الرَّسُولُ بِمَا أُنزِلَ إِلَيْهِ مِن رَّبِّهِ وَالْمُؤْمِنُونَ ۚ
كُلٌّ آمَنَ بِاللَّهِ وَمَلَائِكَتِهِ وَكُتُبِهِ وَرُسُلِهِ
لَا نُفَرِّقُ بَيْنَ أَحَدٍ مِّن رُّسُلِهِ ۚ وَقَالُوا سَمِعْنَا وَأَطَعْنَا ۖ
غُفْرَانَكَ رَبَّنَا وَإِلَيْكَ الْمَصِيرُ ﴿٢٨٦﴾

**ಆಮನರ್‌ರಸೂಲು ಬಿಮಾ ಉನ್‌ಝಿಲ ಇಲೈಹಿ ಮಿನ್ ರಬ್ಬಿಹೀ ವಲ್ ಮುಅ್‌ಮಿನೂನ ಕುಲ್ಲುನ್ ಆಮನ ಬಿಲ್ಲಾಹಿ ವ ಮಲಾಇಕತಿಹೀ ವ ಕುತುಬಿಹೀ ವ ರುಸುಲಿಹೀ ಲಾ ನುಫರ್ರಿಖು ಬೈನ ಅಹದಿನ್ ಮಿನ್ ರುಸುಲಿಹೀ ವ ಖಾಲೂ ಸಮಿಅ್‌ನಾ ವ ಅತಅ್‌ನಾ ಗುಫ್‌ರಾನಕ ರಬ್ಬನಾ ವ ಇಲೈಕಲ್ ಮಸೀರ್. (2:286).**

ಮನುಷ್ಯನು ಅಲ್ಲಾಹನ ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠನಾಗಿದ್ದಾನೆ. ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿದುದರ ಉದ್ದೇಶವನ್ನು ವಿವರಿಸುತ್ತಾ, ಅವನು ತನ್ನನ್ನು ಸೃಷ್ಟಿಸಿದ ದೇವನನ್ನು ಗುರುತಿಸಿ ಅವನೊಂದಿಗೆ ತನ್ನ ಸಂಬಂಧ ಸ್ಥಾಪಿಸಬೇಕು ಎಂದು ಹೇಳುತ್ತಾನೆ. ಈ ಉದ್ದೇಶವನ್ನು ಈಡೇರಿಸಲು ದೇವನು ಮನುಷ್ಯನಿಗೆ ಹೊಣೆಗಾರಿಕೆಗಳನ್ನು ನೆನಪಿಸಿಕೊಡಲು ವಿವಿಧ ಕಾಲಘಟ್ಟಗಳಲ್ಲಿ ಪ್ರತಿಯೊಂದು ಕೋಮಿನಲ್ಲಿಯೂ ಪ್ರದೇಶದಲ್ಲಿಯೂ ತನ್ನ ಪ್ರವಾದಿಗಳನ್ನು, ಋಷಿಗಳನ್ನು, ಮುನಿಗಳನ್ನು ಕಳುಹಿಸಿಕೊಟ್ಟನು. ಆ ಮೂಲಕ ಮನುಷ್ಯನಿಗೆ ಅವನನ್ನು ಸೃಷ್ಟಿಸಿದುದರ ಮೂಲ ಉದ್ದೇಶವೇನೆಂದು ತಿಳಿಸಿಕೊಡಲಾಯಿತು. ಲೋಕಕ್ಕೆ ಆಗಮಿಸಿದ ದೇವ ನಿಯೋಜಿತ ಸಂದೇಶವಾಹಕರು ಮನುಷ್ಯರಿಗೆ ಸೃಷ್ಟಿಕರ್ತನ ಬಗ್ಗೆ ತಿಳಿಸಿದರು. ಸೃಷ್ಟಿಕರ್ತನೊಂದಿಗೆ ದೃಢವಾದ ಸಂಬಂಧವನ್ನು ಮನುಷ್ಯರು ಸ್ಥಾಪಿಸುವಂತೆ ಮಾಡಿದರು. ಆದರೆ ದುರದೃಷ್ಟಕರವಾದುದೇನೆಂದರೆ, ಜನರು ತಮ್ಮ ಪ್ರದೇಶಕ್ಕೆ ಆಗಮಿಸಿದ ದೇವ ನಿಯೋಜಿತ ಸಂದೇಶವಾಹಕರನ್ನು ನಂಬಿದರು. ಆದರೆ ಅವರು ಬೇರೆ ಸಂದೇಶವಾಹಕರನ್ನು ನಿರಾಕರಿಸಿದರಲ್ಲದೆ ಅವರನ್ನು ಹೀನೈಸುವುದರ ಬಗ್ಗೆ ಯಾವ ನಾಚಿಕೆಯನ್ನೂ ಹೊಂದಲಿಲ್ಲ.

ಪವಿತ್ರ ಖುರ್‌ಆನ್ ಎಂತಹ ಧಾರ್ಮಿಕ ಪವಿತ್ರ ಗ್ರಂಥವಾಗಿದೆ ಎಂದರೆ ಅದು ಹೀಗೆ ಉಪದೇಶಿಸುತ್ತದೆ: ಲೋಕಕ್ಕೆ ಆಗಮಿಸಿದ ಎಲ್ಲ ಪ್ರವಾದಿಗಳನ್ನೂ ಋಷಿ, ಮುನಿ, ಅವತಾರ ಪುರುಷರನ್ನು ಅವರು ಯಾವ ದೇಶಕ್ಕೆ ಅಥವಾ ಕೋಮಿಗೆ ನಿಯೋಜಿಸಲ್ಪಟ್ಟಿದ್ದರೂ ಅವರನ್ನು ಗೌರವಿಸುವುದು ಆವಶ್ಯಕವಾಗಿದೆಯಲ್ಲದೆ ಅವರನ್ನು ನಂಬುವುದು ಸಹ ಆವಶ್ಯಕವಾಗಿದೆ. ನಾನು ಪ್ರಾರಂಭದಲ್ಲಿ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದ ಅರ್ಥ ಹೀಗೆ:

**"(ನಮ್ಮ) ಈ ಸಂದೇಶವಾಹಕ ತನ್ನ ಪ್ರಭುವಿನಿಂದ ತನಗೆ ಅವತೀರ್ಣಗೊಂಡದ್ದರಲ್ಲಿ ವಿಶ್ವಾಸವಿಟ್ಟಿರುತ್ತಾರೆ. (ಹಾಗೆಯೇ ಇತರ) ಸತ್ಯವಿಶ್ವಾಸಿಗಳು ಸಹ ವಿಶ್ವಾಸವಿಟ್ಟಿರುತ್ತಾರೆ. (ಅವರು) ಎಲ್ಲರೂ ಅಲ್ಲಾಹನಲ್ಲೂ ಅವನ ದೂತರಲ್ಲೂ ಅವನ ಗ್ರಂಥಗಳಲ್ಲೂ ಅವನ ಸಂದೇಶವಾಹಕರಲ್ಲೂ ವಿಶ್ವಾಸವಿಟ್ಟಿರುತ್ತಾರೆ. 'ಅಲ್ಲಾಹನ ಸಂದೇಶವಾಹಕರ ಮಧ್ಯೆ ನಾವು ವ್ಯತ್ಯಾಸವನ್ನೇನೂ ಕಲ್ಪಿಸುವುದಿಲ್ಲ' (ಎಂದು ಅವರು ಹೇಳುತ್ತಾರೆ). 'ನಾವು (ಅಲ್ಲಾಹನ ಆಜ್ಞೆಯನ್ನು) ಕೇಳಿ (ಹೃತ್ಪೂರ್ವಕವಾಗಿ) ಅನುಸರಿಸಿದ್ದೇವೆ' ಎಂದು ಸಹ ಅವರು ಹೇಳುತ್ತಾರೆ. 'ನಮ್ಮ ಪ್ರಭೂ, ನಾವು ನಿನ್ನಲ್ಲಿ ಕ್ಷಮೆಯಾಚನೆ ಮಾಡುತ್ತೇವೆ. ನಿನ್ನೆಡೆಗೆಯೇ (ನಮ್ಮ) ಮರಳಿಕೆ' (ಎಂದು ಅವರು ಪ್ರಾರ್ಥಿಸುತ್ತಾರೆ)."** (2:286).

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಎಷ್ಟು ಪ್ರಿಯಕರವಾದ ಉಪದೇಶ ನೀಡಲಾಗಿದೆ ಎಂದು ನೋಡಿರಿ. ಹೇ ಜನರೇ, ಎಲ್ಲ ಪ್ರವಾದಿಗಳನ್ನೂ ಎಲ್ಲ ಧಾರ್ಮಿಕ ಗ್ರಂಥಗಳನ್ನೂ ನಂಬಿರಿ. ಅವರಿಗೆ ಸಂಬಂಧಿಸಿ ವ್ಯತ್ಯಾಸದ ಮನೋಭಾವ ಹೊಂದಬೇಡಿರಿ. ಕೆಲವರನ್ನು ನಂಬಿ ಬೇರೆ ಕೆಲವರನ್ನು ನಿರಾಕರಿಸಬೇಡಿರಿ ಎಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತಿದೆ.

ಪವಿತ್ರ ಖುರ್‌ಆನ್ ಇನ್ನೊಂದು ವಚನದಲ್ಲಿ ಹೀಗೆ ಹೇಳುತ್ತದೆ: **ಇನ್ನಾ ಅರ್‌ಸಾಲನಕ ಬಿಲ್ ಹಖ್ಖಿ ಬಶೀರನ್ ವ ನಧೀರನ್ ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಧೀರ್** – "ದಿಟವಾಗಿಯೂ ನಾವು ನಿನ್ನನ್ನು ಸತ್ಯದೊಂದಿಗೆ ಶುಭ ಸಮಾಚಾರ ಅರುಹುವವನಾಗಿಯೂ ಮುನ್ನೆಚ್ಚರಿಕೆ ನೀಡುವವನಾಗಿಯೂ ಕಳುಹಿಸಿದ್ದೇವೆ. ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವುದೇ ಜನಾಂಗವಿಲ್ಲ." (ಪವಿತ್ರ ಖುರ್‌ಆನ್ 35:25).

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಲೋಕದ ಪ್ರತಿಯೊಂದು ಜನಾಂಗಕ್ಕೆ ನಿಯೋಜಿತರಾಗಿದ್ದ ಪ್ರವಾದಿ ಮತ್ತು ಸಂದೇಶವಾಹಕರ ಬಗ್ಗೆ ಪ್ರಸ್ತಾಪಿಸಿ ಅವರನ್ನು ನಂಬಬೇಕೆಂದು ಮತ್ತು ಗೌರವಿಸಬೇಕೆಂದು ಮುಸ್ಲಿಮರಿಗೆ ಆಜ್ಞಾಪಿಸಲಾಗಿದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅಲೈಹಿಸ್ಸಲಾಮ್) ಹೇಳುತ್ತಾರೆ: "ಇಸ್ಲಾಮ್ ಎಂತಹ ಸೌಹಾರ್ದ ಸ್ಥಾಪಿಸುವ ಧರ್ಮವಾಗಿದೆ ಎಂದರೆ ಅದು ಯಾವುದೇ ಕೋಮಿನ ಧಾರ್ಮಿಕ ನಾಯಕರನ್ನು ದೂಷಿಸುವುದಿಲ್ಲ. ಪವಿತ್ರ ಖುರ್‌ಆನ್ ಜನಾಂಗಗಳ ಮಧ್ಯೆ ಸೌಹಾರ್ದ ಸ್ಥಾಪನೆಗೆ ಅಸ್ತಿಭಾರ ಹಾಕಿದೆಯಲ್ಲದೆ ಪ್ರತಿಯೊಂದು ಜನಾಂಗಕ್ಕೆ ಆಗಮಿಸಿದ ಪ್ರವಾದಿಗಳನ್ನು ಅಂಗೀಕರಿಸಿದೆ." (ಪೈಗಾಮೆ ಸುಲ್ಹ್ ಪುಟ 30).

ಪವಿತ್ರ ಖುರ್‌ಆನಿನ ಈ ತತ್ವಗಳಿಗೆ ಅನುಸಾರವಾಗಿ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ಹೇಳಿದ್ದಾರೆ: "ಲೋಕದಲ್ಲಿ ಇಷ್ಟರ ತನಕ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಗತಿಸಿ ಹೋಗಿದ್ದಾರೆ."

ಇಸ್ಲಾಮಿನ ಈ ಉಪದೇಶಗಳ ಪ್ರಕಾರ ಒಬ್ಬ ಮುಸ್ಲಿಮನು ಸತ್ಯಸಂಧನಾದ ಮುಸ್ಲಿಮನಾಗಲು ಹಝ್ರತ್ ಮುಹಮ್ಮದ್

ಪೈಗಂಬರರನ್ನೂ[ಸ] ಪವಿತ್ರ ಖುರ್‌ಆನನ್ನೂ ನಂಬುವುದರೊಂದಿಗೆ ಲೋಕದಲ್ಲಿ ನಿಯೋಜಿಸಲ್ಪಟ್ಟ ಎಲ್ಲ ಪ್ರವಾದಿಗಳನ್ನೂ ಅವರಿಗೆ ಅವತೀರ್ಣವಾದ ಗ್ರಂಥಗಳನ್ನೂ ನಂಬುವುದು ಆವಶ್ಯಕವಾಗಿದೆ. ಅವರನ್ನು ಗೌರವಿಸುವುದೂ ಆವಶ್ಯಕವಾಗಿದೆ – ಆ ಪ್ರವಾದಿಗಳು ಯಾವ ದೇಶದಲ್ಲಿ ಅಥವಾ ಯಾವ ಜನಾಂಗದಲ್ಲಿ ಆಗಮಿಸಿದ್ದರೂ.

## ಮಹಾತ್ಮ ಶ್ರೀಕೃಷ್ಣ

ನಮ್ಮ ದೇಶವಾದ ಹಿಂದೂಸ್ಥಾನದಲ್ಲಿ ಬಹಳ ಉನ್ನತ ಸ್ಥಾನ ಪಡೆದ ಅತ್ಯಂತ ಗೌರವಾರ್ಹ ಪ್ರವಾದಿ ಆಗಮಿಸಿದ್ದರು. ಅವರ ಹೆಸರು ಶ್ರೀಕೃಷ್ಣ ಎಂದು. ಅವರು ದೇವನಿಗೆ ಪ್ರಿಯರಾಗಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹಿಂದೂಸ್ಥಾನದಲ್ಲಿ ಆಗಮಿಸಿದ್ದ ಒಬ್ಬ ಮಹಾನ್ ಪ್ರವಾದಿ ಬಗ್ಗೆ ಬಹಳ ಪ್ರೀತಿಯಿಂದ ಪ್ರಸ್ತಾಪಿಸಿ ಅವರು ಸತ್ಯವಂತರಾದ ಪ್ರವಾದಿ ಎಂದು ಘೋಷಿಸಿ ಹೀಗೆ ಹೇಳಿದ್ದಾರೆ: **ಕಾನಫಿಲ್ ಹಿಂದಿ ನಬಿಯ್ಯನ್ ಅಸ್‌ವದಲ್ಲೌನಿ ಇಸ್‌ಮುಹು ಕಾಹಿನ** – ಹಿಂದೂಸ್ಥಾನದಲ್ಲಿ ಒಬ್ಬ ಮಹಾನ್ ಪ್ರವಾದಿ ಆಗಮಿಸಿದ್ದರು. ಅವರ ಬಣ್ಣ ಕಪ್ಪಾಗಿದ್ದು ಕಾಹಿನ ಎಂಬ ಹೆಸರು ಹೊಂದಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಕೃತಜ್ಞತೆಗಳು ಸಲ್ಲಲಿ. ಅವರು ಮಹಾತ್ಮ ಶ್ರೀಕೃಷ್ಣರ ಬಗ್ಗೆ ಎಷ್ಟು ಪ್ರೀತಿಯಿಂದ ಪ್ರಸ್ತಾಪಿಸಿರುವರೆಂದರೆ ಮುಸ್ಲಿಮರ ಹೃದಯಗಳಲ್ಲಿ ಶ್ರೀಕೃಷ್ಣರಿಗೋಸ್ಕರ ಪ್ರೀತಿಯನ್ನು ತುಂಬಿಸಿರುವರು.

ಈ ಕಾಲಘಟ್ಟದ ಶಾಂತಿಯ ರಾಜಕುಮಾರ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಮಹಾತ್ಮ ಶ್ರೀಕೃಷ್ಣರ ಬಗ್ಗೆ ಪ್ರೀತಿಯಿಂದ ಹೇಳಿದರು: ಶ್ರೀಕೃಷ್ಣರು ತಮ್ಮ ಕಾಲದ ಪ್ರವಾದಿ ಮತ್ತು ಅವತಾರವಾಗಿದ್ದರು. ದೇವನು ಅವರೊಂದಿಗೆ ಮಾತನಾಡುತ್ತಿದ್ದನು. (ಪೈಗಾಮೆ ಸುಲ್ಹ್ ಪುಟ 7).

ಇನ್ನೊಂದು ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿದರು: ನನಗೆ ತಿಳಿಸಿದ ಪ್ರಕಾರ ಮಹಾತ್ಮ ಶ್ರೀಕೃಷ್ಣ ವಾಸ್ತವಿಕವಾಗಿ ಎಂತಹ ಪರಿಪೂರ್ಣ ಮನುಷ್ಯರಾಗಿದ್ದಾರೆಂದರೆ ಅವರು ದೇವನಿಂದ ಜಯಗೊಳಿಸಲ್ಪಟ್ಟವರಾಗಿದ್ದರು..... ಅವರು ಆರ್ಯಾವರ್ತವನ್ನು ಪಾಪಗಳಿಂದ ಮುಕ್ತವಾಗಿ ಸ್ವಚ್ಛವಾಗುವಂತೆ ಮಾಡಿದರು. ಅವರು ತಮ್ಮ ಕಾಲದ ಪ್ರವಾದಿಯಾಗಿದ್ದರು..... ಅವರು ಒಳಿತಿನೊಂದಿಗೆ ಪ್ರೀತಿ ಮತ್ತು ಕೆಡುಕಿನ ವಿರುದ್ಧ ಹಗೆತನ ಹೊಂದಿದ್ದರು..... ಆದುದರಿಂದ ನಾನು ಶ್ರೀಕೃಷ್ಣರನ್ನು ಪ್ರೀತಿಸುತ್ತೇನೆ. (ಲೆಕ್ಚರ್ ಸಿಯಾಲ್‌ಕೋಟ್).

## ಮಹಾತ್ಮ ಶ್ರೀರಾಮಚಂದ್ರ

ನಮ್ಮ ಪ್ರಿಯ ದೇಶದಲ್ಲಿ ಇನ್ನೊಬ್ಬ ವೈಭವಶಾಲಿ ಪ್ರವಾದಿ ಜನಿಸಿದ್ದರು. ಅವರ ಹೆಸರು ಮಹಾತ್ಮ ಶ್ರೀರಾಮಚಂದ್ರ. ಅವರು ದೇವನ ಪ್ರೀತಿಗೆ ಪಾತ್ರರಾದವರೂ ಮಾನವರನ್ನು ಪ್ರೀತಿಸುವವರೂ ಜಾತಿ ವ್ಯವಸ್ಥೆಯನ್ನು, ಉಚ್ಚ ನೀಚ ಎಂಬ ಗೋಡೆಗಳನ್ನು ಮುರಿದು ಹಾಕುವವರೂ ತನ್ನ ಪಿತನಿಗೆ ವಿಧೇಯತೆಯನ್ನು ತೋರಿಸಿದವರೂ ಅಧಿಕಾರವನ್ನು ತ್ಯಜಿಸಿ ವನವಾಸದ ಸರಳ ಜೀವಿತ ನಡೆಸಿದವರೂ ಪ್ರಕೃತಿಯನ್ನು ಪ್ರೀತಿಸಿದವರೂ ಏಕದೇವ ವಿಶ್ವಾಸಿಯೂ ಆಗಿದ್ದರು. ಸತ್ಯವೇ ಯಾವಾಗಲೂ ಜಯಗಳಿಸುವುದು ಎಂದು ಅವರ ಜೀವಿತದಿಂದ ನಮಗೆ ಸಂದೇಶ ಲಭಿಸುತ್ತದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೇಳುತ್ತಾರೆ: "ರಾಜಾ ರಾಮಚಂದ್ರ ಮತ್ತು ರಾಜಾ ಕೃಷ್ಣ ಅವರಿಬ್ಬರೂ ದೇವನ ಸಾಮೀಪ್ಯ ಗಳಿಸಿದವರೂ ಅವತಾರ ಪುರುಷರೂ ಆಗಿದ್ದರು. ದೇವನ ಪ್ರಕಾಶ ಅವರ ಮೇಲೆ ಅವತೀರ್ಣಗೊಂಡಿತ್ತು." (ಸನಾತನ ಧರ್ಮ ಪುಟ 10).

ಶಾಂತಿಯ ರಾಜಕುಮಾರರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೇಳುತ್ತಾರೆ: "ಲೋಕಕ್ಕೆ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ನಂಬುವುದು ಅತ್ಯಂತ ಪ್ರಿಯಕರವಾದ ಶಾಂತಿ ಮತ್ತು ಸೌಹಾರ್ದ ಸಂಬಂಧವನ್ನು ಸ್ಥಾಪಿಸಲು ಅಸ್ತಿಭಾರ ಹಾಕುವ ಮತ್ತು ನೈತಿಕ ಸ್ಥಿತಿಗಳಿಗೆ ಸಹಾಯ ಮಾಡುವ ತತ್ವವಾಗಿದೆ. ಪ್ರವಾದಿಗಳು ಹಿಂದೂಸ್ಥಾನದಲ್ಲಿ ಆಗಮಿಸಿದವರಾಗಿರಲಿ, ಪರ್ಶಿಯಾ, ಚೈನಾ ಅಥವಾ ಬೇರೆ ಯಾವುದೇ ದೇಶದಲ್ಲಿ ಆಗಮಿಸಿದವರಾಗಿರಲಿ ದೇವನು ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಆ ಪ್ರವಾದಿಗಳ ಬಗ್ಗೆ ಗೌರವಾದರಗಳನ್ನು ಸ್ಥಾಪಿಸಿರುವನು. ಅವರ ಧರ್ಮಗಳ ಬೇರುಗಳನ್ನು ನೆಲೆನಿಲ್ಲಿಸಿರುವನು. ಅನೇಕ ಶತಮಾನಗಳಿಂದ ಆ ಧರ್ಮಗಳು ಚಲಾವಣೆಯಲ್ಲಿವೆ. ನಮಗೆ ಪವಿತ್ರ ಖುರ್‌ಆನ್ ಇದೇ ತತ್ವವನ್ನು ಕಲಿಸಿದೆ. ಈ ತತ್ವವನ್ನು ಅನುಸರಿಸಿ ನಾವು ಪ್ರತಿಯೊಂದು ಧರ್ಮದ ಪ್ರವಾದಿಗಳನ್ನು ಮೇಲೆ ವಿವರಿಸಿದ ರೀತಿ ಅವರ ಜೀವಿತಕ್ಕೆ ಅನ್ವಯಿಸುವುದಾದರೆ, ಅವರು ಹಿಂದುಗಳ ಧರ್ಮದ ಪ್ರವಾದಿಯಾಗಿದ್ದರೂ ಫಾರಸಿಗಳ ಧರ್ಮದ ಪ್ರವಾದಿಯಾಗಿದ್ದರೂ ಚೀನೀಯರ ಧರ್ಮದ ಪ್ರವಾದಿಯಾಗಿದ್ದರೂ ಯಹೂದಿಯರ ಧರ್ಮದ ಪ್ರವಾದಿಯಾಗಿದ್ದರೂ ಕ್ರೈಸ್ತ ಧರ್ಮದ ಪ್ರವಾದಿಯಾಗಿದ್ದರೂ ನಾವು ಗೌರವಿಸುತ್ತೇವೆ." (ತುಹ್‌ಫ ಖೈಸರಿಯ್ಯ ಪುಟ 7).

ಮಹಾತ್ಮ ಶ್ರೀರಾಮಚಂದ್ರರ ಬಗ್ಗೆ ಕೋಟಿಗಟ್ಟಲೆ ಜನರಲ್ಲಿ ಪ್ರೀತ್ಯಾದರಗಳಿವೆ. ಆದುದರಿಂದ ಅಹ್ಮದಿಯಾ ಜಮಾಅತಿನ ಪವಿತ್ರ ಸ್ಥಾಪಕರು ಪ್ರಸ್ತಾಪಿಸಿದ ಮೇಲೆ ವಿವರಿಸಿದ ತತ್ವಗಳ ಪ್ರಕಾರ ಅವರು ದೇವನ ಪ್ರಿಯ ಸತ್ಯ ಪ್ರವಾದಿ ಆಗಿದ್ದರು.

ಇನ್ನೊಂದು ಕಡೆಯಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೇಳುತ್ತಾರೆ: "ಹಝ್ರತ್ ಮೂಸಾ[ಅ], ಹಝ್ರತ್ ಈಸಾ[ಅ] ಮತ್ತು ಇತರ ಪ್ರವಾದಿಗಳೆಲ್ಲರೂ ಪರಿಶುದ್ಧರೂ ಮಹಾಪುರುಷರೂ ದೇವನಿಂದ ಆಯ್ಕೆಗೊಂಡವರೂ ಆಗಿದ್ದರು. ಇದೇ ರೀತಿ ಆರ್ಯಾವರ್ತದಲ್ಲಿ ಯಾವ ಮಹಾಪುರುಷರಿಗೆ ದೇವನು ಮಾರ್ಗದರ್ಶನವನ್ನು ಅವತೀರ್ಣಗೊಳಿಸಿದನೋ ಆ ಜನರು ಮತ್ತು ಅನಂತರ ಆಗಮಿಸಿದ ಆರ್ಯರ ಮಹಾಪುರುಷರಾದ ಶ್ರೀರಾಮಚಂದ್ರ ಮತ್ತು ಶ್ರೀಕೃಷ್ಣ ಇವರೆಲ್ಲ ಪರಿಶುದ್ಧ ಜನರಾಗಿದ್ದರು ಮತ್ತು ದೇವನು ಅನುಗ್ರಹಿಸಿದ ಜನರಲ್ಲಿ ಸೇರಿದವರಾಗಿದ್ದರು." (ರೂಹಾನೀ ಖಝಾಇನ್ ಸಂಪುಟ 23 ಪುಟ 383).

## ಮಹಾತ್ಮ ಗೌತಮ ಬುದ್ಧ

ಹಿಂದೂಸ್ಥಾನವೆಂಬ ಭವ್ಯ ಶ್ರೇಷ್ಠ ಪುಣ್ಯ ಭೂಮಿಯಲ್ಲಿ ಇನ್ನೊಬ್ಬ ಗೌರವಾರ್ಹ ಪ್ರವಾದಿ ಜನಿಸಿದ್ದರು. ಅವರ ಹೆಸರು ಗೌತಮಬುದ್ಧ ಎಂದಾಗಿತ್ತು. ಅವರು ಹಿಂಸೆಯನ್ನು ವಿರೋಧಿಸುವವರೂ ಸರಳ ಜೀವನ ನಡೆಸುತ್ತಿದ್ದವರೂ ದೇವಜ್ಞಾನ ಗಳಿಸಿದವರೂ ಆಗಿದ್ದ ಪ್ರವಾದಿಯಾಗಿದ್ದರು.

ಅವರು ನೀಡಿದ ಉಪದೇಶ ಹೀಗಿತ್ತು – ಯಾವುದೇ ಜೀವಿಯನ್ನು ಹಿಂಸಿಸಬಾರದು, ಕೆಟ್ಟ ಮಾರ್ಗಗಳಿಂದ ಆಶಾಭಿಲಾಷೆಗಳನ್ನು ಮನುಷ್ಯರು ಈಡೇರಿಸಬಾರದು, ಬಲಾತ್ಕಾರದಿಂದ ಇನ್ನೊಬ್ಬನಿಂದ ಏನನ್ನೂ ಕಿತ್ತುಕೊಳ್ಳಬಾರದು, ಸುಳ್ಳು ಹೇಳಬಾರದು. ಸುಳ್ಳು ಆರೋಪವನ್ನು ಯಾರ ವಿರುದ್ಧವೂ ಮಾಡಬಾರದು, ದುರಾಶೆ, ದ್ವೇಷ ಮತ್ತು ಮೋಸದಿಂದ ದೂರ ಸರಿಯಬೇಕು. ಧರ್ಮದ ಮೂಲ ತತ್ವ ಪ್ರೀತಿಯಾಗಿದೆ. ಸರಳ ಜೀವನ, ಮೃದು ಹೃದಯ, ಆವಶ್ಯಕತೆಗಳಿಗೆ ಅನುಸರಿಸಿ ಮಾತ್ರ ಖರ್ಚು ಮಾಡುವುದು ವಾಸ್ತವಿಕ ತತ್ವಗಳಾಗಿವೆ. ಮಹಾತ್ಮ ಗೌತಮ ಬುದ್ಧ ಹೇಳಿದರು: "ನನ್ನನ್ನು ಗೌರವಿಸಲು ಇಚ್ಛಿಸುವವನು ರೋಗಿಗಳಿಗೂ ಬಡವರಿಗೂ ಬಲಹೀನರಿಗೂ ಸಹಾಯ ಮಾಡಬೇಕು. ದ್ವೇಷದಿಂದ ದ್ವೇಷ ನಿವಾರಣೆ ಆಗಲಾರದು. ಪ್ರೀತಿಯಿಂದ ದ್ವೇಷವನ್ನು ದೂರಸರಿಸಬಹುದಾಗಿದೆ. ಈ ರೀತಿ ಹೃದಯದಲ್ಲಿ ಸಂತೃಪ್ತಿಗಳಿಸಬಹುದಾಗಿದೆ."

ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್[ರ] ಹೀಗೆ ಹೇಳುತ್ತಾರೆ: "ಪವಿತ್ರ ಖುರ್‌ಆನಿನ ನಿಲುವು ಬೇರೆಯೇ ಆಗಿದೆ. ಅದು ಎಲ್ಲ ಪ್ರವಾದಿಗಳನ್ನು ಪರಿಶುದ್ಧರೆಂದೂ ಸತ್ಯವಂತರೆಂದೂ ಹೇಳುತ್ತದೆ. ಆ ಮೂಲಕ ಪವಿತ್ರ ಖುರ್‌ಆನ್ ಎಲ್ಲ ಪ್ರವಾದಿಗಳಿಗೆ ಲಭಿಸಿದ ದೇವ ಸಂದೇಶವಾಣಿಗಳನ್ನು ಸತ್ಯವೆಂದು ಗಣಿಸಲು ಸೂಚ್ಯವಾಗಿ ಆಜ್ಞಾಪಿಸುತ್ತದೆ. ಆ ಮೂಲಕ ಲೋಕದಲ್ಲಿ ಶಾಂತಿ ಸ್ಥಾಪಿಸುವ ಮಾರ್ಗ ತೆರೆಯುತ್ತದೆ. ಏಕೆಂದರೆ ಶ್ರೀಕೃಷ್ಣ, ಶ್ರೀರಾಮಚಂದ್ರ, ಶ್ರೀ ಝರಾತುಷ್ಟ್ರ ಮೊದಲಾದವರಿಗೆ ದೇವನು ತನ್ನ ಸಂದೇಶವಾಣಿ ಅವತೀರ್ಣ ಗೊಳಿಸಿದ್ದಾನೆಂದು ಮುಸ್ಲಿಮನು ಅಂಗೀಕರಿಸುವಾಗ ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಆ ಮಹಾಪುರುಷರ ಜೀವಿತವು ಪರಿಶುದ್ಧವಾಗಿತ್ತೆಂದು ನಂಬುತ್ತಾನೆ. ಅವರ ಮೇಲೆ ಅವರ ಅನುಯಾಯಿಗಳು ಅಥವಾ ವಿರೋಧಿಗಳು ಮಾಡುವ ಆಕ್ಷೇಪಗಳನ್ನು ತಪ್ಪೆಂದೂ ನಿರಾಧಾರವೆಂದೂ ಹೇಳುವನು ಮತ್ತು ಅವರನ್ನೆಲ್ಲ ಗೌರವಿಸುವನು ಮತ್ತು ಆ ರೀತಿ ಲೋಕದಲ್ಲಿ ಶಾಂತಿ ಸ್ಥಾಪಿತವಾಗುವುದು."

(ತಫ್‌ಸೀರ್ ಕಬೀರ್ ಸಂಪುಟ 1 ಪುಟ 144).

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್[ರಹ್] **ರಿವಿಲೇಶನ್ ರೇಶನೇಲಿಟಿ ನೋಲೇಡ್ಜ್ ಆ್ಯಂಡ್ ಟ್ರೂತ್** ಎಂಬ ತನ್ನ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ: "ಮಹಾತ್ಮ ಬುದ್ಧ ದೇವನ ಅಸ್ತಿತ್ವವನ್ನು ನಂಬುವವರಾಗಿದ್ದರು ಎಂದೂ ಅವರನ್ನು ಅಲ್ಲಾಹನು ವಿಶಿಷ್ಟ ಉದ್ದೇಶಕ್ಕೋಸ್ಕರ ಲೋಕಕ್ಕೆ ಪ್ರವಾದಿಯಾಗಿ ಕಳುಹಿಸಿದ್ದನೆಂದೂ ಅಹ್ಮದಿಯಾ ಜಮಾಅತಿನ ಸ್ಥಾಪಕರು ವಾದಿಸಿದ್ದರು."

ಹಝ್ರತ್ ಚತುರ್ಥ ಖಲೀಫ[ರಹ್] ಹೀಗೆ ಸಹ ಹೇಳುತ್ತಾರೆ: "ಮಹಾತ್ಮ ಬುದ್ಧರ ಜೀವನ ಚರಿತ್ರೆ ಅಧ್ಯಯನ ಮಾಡುವಾಗ ಸ್ಪಷ್ಟವಾಗುವುದೇನೆಂದರೆ, ಅವರ ಜೀವಿತ ವಿವಿಧ ಜನಾಂಗಗಳಲ್ಲಿ ಆಗಮಿಸಿದ ಪ್ರವಾದಿಗಳ ಜೀವಿತಕ್ಕಿಂತ ವಿಭಿನ್ನವಾಗಿರಲಿಲ್ಲ. ಎಲ್ಲ ಪ್ರವಾದಿಗಳ ಜೀವಿತದಲ್ಲಿ ಒಂದು ವಿಷಯ ಸಮಾನವಾಗಿರುತ್ತದೆ. ಅದು ಶ್ರೀಬುದ್ಧರ ಜೀವಿತದಲ್ಲೂ ಕಾಣಿಸುತ್ತದೆ. ನಾವು ಪೂರ್ಣವಾದ ದೃಢವಿಶ್ವಾಸದಿಂದ ಹೇಳಬಲ್ಲೆವು – ಬೌದ್ಧ ಧರ್ಮ ದೇವನ ಕಡೆಯಿಂದ ಕಳುಹಿಸಲ್ಪಟ್ಟ ಧರ್ಮವೇ ಆಗಿದೆ ಎಂದು."

**(ಭಾಷಾಂತರ: ಇಬ್ನು ಅ. ರಶೀದ್)**

◆

ಕವನ

# ಕರೆಯೋಲೆ ಇಲ್ಲದೆ ಬರುವ ಅತಿಥಿ

◆ **ನಜ್ಮಾ ಲೈಝ್**

ಸಿಗುವುದಿಲ್ಲ ಒಂದು ನಿಮಿಷದ ಸಮಯ ಕೂಡ
ಸುದ್ದಿ ಇಲ್ಲದೆ ಬರುವ ಈ ಮರಣದ ಮುಂದೆ

ಹೇ ಮನುಷ್ಯಾ, ನಿನ್ನ ಬಳಿಗೆ ಅಡಗಿ ಕೂತಿರುವ
ಈ ಮರಣವನ್ನು ನೀನು ಕಾಣುತ್ತ ಇಲ್ಲವೇ ?

ಈ ಸತ್ಯವನ್ನು ಇಷ್ಟಪಡುವವರು ಯಾರಿದ್ದಾರೆ ?
ಧನಿಕರನ್ನೂ ಯಾಚಕರನ್ನೂ ಒಂದೇ ರೀತಿಯಲ್ಲಿ ಕಾಣುವ ಈ ಮರಣ

ಇದರಿಂದ ಮುಕ್ತರಾಗುವ ಮನುಷ್ಯನು ಯಾರೂ ಇಲ್ಲ ಈ ಲೋಕದಲ್ಲಿ
ಹಾ, ಇದು ಎಷ್ಟು ಸತ್ಯವಾಗಿದೆ ! ಅಲ್ಲಾಹು ತೋರಿಸುವ ಈ ನ್ಯಾಯ

ಅಲ್ಲಾಹು ಹೇಳುವುದು, ಬಂದವನು ಹಿಂತಿರುಗುವನು ಎಂಬ ಈ ಸತ್ಯ
ಮನುಷ್ಯಾ, ನೀನು ಇನ್ನಾದರೂ ವಾಸ್ತವ ಅರ್ಥ ಮಾಡು

ಜೀವನದಲ್ಲಿ ಒಳ್ಳೆಯ ಮನಸ್ಸಿನಿಂದ ಸನ್ಮಾರ್ಗದಲ್ಲಿ ನಡೆ
ಇನ್ನೊಬ್ಬರು ನಮ್ಮನ್ನು ಮಯ್ಯತ್ ಸ್ನಾನ ಮಾಡಿಸಿ ಮಲಗಿಸುವ ಆ ದಿನ

ಖಬರ್ ಎಂಬ ಕತ್ತಲೆಯ ಕೋಣೆಯಲ್ಲಿ ನಾವು ಇರುವುದು
ಎಂದು ತಿಳಿಯುವಾಗ "ಮನ್ ರಬ್ಬುಕ ವಮಾ ದೀನುಕ" ಎಂಬ ವಿಚಾರ

ಆ ದಿನ ನಮಗೆ ಬರುತ್ತದೆ ಎಂದು ನೀವು
ಆಲೋಚಿಸುವುದಿಲ್ಲವೇ ?

◆

# ನೀನು ಮಾಡು – ಮಾಡಬೇಡ

ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್

## 4 – ವಿದ್ಯೆ

1. ನೀನು ಜೀವಿತಾದ್ಯಂತ ವಿದ್ಯಾರ್ಥಿಯಾಗಿರು. 2. ನೀನು ಅಜ್ಞಾನಿಯಾಗಿರಬೇಡ.

3. ನೀನು ಜ್ಞಾನವನ್ನು ಅನುಷ್ಠಾನಕ್ಕೆ ತರಲು ಅಥವಾ ಇತರರಿಗೆ ಕಲಿಸಲು ಕಲಿತುಕೊಳ್ಳು.

4. ನೀನು ನಿನ್ನ ಮಕ್ಕಳಿಗೆ ನಿನಗಿಂತ ಹೆಚ್ಚು ವಿದ್ಯಾಭ್ಯಾಸ ಕೊಡಲು ಪ್ರಯತ್ನಿಸು. 5. ನೀನು ವಿದ್ಯೆಯ ಪ್ರಚಾರಕ್ಕೆ ಪ್ರಯತ್ನಿಸುತ್ತಾ ಇರು.

6. ನೀನು ನಿನ್ನ ಜ್ಞಾನವನ್ನು ಅನ್ಯರೊಂದಿಗೆ ಸಂವಾದಿಸಿ ವರ್ಧಿಸು.

7. ನಿನ್ನ ಸ್ಥಿತಿಗೆ ಅನುಕೂಲವಾಗದ ಮತ್ತು ಹಾನಿಕರವಾದ ವಿದ್ಯೆ ಗಳಿಸಬೇಡ.

8. ನೀನು ಗಳಿಸಿದ ಉಪಯೋಗಕಾರಿ ವಿದ್ಯೆಯನ್ನು ಅಡಗಿಸಬೇಡ. 9. ನೀನು ಯಾವುದಾದರೂ ವಿದ್ಯೆಯಲ್ಲಿ ಪರಿಣಿತನಾಗು.

10. ನೀನು ನೆನಪಿಡು – ಅನುಷ್ಠಾನ ಮೂಲಕ ವಿದ್ಯೆ ಜೀವಂತವಾಗಿರುತ್ತದೆ; ಕೇವಲ ನೆನಪಿಡುವುದರಿಂದಲ್ಲ.

11. ಪ್ರತಿದಿನ ನೀನು ಸ್ವಲ್ಪ ಸಮಯ ಜ್ಞಾನವರ್ಧನೆಗೋಸ್ಕರ ಮೀಸಲಾಗಿಡು. 12. ನೀನು ಪರೀಕ್ಷೆಗಳಲ್ಲಿ ನಕಲು ಹೊಡೆಯಬೇಡ.

13. ನಿನಗೆ ಗೊತ್ತಿಲ್ಲದ ವಿಷಯವನ್ನು ಕೇಳಿ ತಿಳಿದುಕೊಳ್ಳಲು ಹಿಂಜರಿಯದಿರು.

14. ನೀನು ನಿನ್ನ ಎಲ್ಲ ಪ್ರಾಯದಲ್ಲೂ ಯಾವುದಾದರೂ ಪ್ರಯೋಜನಕರ ವಿದ್ಯೆ ಪಡೆಯಲು ಸಾಧ್ಯವಿದೆ.

15. ನೀನು ಉಚ್ಚ ಸ್ವರದಿಂದ ಓದಬೇಡ.

16. ನೀನು ನಿನ್ನ ಮಕ್ಕಳಿಗೆ ಬಹಳ ಸ್ವತ್ತು ಬಿಟ್ಟು ಹೋಗುವುದಕ್ಕಿಂತ ಉತ್ತಮ ನೀನು ಅವರಿಗೆ ಹೆಚ್ಚು ವಿದ್ಯಾಭ್ಯಾಸ ಮಾಡಿಸುವುದಾಗಿದೆ.

17. ಹೇ ವಿದ್ಯಾರ್ಥಿ, ನೀನು ಶಾಲೆ ಕಾಲೇಜುಗಳಿಗೆ ಗೈರುಹಾಜರಿ ಆಗಬೇಡ.

18. ಹೇ ಮಹಿಳೆ, ನಿನ್ನ ಮಗಳಿಗೆ ವಿದ್ಯಾಭ್ಯಾಸ ಮಾಡಿಸುವುದರೊಂದಿಗೆ ಮನೆ ಕೆಲಸ ಸಹ ಕಲಿಸು. ಹೊಲಿಗೆ ಕಲಿಸುವುದೂ ಆವಶ್ಯಕವಾಗಿದೆ.

19. ನಿನ್ನ ಪತ್ನಿ ವಿದ್ಯಾಹೀನಳಾಗಿದ್ದರೆ ಅವಳಿಗೆ ವಿದ್ಯೆ ಕಲಿಸು. 20. ನೀನು ಒಳ್ಳೆಯ ಪುಸ್ತಕಗಳನ್ನು ಖರೀದಿ ಮಾಡುತ್ತಾ ಇರು.

21. ನೀನು ನಗರದಲ್ಲಿರುವ ದೊಡ್ಡ ಗ್ರಂಥಾಲಯದ ಸದಸ್ಯನಾಗು.

22. ನಿನಗೆ ಸ್ವತಃ ಅನುಭವಕ್ಕೆ ಬರದುದನ್ನು ಅನ್ಯರಿಗೆ ಸಾಕ್ಷ್ಯಾಧಾರವಾಗಿ ನೀಡಬೇಡ.

23. ಹೇ ವಿದ್ಯಾರ್ಥಿ, ನೀನು ನಿನಗೆ ವಹಿಸಲಾದ ಹೋಮ್‌ವರ್ಕ್ ಮಾಡದೆ ಇದ್ದರೆ ನೀನು ಅಯೋಗ್ಯನಾಗುವೆ.

24. ಹೇ ವಿದ್ಯಾರ್ಥಿ, ನೀನು ಮನೆಯಲ್ಲಿ ಕೇವಲ ಶಾಲೆಯ ಹೋಮ್‌ವರ್ಕ್ ಮಾತ್ರ ಮಾಡುತ್ತಾ ಇದ್ದರೆ ನೀನು ಮಧ್ಯಮ ದರ್ಜೆಯ ವಿದ್ಯಾರ್ಥಿಯಾಗುವೆ.

25. ಹೇ ವಿದ್ಯಾರ್ಥಿ, ನೀನು ಶಾಲೆಯ ಪಾಠದೊಂದಿಗೆ ಬೇರೆ ಪುಸ್ತಕಗಳನ್ನೂ ಉತ್ಸಾಹದಿಂದ ಓದುವಿಯಾದರೆ ನೀನು ಯೋಗ್ಯನಾಗುವೆ.

26. ನೀನು ನಿನ್ನ ಪುಸ್ತಕಗಳನ್ನು ಗೆದ್ದಲು, ಇಲಿ ಮತ್ತು ಹುಳುಗಳಿಂದ ರಕ್ಷಿಸು.

27. ನೀನು ಬರೆಯುವಾಗ ನೇರವಾದ ಗೆರೆಗಳಲ್ಲಿ ಬರೆಯಲು ಅಭ್ಯಾಸ ಮಾಡು. 28. ನೀನು ವಿದ್ವಾಂಸರನ್ನು ಗೌರವಿಸು.

29. ನೀನು ಪುಸ್ತಕ ಖರೀದಿಸಿದರೆ ಅದನ್ನು ಬೈಂಡ್ ಮಾಡು. ನಿನ್ನ ಹೆಸರು ಅದರೊಳಗೆ ಬರೆದಿಡು. ಬೈಂಡಿನ ಮೇಲೆ ಪುಸ್ತಕದ ಹೆಸರು ಬರೆ.

30. ನೀನು ಬೈಂಡ್ ಮಾಡಿದ ಪುಸ್ತಕವನ್ನು ಬಿಸಿಲಿನಿಂದಲೂ ತೇವದಿಂದಲೂ ರಕ್ಷಿಸು. ಹೀಗೆ ಮಾಡದಿದ್ದರೆ ಅದು ವಕ್ರವಾಗುವುದು.

31. ನೀನು ನಿನ್ನ ಪುಸ್ತಕವನ್ನು ಚಿಕ್ಕ ಮಕ್ಕಳ ಕೈಗೆ ಕೊಡಬೇಡ.

32. ನೀನು ನಿನ್ನ ಪುಸ್ತಕಗಳನ್ನು ತಾತ್ಕಾಲಿಕ ಉಪಯೋಗಕ್ಕೆ ನೀಡುವುದನ್ನು ಆದಷ್ಟು ಕಡಿಮೆಮಾಡು. ಬಹುತೇಕ ಜನರು ಇಂತಹ ಪುಸ್ತಕ ಮರಳಿಸುವುದಿಲ್ಲ.

33. ನೀನು ವಿದ್ಯೆ ಗಳಿಸಲು ಪ್ರಯಾಣವನ್ನೂ ಮಾಡು.

34. ನೀನು ಯಾವಾಗಲೂ ನಿನ್ನ ಅಧ್ಯಾಪಕರನ್ನು ಗೌರವಿಸು – ನೀನು ಅವರಿಂದ ಉನ್ನತ ಸ್ಥಾನಕ್ಕೆ ತಲಪಿದರೂ ಸಹ.

35. ನೀನು ಜ್ಞಾನ ವರ್ಧನೆಗೆ ವಾರ್ತಾ ಪತ್ರಿಕೆಗಳನ್ನೂ ನಿಯತಕಾಲಿಕಗಳನ್ನೂ ಓದುತ್ತಾ ಇರು.

36. ನೀನು ಕೆಟ್ಟದಾಗಿ ತರ್ಕಿಸುವುದನ್ನು ಬಿಟ್ಟುಬಿಡು.

37. ನೀನು ವಿದ್ಯೆಯನ್ನು ಜ್ಞಾನಾರ್ಜನೆಗೋಸ್ಕರ ಕಲಿತುಕೊಳ್ಳು. ಅದರ ಉದ್ದೇಶ ಕೇವಲ ಜೀವನಾಧಾರದ ಸಂಪಾದನೆ ಎಂದು ಭಾವಿಸದಿರು.

38. ನೀನು ಓದುವಾಗ ಬೇರೆಯವರೊಂದಿಗೆ ಮಾತಾಡಬೇಡ.

39. ನೀನು ಮಾತೃ ಭಾಷೆಯೊಂದಿಗೆ, ಧಾರ್ಮಿಕ ಭಾಷೆ ಮತ್ತು ಆಯಾಕಾಲದ ಸರಕಾರಿ ಭಾಷೆ ಸಹ ಕಲಿತುಕೊಳ್ಳು.

40. ನೀನು ಒಂದು ನೋಟ್ ಬುಕ್‌ನಲ್ಲಿ ಪ್ರಯೋಜನಕರ ಮತ್ತು ನೆನಪಿಡಬೇಕಾದ ಮಾತುಗಳನ್ನು ಬರೆದಿಡು.

41. ನೀನು ಶಾಲೆಯಲ್ಲಿ ನಿನ್ನ ಮಗುವಿನ ಸರಿಯಾದ ಜನ್ಮ ದಿನಾಂಕ ದಾಖಲಿಸು. 42. ನೀನು ಚಿಂತನಶೀಲವನ್ನು ಬೆಳೆಸು.

43. ಈಗಿನ ಕಾಲದಲ್ಲಿ ವರ್ತಮಾನ ಪತ್ರಿಕೆಗಳಿಂದ ದೊರಕುವಷ್ಟು ಜ್ಞಾನ ಬೇರೆ ಯಾವುದರ ಮೂಲಕವೂ ಲಭಿಸಲಾರದೆಂದು ತಿಳಿದುಕೊಳ್ಳು.

44. ನೀನು ಯಾವಾಗಲೂ ಬುದ್ಧಿಯನ್ನು ಉಪಯೋಗಿಸು.

45. ನೀನು ಕೇವಲ ಪುಸ್ತಕದ ಹುಳುವಾಗಬೇಡ. ವಿದ್ಯೆಯನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸು.

46. ಹೇ ಅಧ್ಯಾಪಕ, ನೀನು ವಿದ್ಯಾರ್ಥಿಗಳಿಂದ ನಿನ್ನ ಶರೀರವನ್ನು ಒತ್ತಲು ಹೇಳಬೇಡ.

47. ನೀನು ಯಾವಾಗಲೂ ಬುದ್ಧಿಶಕ್ತಿ ಮತ್ತು ಗ್ರಹಿಸುವ ಶಕ್ತಿ ಬೆಳೆಸು.

48. ನೀನು ಅನ್ಯರ ಪುಸ್ತಕ, ಪತ್ರ ಕಾಗದಗಳು ಮೊದಲಾದುವುಗಳನ್ನು ಅನುಮತಿ ಪಡೆಯದೆ ನೋಡಬೇಡ.

49. ನೀನು ಸಂಪತ್ತನ್ನು ಮತ್ತು ಸ್ವತ್ತನ್ನು ಸಂಗ್ರಹಿಸುವುದಕ್ಕಿಂತ ಉತ್ತಮವಾದುದು ನಿನ್ನ ಮಕ್ಕಳಿಗೆ ವಿದ್ಯೆ ಕಲಿಸಿ ಒಳ್ಳೆಯ ತರಬೇತಿ ನೀಡುವುದಾಗಿದೆ.

50. ನೀನು ನೀತಿಪಾಠ ಕಲಿಯಲು ಮತ್ತು ಅನುಭವ ಪಡೆಯಲು ಸಹ ಪ್ರಯಾಣ ಮಾಡುತ್ತಾ ಇರು.

51. ನೀನು ನಿನ್ನ ಮಕ್ಕಳಿಗೆ ಯಾವುದಾದರೂ ವಿಷಯದ ಪ್ರಯೋಜನ ಅಥವಾ ಹಾನಿ ಬಗ್ಗೆ ಸಾಕ್ಷ್ಯಾಧಾರದ ಮೂಲಕ ತಿಳಿಸು. ಕೇವಲ ಆಜ್ಞೆ ಮೂಲಕವಲ್ಲ.

52. ರೋಗ ಬರುವುದಕ್ಕೆ ಮೊದಲು ಮುಂಜಾಗ್ರತೆ ವಹಿಸುವುದು ಚಿಕಿತ್ಸೆಗಿಂತ ಉತ್ತಮವೆಂದು ನೆನಪಿಡು.

## 5 – ಸ್ವಭಾವ ಗುಣಗಳು

1. ಪ್ರಯತ್ನ ಮತ್ತು ಪರಿಶ್ರಮ ಮೂಲಕ ಮನುಷ್ಯನ ಸ್ವಭಾವ ಗುಣಗಳನ್ನು ಬದಲಾಯಿಸಲು ಸಾಧ್ಯವೆಂದು ನೀನು ನೆನಪಿಡು.

2. ನೀನು ನಿನ್ನ ಸ್ವಭಾವ ಗುಣಗಳನ್ನು ಸರಿಪಡಿಸು. ಹಾಗೆ ಮಾಡಿದರೆ ಜನರು ನಿನ್ನಿಂದ ಪ್ರಯೋಜನ ಪಡೆಯುವರು.

3. ನೀನು ನಿನ್ನ ಶಾರೀರಿಕ ಸುಖವನ್ನು ನಿನ್ನ ಉದ್ದೇಶಲಕ್ಷ್ಯವಾಗಿಟ್ಟುಕೊಳ್ಳಬೇಡ.

4. ನೀನು ಬುದ್ಧಿವಂತನಾಗು; ಆದರೆ ಮೋಸಗಾರನಾಗಬೇಡ. 5. ನೀನು ಸಂಪತ್ತು ಸಂಪಾದಿಸು; ಆದರೆ ದುರಾಶೆ ಹೊಂದಬೇಡ.

6. ನೀನು ಹಿರಿಯರ ಮತ್ತು ತಂದೆ ತಾಯಂದಿರ ಸಂಪ್ರೀತಿಯನ್ನು ಆಶಿಸು. ಅವರಿಗೆ ವಿಧೇಯನಾಗಿರು.

7. ನೀನು ಸ್ಥಿರತೆಯನ್ನು ಹೊಂದು. 8. ನೀನು ಪರಿಶ್ರಮಿಸುವ ಅಭ್ಯಾಸ ಮಾಡಿಕೊಳ್ಳು.

9. ನೀನು ಅನ್ಯ ಸ್ತ್ರೀಯರೊಂದಿಗೆ ಒಂಟಿಯಾಗಿ ಕುಳಿತುಕೊಳ್ಳಬೇಡ. 10. ನೀನು ಸಂಗೀತದ ಅಭಿರುಚಿ ಹೊಂದಬೇಡ.

11. ಅಶ್ಲೀಲ ಮಾತು, ಅಶ್ಲೀಲ ಬರಹ ಮತ್ತು ಅಶ್ಲೀಲ ಕೂಟ ಇವುಗಳಿಂದ ದೂರವಿರು.

12. ನೀನು ಅನ್ಯರಿಂದ ಬೇಡದಿರಲು ಪ್ರಯತ್ನಿಸು. 13. ನೀನು ಘನತೆಯೊಂದಿಗೆ ವಿನಯದಿಂದ ವರ್ತಿಸು.

14. ನೀನು ದುಸ್ವಭಾವಿಯಿಂದ ದೂರವಿರು. 15. ನೀನು ನಿನಗೆ ಇಷ್ಟವಿಲ್ಲದುದನ್ನು ಅನ್ಯರಿಗೆ ಇಷ್ಟಪಡಬೇಡ.

16. ನೀನು ಸುಳ್ಳನ್ನು ಸತ್ಯದ ಹಾಗೆ ಪ್ರಸ್ತಾಪಿಸಬೇಡ. 17. ನೀನು ಅನ್ಯ ಸ್ತ್ರೀಯ ಕಡೆಯಿಂದ ಕಣ್ಣಿನ ದೃಷ್ಟಿ ತಗ್ಗಿಸು.

18. ನೀನು ಯಾರಿಗೂ ಅನಾವಶ್ಯಕ ನೋವುಂಟುಮಾಡಬೇಡ.

19. ನೀನು ಯಾವಾಗಲೂ ಧರ್ಮಬದ್ಧ ಸಂಪಾದನೆ ಮಾಡಿ ಜೀವಿಸು. 20. ನೀನು ಲಂಚ ಪಡೆಯಬೇಡ.

21. ನೀನು ನಿನ್ನ ಪ್ರತಿಜ್ಞೆ ಮತ್ತು ವಾಗ್ದಾನ (ಅವು ಶರೀಅತಿಗೆ ವಿರುದ್ಧವಾಗಿಲ್ಲವಾದರೆ) ಈಡೇರಿಸು.

22. ನೀನು ಯಾವುದೇ ಚಟದ ಗುಲಾಮನಾಗದಿರು. 23. ನೀನು ಸರಳವಾಗಿ ಜೀವಿಸು.
24. ನೀನು ಕದಿಯಬೇಡ. 25. ನೀನು ಕೆಟ್ಟ ಕೆಲಸ ಮಾಡಬೇಡ.
26. ನೀನು ಕೊಲ್ಲಬೇಡ. 27. ನೀನು ಹೆಣ್ಣು ಶಿಶುಗಳನ್ನು ಕೊಲ್ಲಬೇಡ.
28. ನೀನು ದರೋಡೆ ಮಾಡಬೇಡ. 29. ನೀನು ದುಂದುವೆಚ್ಚ ಮಾಡಬೇಡ.
30. ನೀನು ಸುಳ್ಳು ಹೇಳಬೇಡ. 31. ನೀನು ಕಷ್ಟಕಾಲದಲ್ಲೂ ವಿಪತ್ಕಾಲದಲ್ಲೂ ಸಹನೆ ತೋರಿಸು.
32. ನೀನು ಚಾಡಿ ಹೇಳಬೇಡ. 33. ನೀನು ಅಮಾನತ್ತಿನಲ್ಲಿ ವಂಚನೆ ಮಾಡಬೇಡ.
34. ನೀನು ಪಡೆದ ಉಪಕಾರಕ್ಕೆ ಕೃತಜ್ಞತೆ ಸೂಚಿಸು. 35. ನೀನು ಸೋಮಾರಿ ಆಗಬೇಡ.
36. ನೀನು ನಿನ್ನ ಬಳಿ ಇರುವುದರಲ್ಲಿ ತೃಪ್ತನಾಗು. 37. ನೀನು ಒಳ್ಳೆಯವರ ಸಹವಾಸ ಮಾಡು.
38. ನೀನು ಬಡವರಿಗೂ ಬಲಹೀನರಿಗೂ ನೆರವು ನೀಡು.
39. ನೀನು ನಿನ್ನ ಶರೀರಕ್ಕಿಂತ ನಿನ್ನ ಯೋಚನೆಗಳನ್ನು ಹೆಚ್ಚು ಶುದ್ಧೀಕರಿಸು.
40. ನೀನು ನಿನ್ನ ನೆರೆಹೊರೆಯವರೊಂದಿಗೆ ಉತ್ತಮವಾಗಿ ವರ್ತಿಸು.
41. ನೀನು ಯಾರಿಗೂ ಅನಾವಶ್ಯಕವಾಗಿ ಕಷ್ಟಕೊಡಬೇಡ. 42. ನೀನು ತೋರಿಕೆಯಿಂದ ದೂರವಿರು.
43. ನೀನು ಯಾರನ್ನೂ ಕೀಳೆಂದು ಭಾವಿಸಬೇಡ. 44. ನೀನು ಯಾರನ್ನೂ ಬೈಯಬೇಡ.
45. ನೀನು ದೇವನ ಸೃಷ್ಟಿಗಳ ಬಗ್ಗೆ ಸಹಾನುಭೂತಿ ಹೊಂದಿ ಅವರ ಹಿತೈಷಿಯಾಗು.
46. ನೀನು ಸಹಿಸುವ ಸ್ವಭಾವ ಬೆಳೆಸಿಕೊಳ್ಳು. 47. ನೀನು ಯಾರ ಹಕ್ಕನ್ನೂ ಅಪಹರಿಸಬೇಡ.
48. ನೀನು ಯಾರನ್ನೂ ಪರಿಹಾಸ ಮಾಡದಿರು. ಯಾರನ್ನೂ ಹೀನೈಸಬೇಡ. 49. ನೀನು ನಿರರ್ಥಕ ಕೆಲಸಗಳನ್ನು ಮಾಡಬೇಡ.
50. ನೀನು ಯಾವಾಗಲೂ ಜಾಗರೂಕತೆಯಿಂದ ಇರು. 51. ನೀನು ಹಾಳು ಹರಟೆಯಲ್ಲಿ ಭಾಗವಹಿಸಬೇಡ.
52. ನಿನಗೆ ಸಿಟ್ಟು ಬಂದರೆ ಮೌನವಾಗಿರು. 53. ನೀನು ಹೇಡಿಯಾಗಬೇಡ.
54. ನೀನು ಎಂದಿಗೂ ನಿರಾಸೆಗೊಳ್ಳಬೇಡ. 55. ನೀನು ಪರದೂಷಣೆ ಮಾಡಬೇಡ, ಆಲಿಸಬೇಡ.
56. ನೀನು ಯಾರ ವಿರುದ್ಧ ಕೂಡ ಕೆಟ್ಟದಾಗಲಿ ಎಂದು ಪ್ರಾರ್ಥಿಸದಿರು. 57. ನೀನು ವಾಗ್ದಾನವನ್ನು ಉಲ್ಲಂಘಿಸಬೇಡ.
58. ನೀನು ಪಿತೂರಿ ಮಾಡಬೇಡ. ದೊಂಬಿ ಗಲಭೆಗಳಲ್ಲಿ ಭಾಗವಹಿಸಬೇಡ. 59. ನೀನು ಅಸೂಯೆ ಪಡಬೇಡ.
60. ನೀನು ನಿನಗೆ ದೇವನಿತ್ತ ಶಕ್ತಿಸಾಮರ್ಥ್ಯಗಳನ್ನು ನಾಶಮಾಡಬೇಡ.
61. ನೀನು ಅನಾವಶ್ಯಕವಾಗಿ ಊಟದ ಬಗ್ಗೆ ಕುಂದುಕೊರತೆ ಹೇಳಬೇಡ.
62. ನೀನು ಹೆಮ್ಮೆಯಿಂದ ನಡೆಯಬೇಡ. 63. ನೀನು ಅವಸರ ಪಡಬೇಡ.
64. ನೀನು ಒಳಿತು ಮಾಡುವುದರಲ್ಲಿ ಸ್ಪರ್ಧಿಸು.
65. ನೀನು ಒಳಿತನ್ನು ಉತ್ಸಾಹದಿಂದ ಮಾಡು. ನೀನು ಪ್ರತಿಯೊಂದು ಕೆಡುಕನ್ನು ಅಸಹ್ಯಪಟ್ಟುಕೊಂಡು ಬಿಟ್ಟುಬಿಡು.
66. ನೀನು ಬೇರೆಯವರ ತಪ್ಪುಗಳನ್ನು ಕಡೆಗಣಿಸುವ ಮತ್ತು ಮರೆಮಾಡುವ ಅಭ್ಯಾಸ ಬೆಳೆಸಿಕೊಳ್ಳು.
67. ನೀನು ಅತಿಥಿ ಸತ್ಕಾರ ಮಾಡುವ ಅಭ್ಯಾಸ ಹೊಂದು. 68. ನೀನು ಅನ್ಯರ ಪತ್ರವನ್ನು ಅನುಮತಿ ಇಲ್ಲದೆ ಓದಬೇಡ.
69. ನೀನು ನಾಲಗೆಯ ರುಚಿಯ ಬಗ್ಗೆ ಗಮನಿಸದಿರು. ನಿನ್ನ ಹೆಂಡತಿ ಮಕ್ಕಳನ್ನೂ ಅದರಿಂದ ರಕ್ಷಿಸು.
70. ನೀನು ನಿನ್ನ ಅಧ್ಯಾಪಕರಿಗೆ, ತಂದೆ ತಾಯಂದಿರಿಗೆ ಅವಿಧೇಯನಾಗಬೇಡ – ಅಲ್ಲಾಹನ ಆಜ್ಞೆಗೆ ಅಡ್ಡಿಯಾಗುವಾಗ ಹೊರತು.

* * * * *

## ಇನ್ಸಾನಿಯತ್ ಝಿಂದಾಬಾದ್
## ಮಾನವೀಯತೆ ಚಿರಕಾಲ ಬಾಳಲಿ

# ಖಲೀಫತುಲ್ ಮಸೀಹರ ಹೊಸ ವರ್ಷ ಸಂದೇಶ

ನಾಳೆ ಇನ್‌ಶಾ ಅಲ್ಲಾಹ್ ಹೊಸ ವರ್ಷ ಆರಂಭವಾಗುತ್ತಿದೆ. ಬರುತ್ತಿರುವ ವರ್ಷವನ್ನು ಅಲ್ಲಾಹನು ಜಮಾಅತಿನ ಪ್ರತಿಯೊಬ್ಬರಿಗೂ ಜಮಾಅತಿಗೂ ಎಲ್ಲ ರೀತಿಯಲ್ಲೂ ಅನುಗ್ರಹೀತವನ್ನಾಗಿ ಮಾಡಲಿ. ಎಲ್ಲ ರೀತಿಯ ಕೆಡುಕುಗಳಿಂದ ಜಮಾಅತನ್ನು ಸಂರಕ್ಷಿಸಲಿ. ಜಮಾಅತಿನ ವಿರುದ್ಧವಾಗಿ ಶತ್ರುಗಳು ನಡೆಸುವ ಪ್ರತಿಯೊಂದು ಯೋಜನೆ ಮಣ್ಣುಪಾಲಾಗಲಿ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಮಾಡಿರುವ ವಾಗ್ದಾನಗಳು ಈಡೇರುವುದಾಗಿ ನಾವು ಸಹ ನಮ್ಮ ಜೀವಿತದಲ್ಲಿ ನೋಡುವಂತಾಗಲಿ. ಅಲ್ಲಾಹನು ನಮಗೆ ಆ ದೃಶ್ಯಗಳನ್ನು ಸಹ ತೋರಿಸಲಿ. ಒಟ್ಟಿನಲ್ಲಿ ಬಹಳವಾಗಿ ಪ್ರಾರ್ಥನೆಗಳನ್ನು ಮಾಡುತ್ತಿರಬೇಕು. ಹೊಸ ವರ್ಷವನ್ನು ಪ್ರಾರ್ಥನೆಯೊಂದಿಗೆ ಪ್ರವೇಶಿಸಿರಿ. ವಿಶೇಷವಾಗಿ ತಹಜ್ಜುದ್ ನಮಾಝನ್ನು ನಿರ್ವಹಿಸಿರಿ. ಕೆಲವು ಮಸೀದಿಗಳಲ್ಲಿ ಅದರ ವ್ಯವಸ್ಥೆಯನ್ನು ಮಾಡಲಾಗಿದೆ. ಎಲ್ಲಿ ಅದರ ಏರ್ಪಾಡು ಮಾಡಲಾಗಿಲ್ಲವೋ ಅಲ್ಲೂ ಮಾಡಬೇಕು. ಜಮಾಅತಿಯಾಗಿ ಇರದಿದ್ದರೆ ಒಬ್ಬಂಟಿಯಾಗಿಯೂ ಮತ್ತು ಮನೆಗಳಲ್ಲೂ ತಹಜ್ಜುದ್ ನಮಾಝನ್ನು ವಿಶೇಷವಾಗಿ ನಿರ್ವಹಿಸಿ ದುಆ ಮಾಡಬೇಕು. ಮೊದಲನೆಯದಾಗಿ ಇದು ಸ್ಥಿರವಾದ ಅಭ್ಯಾಸವಿರಬೇಕು. ಆದರೆ ನಾಳೆಯಿಂದ ಅದನ್ನು ನಿರ್ವಹಿಸುವಾಗ ಅಥವಾ ಇಂದು ರಾತ್ರಿಯಿಂದ ಅದನ್ನು ನಿರ್ವಹಿಸುವಾಗ ಅದನ್ನು ಜೀವಿತದ ಸ್ಥಾಯಿಯಾದ ಭಾಗವನ್ನಾಗಿ ಮಾಡಲು ಪ್ರಯತ್ನಿಸಬೇಕು. ಎಲ್ಲರಿಗೂ ಅಲ್ಲಾಹನು ಅದರ ಸೌಭಾಗ್ಯ ನೀಡಲಿ. ದುರೂದ್ ಶರೀಫ್ ಮತ್ತು ಇಸ್ತಿಗ್.ಫಾರ್ ಅಲ್ಲದೆ,

رَبَّنَا لَا تُزِغْ قُلُوبَنَا بَعْدَ إِذْ هَدَيْتَنَا وَهَبْ لَنَا مِن لَّدُنكَ رَحْمَةً ۚ إِنَّكَ أَنتَ الْوَهَّابُ ﴿٩﴾

ರಬ್ಬನಾ ಲಾ ತುಝಿಗ್. ಖುಲೂಬನಾ ಬಅ್‌ದ ಇಧ್. ಹದೈತನಾ ವಹಬ್‌ಲನಾ ಮಿಲ್ಲದುನ್‌ಕ ರಹ್ಮತನ್ ಇನ್ನಕ ಅಂತಲ್ ವಹ್ಹಾಬ್.

ಎಂಬ ಪ್ರಾರ್ಥನೆಯನ್ನೂ ಮಾಡಿರಿ. (ಅರ್ಥ: 'ಹೇ ನಮ್ಮ ಪ್ರಭೂ, ಸನ್ಮಾರ್ಗವನ್ನು ದಯಪಾಲಿಸಿದ ಬಳಿಕ ನಮ್ಮ ಹೃದಯಗಳು ವಕ್ರಗೊಳ್ಳುವಂತೆ ಮಾಡದಿರು ಮತ್ತು ನಮಗೆ ನಿನ್ನಿಂದ ಕಾರುಣ್ಯವನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ಅತಿ ಹೆಚ್ಚು ದಯಪಾಲಿಸುವವನು ನೀನೇ ಆಗಿರುವೆ.') ಈ ದುಆ ಸಹ ಮಾಡಿರಿ:

رَبَّنَا اغْفِرْ لَنَا ذُنُوبَنَا وَإِسْرَافَنَا فِي أَمْرِنَا وَثَبِّتْ أَقْدَامَنَا وَانصُرْنَا عَلَى الْقَوْمِ الْكَافِرِينَ ﴿١٤٨﴾

ರಬ್ಬನಗ್.ಫಿರ್‌ಲನಾ ಧುನೂಬನಾ ವ ಇಸ್ರಾಫನಾ ಫೀ ಅಮ್ರಿನಾ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್.

(ಅರ್ಥ: 'ನಮ್ಮ ಪ್ರಭೂ, ನಮ್ಮ ಪಾಪಗಳನ್ನೂ ನಮ್ಮ ವರ್ತನೆಯಲ್ಲುಂಟಾದ ಅತಿರೇಕವನ್ನೂ ಕ್ಷಮಿಸು; ನಮ್ಮ ಹೆಜ್ಜೆಗಳನ್ನು ದೃಢಪಡಿಸು ಹಾಗೂ ಅವಿಶ್ವಾಸಿಗಳಿಗೆದುರಾಗಿ ನೀನು ನಮಗೆ ಸಹಾಯ ಮಾಡು') ಪ್ರತಿಯೊಬ್ಬ ಅಹ್ಮದಿಗೂ ಅಲ್ಲಾಹನು ಇದರ ಸೌಭಾಗ್ಯ ನೀಡಲಿ.

(ಖುತ್‌ಬ ಜುಮುಅ – ಖಲೀಫತುಲ್ ಮಸೀಹ್. ದಿನಾಂಕ ಡಿಸೆಂಬರ್ 31, 2021).

ಅಹ್ಮದಿಯಾ ವಾರ್ತೆ

## ಮಜ್ಲಿಸ್ ಅನ್ಸಾರುಲ್ಲಾಹ್ ದ್ವಿತೀಯ ಜಿಲ್ಲಾ ಸಮ್ಮೇಳನ

ಬೆಂಗಳೂರು: ಮಜ್ಲಿಸ್ ಅನ್ಸಾರುಲ್ಲಾಹ್ ದ್ವಿತೀಯ ಜಿಲ್ಲಾ ಸಮ್ಮೇಳನ ಕಳೆದ ಒಕ್ಟೋಬರ್ 3ರಂದು ಬೆಂಗಳೂರಿನ ಅಹ್ಮದಿಯಾ ಮಸ್ಜಿದ್‌ನಲ್ಲಿ ಜರಗಿತು. ಬೆಂಗಳೂರು, ಜಕ್ಕೂರು, ಮಡಿಕೇರಿ, ಗೋಣಿಕೊಪ್ಪಳ ಮತ್ತು ಮಂಗಳೂರು ಜಮಾಅತಿನ ಅನ್ಸಾರುಲ್ಲಾಹ್ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.


ಅಂದು ಬೆಳಿಗ್ಗೆ 4:30ಕ್ಕೆ ತಹಜ್ಜುದ್ ನಮಾಝ್ ನಿರ್ವಹಿಸಲ್ಪಟ್ಟಿತು. 10:30ಕ್ಕೆ ಬೆಂಗಳೂರು ಜಮಾಅತಿನ ಅಮೀರ್ ಜನಾಬ್ ಹಸ್ಮತುಲ್ಲಾಹ್ ಸಾಹೇಬರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆರಂಭವಾಯಿತು. ಜನಾಬ್ ಮುಸದ್ದಿಖ್ ಅಹ್ಮದ್ ಸಾಹಿಬ್ ಖುರ್‌ಆನ್ ತಿಲಾವತ್ ಮಾಡಿದರು. ಮುಖ್ಯ ಅತಿಥಿ ಜನಾಬ್ ಟಿ.ಎಂ. ಅಬ್ದುಲ್ ಮಜೀದ್ ಸಾಹಿಬ್ (ಪ್ರತಿನಿಧಿ ಮಜ್ಲಿಸ್ ಅನ್ಸಾರುಲ್ಲಾಹ್ ಭಾರತ್) ಉಪಸ್ಥಿತರಿದ್ದರು. ಜನಾಬ್ ಸಯ್ಯದ್ ಶಾರಿಖ್ ಮಜೀದ್ ಸಾಹಿಬ್ (ಜಿಲ್ಲಾ ನಾಝಿಂ) ಪ್ರಾಸಂಗಿಕ ಭಾಷಣ ಮಾಡಿ ವಾರ್ಷಿಕ ವರದಿಯನ್ನು ಸಾದರಪಡಿಸಿದರು. ಮುಖ್ಯ ಅತಿಥಿ ಮಜ್ಲಿಸ್ ಅನ್ಸಾರುಲ್ಲಾದ ಸ್ಥಾಪನೆ ಮತ್ತು ಧ್ಯೇಯ ಧೋರಣೆ ಬಗ್ಗೆ ವಿವರಿಸಿದರು.

ಆ ಬಳಿಕ ತಿಲಾವತ್, ನಝ್ಮ್ ಮತ್ತು ಭಾಷಣ ಸ್ಪರ್ಧೆಗಳು ನಡೆದವು. ಮ್ಯೂಝಿಕಲ್ ಚೇರ್ ಸ್ಪರ್ಧೆಯೂ ನಡೆಯಿತು. ಪ್ರಥಮ, ದ್ವಿತೀಯ ಮತ್ತು ತೃತೀಯ ವಿಜಯಿಗಳಿಗೆ ಬಹುಮಾನ ನೀಡಲಾಯಿತು. ಪ್ರೋತ್ಸಾಹಕ ಬಹುಮಾನಗಳನ್ನೂ ನೀಡಲಾಯಿತು.

ಸಮಾರೋಪ ಅಧಿವೇಶನ ಜನಾಬ್ ಟಿ.ಎಂ. ಅಬ್ದುಲ್ ಮುಜೀಬ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ರಶೀದ್ ಅಹ್ಮದ್ ಸಿದ್ದೀಖ್ ಸಾಹಿಬ್ ತಿಲಾವತ್ ಮಾಡಿದರು. ಜನಾಬ್ ಅಬ್ದುಲ್ ಮುಜೀಬ್ ಸಾಹಿಬರ ಸಮಾರೋಪ ಭಾಷಣ ಮತ್ತು ದುಆದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ನಿಧನ ವಾರ್ತೆ

## ಜನಾಬ್ ಪಿ.ಕೆ. ಅಬ್ದುರ್ರಹೀಮ್ ಸಾಹಿಬ್, ಮಡಿಕೇರಿ



ಜನಾಬ್ ಪಿ.ಕೆ. ಅಬ್ದುರ್ರಹೀಮ್ ಸಾಹಿಬ್ ಮಡಿಕೇರಿಯಲ್ಲಿ ತನ್ನ 60ನೇ ವಯಸ್ಸಿನಲ್ಲಿ 2021 ಸೆಪ್ಟಂಬರ್ ದಿನಾಂಕ 27ರಂದು ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.") ಮಡಿಕೇರಿಯಲ್ಲಿ 1951ರಲ್ಲಿ ಅಹ್ಮದಿಯಾ ಜಮಾಅತನ್ನು ಪ್ರವೇಶಿಸಿದ ಪ್ರಥಮ ಅಹ್ಮದಿಯರಲ್ಲಿ ಒಬ್ಬರಾಗಿದ್ದ ಜನಾಬ್ ಪಿ. ಕುಞ್ಞಾಲಿ ಸಾಹಿಬರ ಪುತ್ರ ಅವರಾಗಿದ್ದರು. ಮೃತರು ಸೌಮ್ಯ ಸ್ವಭಾವದವರೂ ಎಲ್ಲರೊಂದಿಗೆ ಪ್ರೀತಿ ವಾತ್ಸಲ್ಯದಿಂದ ವರ್ತಿಸುವವರೂ ಆಗಿದ್ದರು. ಜಮಾಅತಿಗೆ ನಿಷ್ಠಾವಂತರಾಗಿ ಜೀವಿಸುತ್ತಿದ್ದ ಅವರು ಪ್ಲಂಬಿಂಗ್ ಸಾಮಗ್ರಿಗಳ ಮಳಿಗೆಯ ಮಾಲಿಕರಾಗಿದ್ದರು. ಕಣ್ಣೂರಿನ ಪ್ರಸಿದ್ಧ ನಡುವಿಲಗತ್ ಕುಟುಂಬದ ಪ್ರಸಿದ್ಧ ಪತ್ರಕರ್ತ ಜನಾಬ್ ಎನ್. ಅಬ್ದುರ್ರಹೀಮ್ ಸಾಹಿಬರ ಪುತ್ರಿ ಖುದ್‌ಸಿಯಾ ಅವರ ಪತ್ನಿಯಾಗಿದ್ದಾರೆ.

ಮೃತರು ಪತ್ನಿ ಮತ್ತು ಒಬ್ಬ ಪುತ್ರನನ್ನೂ ವಿವಾಹಿತೆಯರಾದ ಇಬ್ಬರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಅಲ್ಲಾಹನು ಮೃತರಿಗೆ ಮಗ್‌ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ ಎಂದೂ ಸಂತಾಪಭರಿತ ಕುಟುಂಬಕ್ಕೆ ಸಾಂತ್ವನ ನೀಡಲಿ ಎಂದೂ ಪ್ರಾರ್ಥಿಸುತ್ತೇವೆ.

– ಎಂ. ಉಬೈದುಲ್ಲಾ

**"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

**"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

ಓದಿದ್ದು

# ದೈವನಿಂದನೆ: ಪಾಕ್ ಶಿಕ್ಷಕಿಗೆ ಗಲ್ಲು

**ಇಸ್ಲಾಮಾಬಾದ್:** ದೈವನಿಂದನೆ ಮಾಡಿದ ಆರೋಪಕ್ಕೆ ಗುರಿಯಾಗಿದ್ದ ಮುಖ್ಯೋಪಾಧ್ಯಾಯಿನಿಗೆ ಪಾಕಿಸ್ಥಾನದ ಲಾಹೋರ್‌ನ ಸ್ಥಳೀಯ ಕೋರ್ಟ್ ಗಲ್ಲು ಶಿಕ್ಷೆ ವಿಧಿಸಿದೆ. ಜತೆಗೆ 2,418 ರೂ. ದಂಡವನ್ನೂ ವಿಧಿಸಿದೆ. ಖಾಸಗಿ ಶಾಲೆಯ ಮುಖ್ಯೋಪಾಧ್ಯಾಯಿನಿ ಸಲ್ಮಾ ತನ್ವೀರ್, 2013ರಲ್ಲಿ ದೈವನಿಂದನೆ ಮಾಡಿದ್ದರು ಎಂದು ಆರೋಪ ಮಾಡಲಾಗಿತ್ತು. ಈ ವಿಚಾರವಾಗಿ ಲಾಹೋರ್ ಠಾಣೆಯಲ್ಲಿ ದೈವ ನಿಂದನೆ ಪ್ರಕರಣ ದಾಖಲಿಸಲಾಗಿತ್ತು. ವಿಚಾರಣೆ ವೇಳೆ ಆಕೆಯ ವಕೀಲರು 'ಕಕ್ಷಿದಾರೆ ಮಾನಸಿಕ ಅಸ್ವಸ್ಥೆ' ಎಂದು ಸೂಚಿಸಿದ್ದ ವೈದ್ಯಕೀಯ ವರದಿ ಸಲ್ಲಿಕೆ ಮಾಡಿದ್ದರು. ತನಿಖೆಯ ವೇಳೆ ಅದು ಸುಳ್ಳೆಂದು ಸಾಬೀತಾಗಿದೆ. **(ಉದಯವಾಣಿ 29-9-21)**

==========================================================================

# 3.30 ಲಕ್ಷ ಮಕ್ಕಳ ಮೇಲೆ ದೌರ್ಜನ್ಯ

**ಪ್ಯಾರಿಸ್:** ಫ್ರಾನ್ಸ್‌ನ ಪ್ರಸಿದ್ಧ ಕ್ಯಾಥೊಲಿಕ್ ಚರ್ಚ್‌ನ ಆವರಣದಲ್ಲಿ ಕಳೆದ 70 ವರ್ಷಗಳಲ್ಲಿ 3.30 ಲಕ್ಷ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಆಘಾತಕಾರಿ ಅಂಶವೊಂದು ಬಹಿರಂಗವಾಗಿದೆ. ಚರ್ಚ್‌ನ ಆವರಣದಲ್ಲಿ 1950ರಿಂದ 2021ರ ವರೆಗೆ 3,30,000 ಅಪ್ರಾಪ್ತ ವಯಸ್ಸಿನವರ ಮೇಲೆ ಲೈಂಗಿಕ ದೌರ್ಜನ್ಯವೆಸಗಲಾಗಿದೆ. ಸಂತ್ರಸ್ತರಲ್ಲಿ ಶೇ.80 ಮಂದಿ ಬಾಲಕರು!

ಚರ್ಚ್‌ನ ಸಿಬಂದಿ ಹಾಗೂ ಭಕ್ತರು ಸೇರಿ ಒಟ್ಟು 3 ಸಾವಿರ ಆರೋಪಿಗಳಿಂದ ಈ ದುಷ್ಕೃತ್ಯ ನಡೆದಿದೆ. ಸಂತ್ರಸ್ತರಲ್ಲಿ ಶೇ.60 ಮಂದಿ ಭಾವನಾತ್ಮಕವಾಗಿ ಹಾಗೂ ದೈಹಿಕವಾಗಿ ತೊಂದರೆಗೊಳಗಾಗಿದ್ದಾರೆ. ಚರ್ಚ್‌ನ ಆಡಳಿತವು ಈ ಎಲ್ಲ ವಿಚಾರಗಳನ್ನು ವ್ಯವಸ್ಥಿತವಾಗಿ ಮುಚ್ಚಿಡುವ ಪ್ರಯತ್ನ ಮಾಡಿದೆ ಎಂದು ವರದಿ ಹೇಳಿದೆ.

ಸುಮಾರು ಎರಡೂವರೆ ವರ್ಷಗಳ ಕಾಲ ಸಂತ್ರಸ್ತರು, ಸಾಕ್ಷಿದಾರರು, ನ್ಯಾಯಾಲಯ, ಪೊಲೀಸರು ಸೇರಿ ಅನೇಕರಿಂದ ಮಾಹಿತಿ ಪಡೆದು ಈ ವರದಿ ತಯಾರಿಸಲಾಗಿದೆ. ಇದು ವೈಜ್ಞಾನಿಕ ಸಂಶೋಧನೆಯನ್ನು ಆಧರಿಸಿರುವ 2,500 ಪುಟಗಳ ಬೃಹತ್ ವರದಿಯಾಗಿದೆ ಎಂದು ವರದಿ ತಯಾರಿಸಿರುವ ಸಮಿತಿಯ ಅಧ್ಯಕ್ಷರಾದ ಜೀನ್ ಮಾರ್ಕ್ ಸಾವೆ ತಿಳಿಸಿದ್ದಾರೆ. ವರದಿ ಪ್ರಕಟವಾದ ಅನಂತರ ಸಾವಿರಾರು ಮಂದಿ, ತಾವು ದೌರ್ಜನ್ಯಕ್ಕೆ ಒಳಗಾಗಿದ್ದಾಗಿ ಕರೆ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕ್ಯಾಥೋಲಿಕ್ ಚರ್ಚ್‌ನ ಪಾದ್ರಿ ಬರ್ನಾರ್ಡ್ ಪ್ರೆಯ್ನಾಟ್ ಕಳೆದ ವರ್ಷ ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿ ಸಿಕ್ಕಿಬಿದ್ದಿದ್ದರು. ಅವರು 75 ಬಾಲಕರ ಮೇಲೆ ದೌರ್ಜನ್ಯ ವೆಸಗಿದ್ದಾಗಿ ತಪ್ಪೊಪ್ಪಿಕೊಂಡಿದ್ದರು. ಅವರಿಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾದ ಬೆನ್ನಲ್ಲೇ ಈ ವರದಿ ತಯಾರಿ ಕೆಲಸ ಚುರುಕುಗೊಂಡಿತು. **(ಉದಯವಾಣಿ 6-10-2021)**

==========================================================================

# ಚರ್ಚ್‌ನಲ್ಲಿ ದೌರ್ಜನ್ಯದಿಂದ ಅವಮಾನ: ಪೋಪ್ ಫ್ರಾನ್ಸಿಸ್

**ರೋಮ್:** ಫ್ರಾನ್ಸ್ ಕೆಥೋಲಿಕ್ ಚರ್ಚ್‌ನ ಆವರಣದಲ್ಲಿ ಕಳೆದ 70 ವರ್ಷಗಳಲ್ಲಿ 3.30 ಲಕ್ಷ ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ವರದಿಯಿಂದಾಗಿ ತಮಗೆ ಅವಮಾನವಾಗಿರುವುದಾಗಿ ಕ್ರೈಸ್ತರ ಪರಮೋಚ್ಚ ಧರ್ಮಗುರು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ. ದುರದೃಷ್ಟವೆಂಬಂತೆ ಇಂಥ ಪ್ರಕರಣಗಳು ನಡೆದಿವೆ. ಸಂತ್ರಸ್ತರು ಅನುಭವಿಸಿದ ಆಘಾತದ ಬಗ್ಗೆ ನನಗೆ ನೋವುಂಟಾಗಿದೆ. ಅವರನ್ನು ಇಷ್ಟು ಸಮಯ ಆತಂಕದಲ್ಲೇ ಇರುವಂತೆ ಮಾಡಿರುವುದು ನನಗೆ ಮತ್ತು ಚರ್ಚ್‌ಗೆ ಅವಮಾನಕರ ಸಂಗತಿ ಎಂದು ಅವರು ಹೇಳಿದ್ದಾರೆ. ಇನ್ನು ಮುಂದೆ ಈ ರೀತಿ ಆಗದಂತೆ ಕ್ರಮ ತೆಗೆದುಕೊಳ್ಳಲು ಧಾರ್ಮಿಕ ಮುಖಂಡರಿಗೆ ಕರೆ ನೀಡಿರುವುದಾಗಿಯೂ ಅವರು ತಿಳಿಸಿದ್ದಾರೆ.
**(ಉದಯವಾಣಿ 7-10-2021)**

==========================================================================

# 6.3 ಕೆ.ಜಿ. ತೂಕದ ಮಗುವಿಗೆ ಜನ್ಮವಿತ್ತ ತಾಯಿ

**ವಾಷಿಂಗ್ಟನ್:** ಸಾಮಾನ್ಯವಾಗಿ ನವಜಾತು ಶಿಶುಗಳು 2-3 ಕೆ.ಜಿ. ತೂಕವಿರುತ್ತವೆ. ಆದರೆ ಅಮೆರಿಕದ ಅರಿಜೋನಾದ ಕಾರಿ ಪಟೋನ್ಯೆ ಹೆಸರಿನ ಮಹಿಳೆ ಬರೋಬ್ಬರಿ 6.3 ಕೆ.ಜಿ. ತೂಕದ ಫಿನ್ಲೇ ಹೆಸರಿನ ಗಂಡು ಮಗುವಿಗೆ ಜನ್ಮವಿತ್ತಿದ್ದಾಳೆ. ಗ್ಲೆಂಡೇಲ್ ನಗರದಲ್ಲಿರುವ ಬ್ಯಾನರ್ ಥಂಡರ್‌ಬರ್ಡ್ ಆಸ್ಪತ್ರೆಯಲ್ಲಿ ಅ. 4ರಂದು ಕಾರಿ ಹೆರಿಗೆಯಾಗಿದೆ. 2 ಗಂಡು ಮಕ್ಕಳ ತಾಯಿಯಾಗಿರುವ ಕಾರಿ, ಈಗಾಗಲೇ 19 ಬಾರಿ ಗರ್ಭಪಾತದಿಂದ ಬಳಲಿದ್ದಾಳಂತೆ. ಫಿನ್ಲೇ ಗರ್ಭದಲ್ಲಿದ್ದಾಗ, ಮಗು ಗಾತ್ರ ದೊಡ್ಡವಿರುವುದಾಗಿ ವೈದ್ಯರು ತಿಳಿಸಿದ್ದರಾದರೂ ಅದು, 6 ಕೆ.ಜಿ. ತೂಕದಷ್ಟಿರುತ್ತದೆ ಎಂದು ಅವರು ಊಹಿಸಿರಲಿಲ್ಲವಂತೆ. ತಮ್ಮ ವೃತ್ತಿ ಜೀವನದಲ್ಲೇ ಇದೇ ಮೊದಲನೇ ಬಾರಿಗೆ ಇಷ್ಟು ತೂಕದ ಮಗುವಿನ ಹೆರಿಗೆ ಮಾಡಿಸಿದ್ದಾಗಿ ವೈದ್ಯರು ಹೇಳಿಕೊಂಡಿದ್ದಾರೆ. **(ಉದಯವಾಣಿ 18-10-2021)**

## ಮಾಸ್ಕ್ ಧರಿಸಲು ಹೇಳಿದ್ದಕ್ಕೆ 5.8 ಕೋ. ರೂ. ಎಣಿಸೋ ಶಿಕ್ಷೆ!

**ಬೀಜಿಂಗ್:** ಬ್ಯಾಂಕ್‌ನ ಸಿಬಂದಿ ಮಾಸ್ಕ್ ಹಾಕಿಕೊಳ್ಳುವಂತೆ ಎಚ್ಚರಿಸಿದರು ಎನ್ನುವ ಸಿಟ್ಟಿಗೆ ಶ್ರೀಮಂತ ಗ್ರಾಹಕನೊಬ್ಬ ಬ್ಯಾಂಕ್ ಸಿಬಂದಿಗೆ 5.8 ಕೋಟಿ ರೂ. ಮೌಲ್ಯದ ನೋಟುಗಳನ್ನು ಎಣಿಸುವ ಕೆಲಸ ಕೊಟ್ಟಿರುವ ಘಟನೆ ಚೀನದಲ್ಲಿ ನಡೆದಿದೆ. ಸನ್ವೇರ್ ಎಂಬ ಹೆಸರಿನ ಕೋಟ್ಯಧಿಪತಿಯು ಬ್ಯಾಂಕ್ ಆಫ್ ಶಾಂಘೈನ ಶಾಖೆಗೆ ಬಂದು ತನ್ನ ಖಾತೆಯಿಂದ ಬರೋಬ್ಬರಿ 5.8 ಕೋಟಿ ರೂ.ಗಳನ್ನು ವಿತ್‌ಡ್ರಾ ಮಾಡಿ, ಅದನ್ನು ಎಣಿಸಿ ಕೊಡುವಂತೆ ಸಿಬಂದಿಗೆ ಸೂಚಿಸಿದ್ದಾನೆ. ಇಬ್ಬರು ಸಿಬಂದಿ ಬರೋಬ್ಬರಿ 2 ಗಂಟೆಗಳ ಕಾಲ ಕರೆನ್ಸಿ ಕೌಂಟರ್ ಮುಂದೆ ಕುಳಿತು ನೋಟು ಎಣಿಸಿದ್ದಾರೆ. ಬ್ಯಾಂಕ್‌ನ ಸಿಬಂದಿ 'ಅಹಂಕಾರ' ಪ್ರದರ್ಶಿಸಿದ ಹಿನ್ನೆಲೆಯಲ್ಲಿ ಹೀಗೆ ಮಾಡಿದ್ದಾಗಿ ಆತ ಹೇಳಿಕೊಂಡಿದ್ದಾನೆ! **(ಉದಯವಾಣಿ 25-10-2021)**

==================================================================

## ಸಾಕು ನಾಯಿಗೆ ಸಸ್ಯಹಾರಿ ಊಟ ಕೊಟ್ಟರೆ ಜೈಲು ಶಿಕ್ಷೆ ಗ್ಯಾರಂಟಿ!

**ಲಂಡನ್:** ಸಾಕು ನಾಯಿಗೆ ನಿಮ್ಮಿಷ್ಟದಂತೆ ಊಟ ಹಾಕುವಂತೂ ಇಲ್ಲ! ಹೀಗೆಂದು ಬ್ರಿಟನ್‌ನಲ್ಲಿ ಕಾನೂನಿದೆ. ಸಾಕು ನಾಯಿಗೆ ಮಾಂಸಾಹಾರದ ಬದಲು ಸಸ್ಯಾಹಾರಿ ಆಹಾರ ಕೊಟ್ಟರೆ ನಿಮಗೆ ಜೈಲು ಶಿಕ್ಷೆ ಅಥವಾ ದಂಡ ವಿಧಿಸಲಾಗುವುದು. ಬ್ರಿಟನ್‌ನ ಪ್ರಾಣಿ ರಕ್ಷಣ ಕಾಯ್ದೆಯ ಅನುಸಾರ, ಜನರು ತಾವು ಸಾಕಿರುವ ಪ್ರಾಣಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡಬೇಕು. ಸೂಕ್ತ ಸ್ಥಳದಲ್ಲೇ ಸಾಕಬೇಕು ಮತ್ತು ಅದರ ರಕ್ಷಣೆ ಮಾಡಬೇಕು. ಒಂದು ವೇಳೆ ತಪ್ಪಿದಲ್ಲಿ 20 ಲಕ್ಷ ರೂ. ವರೆಗಿನ ದಂಡ ಅಥವಾ ಜೈಲು ಶಿಕ್ಷೆಯನ್ನು ವಿಧಿಸಲಾಗುವುದು.

'ಸಸ್ಯಾಹಾರ ನಿಮ್ಮ ಆಯ್ಕೆಯಾಗಿರಬಹುದು. ಆದರೆ ಅದು ಪ್ರಾಣಿ ರಕ್ಷಣ ಕಾಯ್ದೆಯ ಪೌಷ್ಟಿಕಾಂಶಗಳ ಮಾನದಂಡವನ್ನು ಪೂರೈಸುವುದಿಲ್ಲ. ಹಾಗಾಗಿ ನೀವು ಶಿಕ್ಷೆಗೆ ಅರ್ಹರಾಗುತ್ತೀರಿ' ಎಂದು ಬ್ರಿಟನ್‌ನ ಪಶುವೈದ್ಯಕೀಯ ಸಂಘದ ಡೇನಿ ಯೆಲ್ಲಾಡಾಸ್ ಸಂಟೋಸ್ ತಿಳಿಸಿದ್ದಾರೆ. **(ಉದಯವಾಣಿ 25-10-2021)**

==================================================================

## ರಾಮ್ ರಹೀಂಗೆ ಜೀವಾವಧಿ ಶಿಕ್ಷೆ

**ಚಂಡೀಗಢ:** ಡೇರಾ ಸಚ್ಚಾ ಸೌದಾ ಎನ್‌ಜಿಒ ಅಧ್ಯಕ್ಷ ಗುರ್ಮೀತ್ ರಾಮ್ ರಹೀಂ ಸಿಂಗ್ ಬಾಬಾಗೆ ಸಿಬಿಐ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. 19 ವರ್ಷಗಳ ಹಿಂದೆ ನಡೆದಿದ್ದ ಕೊಲೆ ಪ್ರಕರಣದಲ್ಲಿ ಸಿಂಗ್ ಜತೆ ಒಟ್ಟು 5 ಅಪರಾಧಿಗಳಿಗೆ ಈ ಶಿಕ್ಷೆ ನೀಡಲಾಗಿದೆ. ಸರಕಾರೇತರ ಸಂಸ್ಥೆಯೊಂದರ ಕಾರ್ಯದರ್ಶಿಯಾಗಿದ್ದ ರಂಜಿತ್ ಸಿಂಗ್‌ನನ್ನು 2002ರ ಜುಲೈ 10ರಂದು ಕೊಲೆ ಮಾಡಲಾಗಿತ್ತು. ರಹೀಂ ಸಿಂಗ್‌ರವರ ಆಣತಿಯ ಮೇರೆಗೆ ಕೃಷ್ಣಲಾಲ್, ಜಸ್ವೀರ್ ಸಿಂಗ್, ಅವತಾರ್ ಸಿಂಗ್ ಮತ್ತು ಸಬ್ದಿಲ್ ಸೇರಿ ಈ ಕೊಲೆ ಮಾಡಿದ್ದರು. ಆ ಪ್ರಕರಣದ ವಿಚಾರಣೆ ನಡೆಸಿದ ಪಂಚಕುಲದ ಸಿಬಿಐ ವಿಶೇಷ ನ್ಯಾಯಾಲಯ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. 2017ರಲ್ಲಿ ಗುರ್ಮೀತ್ ರಾಮ್ ರಹೀಂ ಸಿಂಗ್‌ಗೆ ಅತ್ಯಾಚಾರ ಪ್ರಕರಣದಡಿಯಲ್ಲಿ 20 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿತ್ತು. **(ಉದಯವಾಣಿ 19-10-2021)**

==================================================================

## 5,000 ಹೆರಿಗೆ ಮಾಡಿಸಿದ್ದ ನರ್ಸ್ ತಮ್ಮ ಹೆರಿಗೆ ವೇಳೆ ನಿಧನ!

### 2ನೇ ಮಗುವಿಗೆ ಜನ್ಮವಿತ್ತು ಕೊನೆಯುಸಿರೆಳೆದ ಜ್ಯೋತಿ

**ಮುಂಬಯಿ:** ಬರೋಬ್ಬರಿ 5,000 ಗರ್ಭಿಣಿಯರಿಗೆ ಹೆರಿಗೆ ಮಾಡಿಸಿದ್ದ ನರ್ಸ್ ಒಬ್ಬರು, ಶಿಶುವಿಗೆ ಜನ್ಮವಿತ್ತ ಕೆಲವೇ ದಿನಗಳಲ್ಲಿ ಸಾವನ್ನಪ್ಪಿರುವ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ.

ಜ್ಯೋತಿ ಗಾವ್ಲಿ(38) ಎಂಬ ಹೆಸರಿನ ನರ್ಸ್ ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳೆದ 2 ವರ್ಷಗಳಿಂದ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ಎರಡನೇ ಮಗುವನ್ನು ಗರ್ಭದಲ್ಲಿ ಹೊತ್ತಿದ್ದ ಅವರು ನವೆಂಬರ್ 1ರ ವರೆಗೂ ಆಸ್ಪತ್ರೆಯಲ್ಲಿ ಕೆಲಸ ಮಾಡಿದ್ದಾರೆ. ನ. 2ರಂದು ಅವರಿಗೆ ಅದೇ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಲಾಗಿದೆ. ಆದರೆ ಹೆರಿಗೆ ಅನಂತರ ಜ್ಯೋತಿ ಬೈಲ್ಯಾಟರಲ್ ನ್ಯುಮೋನಿಯಾದಿಂದ ಬಳಲಿದ್ದು, ರವಿವಾರ ಕೊನೆಯುಸಿರೆಳೆದಿದ್ದಾರೆ. ಹಿಂಗೋಲಿ ಆಸ್ಪತ್ರೆಗೆ ಸೇರುವ ಮುನ್ನ ಎರಡು ಆಸ್ಪತ್ರೆಗಳಲ್ಲಿ ಆರು ವರ್ಷ ಕೆಲಸ ಮಾಡಿದ್ದ ಜ್ಯೋತಿ ಇದುವರೆಗೆ ಸುಮಾರು 5 ಸಾವಿರದಷ್ಟು ಗರ್ಭಿಣಿಯರಿಗೆ ಹೆರಿಗೆ ಮಾಡಿಸಿದ್ದರು. ಆದರೆ ಅವರನ್ನು ನಾವಿಂದು ಬದುಕಿಸಿಕೊಳ್ಳಲು ಆಗಲಿಲ್ಲವೆಂದು ಆಸ್ಪತ್ರೆಯ ಅಧಿಕಾರಿಗಳು ನೋವಿನಿಂದ ಹೇಳಿಕೊಂಡಿದ್ದಾರೆ.

**(ಉದಯವಾಣಿ 17-11-2021)**

## ಅತ್ಯಾಚಾರಿಗಳಿಗೆ 'ನಪುಂಸಕತ್ವ' ಶಿಕ್ಷೆ

**ಇಸ್ಲಾಮಾಬಾದ್:** ಒಂದಂಕ್ಕಿಂತ ಹೆಚ್ಚು ಬಾರಿ ಅತ್ಯಾಚಾರಗಳನ್ನೆಸಗಿರುವ ಅಪರಾಧಿಗಳನ್ನು ಔಷಧಗಳ ಮೂಲಕ ಶಾಶ್ವತವಾಗಿ ನಪುಂಸಕರನ್ನಾಗಿಸುವ ಶಿಕ್ಷೆ ಜಾರಿಗೊಳಿಸುವ ಮಸೂದೆಗೆ ಪಾಕಿಸ್ಥಾನ ಸಂಸತ್ತು ಒಪ್ಪಿಗೆ ನೀಡಿದೆ. ಇತ್ತೀಚೆಗೆ, ಪಾಕಿಸ್ಥಾನದಲ್ಲಿ ಮಹಿಳೆಯರ ಹಾಗೂ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿದ್ದವು. ಅತ್ಯಾಚಾರಿಗಳಿಗೆ ಭಯ ಹುಟ್ಟಿಸುವಂಥ ಕಠಿನ ಕಾನೂನು ಜಾರಿಯಾಗಬೇಕು ಎಂದು ಸಮಾಜದ ನಾನಾ ಸ್ತರಗಳಿಂದ ಒಕ್ಕೊರಲಿನ ಆಗ್ರಹವೂ ಮೂಡಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಪಾಕಿಸ್ಥಾನ ಸರಕಾರ ಈ ಮಸೂದೆಯನ್ನು ಸಿದ್ಧಪಡಿಸಿತ್ತು. ವರ್ಷದ ಹಿಂದೆಯೇ ಈ ಶಿಕ್ಷೆಯನ್ನು ಪಾಕಿಸ್ಥಾನ ಸರಕಾರ ಅಧ್ಯಾದೇಶ ಹೊರಡಿಸುವ ಜಾರಿಗೆ ತಂದಿತ್ತು. ಈಗ ಅದನ್ನು ಮಸೂದೆ ರೂಪದಲ್ಲಿ ಮಂಡಿಸಿ ಕಾನೂನಾಗಿ ಜಾರಿಗೆ ತಂದಿದೆ. ಈ ಶಿಕ್ಷೆಯನ್ನು ಸರಕಾರ ರಚಿಸುವ ಪ್ರತ್ಯೇಕ ವೈದ್ಯಕೀಯ ಮಂಡಳಿಯಲ್ಲಿರುವ ತಜ್ಞರ ವತಿಯಿಂದ ಜಾರಿಗೊಳಿಸಲಾಗುತ್ತದೆ ಎಂದು ಹೇಳಲಾಗಿದೆ. **(ಉದಯವಾಣಿ 19–11–21)**

===============================================================

## ದಲಿತರಿಗೆ ದೇಗುಲ ಪ್ರವೇಶಾವಕಾಶ

**ತಿರುವನಂತಪುರ:** ಶತಮಾನಗಳಿಂದಲೂ ಕೇರಳದ ಎಣ್ಮಕಜೆಯ ಸ್ವರ್ಗ ಎಂಬ ಪ್ರಾಂತದಲ್ಲಿನ ದೇಗುಲಕ್ಕೆ ಪ್ರವೇಶ ಪಡೆಯದಿದ್ದ ದಲಿತ ಸಮುದಾಯದವರಿಗೆ ಗುರುವಾರ ಪ್ರವೇಶ ಸಿಕ್ಕಿದೆ! ಪಟ್ಟಿಕಾಜಾತಿ ಕ್ಷೇಮಾ ಸಮಿತಿ (ಪಿಕೆಎಸ್) ನೇತೃತ್ವದಲ್ಲಿ ದಲಿತ ಸಮುದಾಯದವರು ಬೆಳಗ್ಗೆಯೇ ದೇಗುಲ ಪ್ರವೇಶಿಸಿ, ದೇವರ ದರ್ಶನ, ಪ್ರಸಾದ ಪಡೆದಿದ್ದಾರೆ. ದೇಗುಲ ಪ್ರವೇಶಕ್ಕೂ ಮುನ್ನ ಇರುವ 18 ಮೆಟ್ಟಿಲುಗಳನ್ನು ಏರಿ ದೇವರ ಸನ್ನಿಧಾನದತ್ತ ಹೋಗುವ ಅವಕಾಶವನ್ನೂ ದಲಿತರಿಗೆ ನೀಡಲಾಗಿತ್ತು. ಪಿಕೆಎಸ್‌ನ ಸದಸ್ಯರು ಹಾಗೂ ದಲಿತ ಸಮುದಾಯದ ಜನರು ಒಬ್ಬರ ಹಿಂದೊಬ್ಬರಂತೆ ಈ ಮೆಟ್ಟಿಲುಗಳನ್ನು ಏರಿದರು. ಈವರೆಗೆ ಈ ಮೆಟ್ಟಿಲುಗಳನ್ನು ಏರಲು ಕೇವಲ ಮೇಲ್ಜಾತಿಯವರಿಗಷ್ಟೇ ಅವಕಾಶವಿತ್ತು. ದಲಿತರು ದೇಗುಲ ಪ್ರವೇಶ ಹಾಗೂ 18 ಮೆಟ್ಟಿಲುಗಳನ್ನು ಏರಿದ ಮೇಲೆ ಶತಮಾನಗಳ ಕಾಲ ಜೀವಂತವಾಗಿದ್ದ ಅಸ್ಪ್ರಶ್ಯತೆಯೆಂಬ ಸಾಮಾಜಿಕ ಪಿಡುಗು ದೂರವಾದಂತಾಗಿದೆ ಎಂದು ಪಿಕೆಎಸ್ ತಿಳಿಸಿದೆ. **(ಉದಯವಾಣಿ 19–11–2021)**

===============================================================

### ಕ್ಯಾಲಿಫೋರ್ನಿಯಾ ಕಾಂಡರ್ಸ್ ಕುತೂಹಲಕಾರಿ ಸಂತಾನೋತ್ಪತ್ತಿ

## ಗಂಡಿನ ಸಂಪರ್ಕವಿಲ್ಲದೆ ಜನನ

**■ ಸಂರಕ್ಷಿತ ಪಕ್ಷಿಗಳ ಡಿಎನ್ಎ ಪರೀಕ್ಷೆ ನಡೆಸಿದ ವಿಜ್ಞಾನಿಗಳಿಗೇ ಅಚ್ಚರಿ!**

**ವಾಷಿಂಗ್ಟನ್:** ಕ್ಯಾಲಿಫೋರ್ನಿಯಾ ಕಾಂಡರ್ಸ್ ಎಂಬ ಜಾತಿಯ ಪಕ್ಷಿಗಳು, ಈಗ ತನ್ನ ಜಾತಿಯ ಪುರುಷ ಹಕ್ಕಿಯ ಸಹಾಯವಿಲ್ಲದೆ ಜನಿಸಬಲ್ಲ ಜೀವಿಗಳ ವರ್ಗಕ್ಕೆ ಹೊಸದಾಗಿ ಸೇರಲ್ಪಟ್ಟಿವೆ! ಇತ್ತೀಚಿನ ವರ್ಷಗಳಲ್ಲಿ ಈ ಜಾತಿಯಲ್ಲಿ ಜನಿಸಿರುವ ಎರಡು ಗಂಡು ಹಕ್ಕಿಗಳ ಡಿಎನ್ಎಯನ್ನು ಪರೀಕ್ಷಿಸಿದಾಗ ಇವು ಕೇವಲ ತಾಯಿಯ ಅಂಡಾಣುವಿನಿಂದ ರೂಪುಗೊಂಡಿರುವ ಪಕ್ಷಿಗಳೆಂಬುದು ಪತ್ತೆಯಾಗಿವೆ. ಇವುಗಳಲ್ಲಿ ಯಾವುದೇ ಪುರುಷ ಹಕ್ಕಿಯ ಅಂಶಗಳು ಪತ್ತೆಯಾಗಿಲ್ಲದಿರುವುದು ವಿಜ್ಞಾನಿಗಳಿಗೇ ಅಚ್ಚರಿ ತಂದಿದೆ!

1980ರ ದಶಕದಲ್ಲಿ ಅಮೆರಿಕ ನೈಋತ್ಯ ಭಾಗದಲ್ಲಿ ಅಳಿವಿನಂಚಿಗೆ ಸರಿದಿದ್ದ 22 ಕಾಂಡೊರ್‌ಗಳನ್ನು ಗಂಡು–ಹೆಣ್ಣುಗಳ ಪ್ರತ್ಯೇಕ ಜೋಡಿಯಾಗಿಸಿ, ಪ್ರತಿಯೊಂದು ಜೋಡಿಯನ್ನೂ ಪ್ರತ್ಯೇಕ ಗೂಡುಗಳಲ್ಲಿ ಇರಿಸಲಾಗಿತ್ತು. ಅಲ್ಲಿ ಜನಿಸಿದ ಹೊಸ ಹಕ್ಕಿಗಳ ಡಿಎನ್ಎ ಪರೀಕ್ಷೆ ನಡೆಸಿದಾಗ ವಿಜ್ಞಾನಿಗಳು ಕೇವಲ ತಾಯಿಯಿಂದ ಜನಿಸಿದ ಎರಡು ಗಂಡು ಹಕ್ಕಿಗಳನ್ನು ಪತ್ತೆ ಹಚ್ಚಿದ್ದಾರೆ. ಹಾಗೆಂದು ಈ ರೀತಿಯ ಸಂತಾನೋತ್ಪತ್ತಿ ಇದೇ ಮೊದಲೇನಲ್ಲ. ಅಳಿವಿನಂಚಿನಲ್ಲಿರುವ ಕೆಲವು ಪ್ರಾಣಿ, ಪಕ್ಷಿಗಳಲ್ಲಿ ಇದು ನಿಸರ್ಗವೇ ದಯಪಾಲಿಸಿರುವ ಒಂದು ಸಂತಾನೋತ್ಪತ್ತಿ ಸೌಲಭ್ಯ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

**ಪಾರ್ಥೋಜೆನಿಸಿಸ್‌ನಿಂದ ಇದು ಸಾಧ್ಯ!:** ಸಾಮಾನ್ಯವಾಗಿ ಜೀವಿಗಳಲ್ಲಿ ಲೈಂಗಿಕ ಸಂಪರ್ಕಾಧಾರಿತ (ಸೆಕ್ಸುವಲ್), ಅಲೈಂಗಿಕಾಧಾರಿತ (ಅಸ್ಸೆಕ್ಸುವಲ್) ಗರ್ಭಧಾರಣೆ ವ್ಯವಸ್ಥೆಯಿದೆ. ಮೇಲಿನ ಎರಡೂ ಕ್ರಮಗಳಲ್ಲಿ, ಹೆಣ್ಣಿನ ಅಂಡಾಣು ಹಾಗೂ ಗಂಡಿನ ವೀರ್ಯಾಣು ಸಮ್ಮಿಲನಗೊಂಡು ಭ್ರೂಣವಾಗಿ, ಆನಂತರ ಜೀವಿಯಾಗಿ ಮಾರ್ಪಾಡಾಗುತ್ತದೆ. ಲೈಂಗಿಕತೆಯಿಲ್ಲದ ಸಂತಾನೋತ್ಪತ್ತಿಯಲ್ಲಿ ಪಾರ್ಥೋಜೆನಿಸಿಸ್ ಎಂಬ ಮತ್ತೊಂದು ಬಗೆಯಿದೆ. ಇಲ್ಲಿ ಹೆಣ್ಣಿನ ಅಂಡಾಣು ತನ್ನಿಂತಾನೇ ಭ್ರೂಣವಾಗಿ ಬದಲಾಗಿ, ಅನಂತರ ಜೀವಿಯಾಗುತ್ತದೆ. ಕ್ಯಾಲಿಫೋರ್ನಿಯಾ ಕಾಂಡರ್ಸ್‌ಗಳ ವಿಚಾರದಲ್ಲೂ ಹಾಗೇ ಆಗಿದೆ. **(ಉದಯವಾಣಿ 19–11–2021)**

===============================================================

## ಕೃಷ್ಣನ ವಿಗ್ರಹಕ್ಕೆ ವೈದ್ಯರಿಂದ ಬ್ಯಾಂಡೇಜ್!

**ಆಗ್ರಾ:** ಮನುಷ್ಯರ ಅನಾರೋಗ್ಯಕ್ಕೆ ಚಿಕಿತ್ಸೆ ನೀಡುವ ವೈದ್ಯರು, ಭಕ್ತನೊಬ್ಬನ ಬೇಡಿಕೆಯ ಮೇರೆಗೆ ಶ್ರೀ ಕೃಷ್ಣನ ಮೂರ್ತಿಗೇ ಬ್ಯಾಂಡೇಜ್ ಹಾಕಿರುವ ಘಟನೆ ಉತ್ತರ ಪ್ರದೇಶದ ಆಗ್ರಾದಲ್ಲಿ ನಡೆದಿದೆ.

ಆಗ್ರಾ ಜಿಲ್ಲಾಸ್ಪತ್ರೆಗೆ ಶುಕ್ರವಾರ ಬೆಳಗ್ಗೆ ಲೇಖ್ ಸಿಂಗ್ ಹೆಸರಿನ ವ್ಯಕ್ತಿ ಬಾಲ ಕೃಷ್ಣನ ಮೂರ್ತಿಯೊಂದಿಗೆ ಓಡಿ ಬಂದಿದ್ದಾರೆ. 'ಕೃಷ್ಣನಿಗೆ ಸ್ನಾನ ಮಾಡಿಸುವಾಗ ಬೀಳಿಸಿ, ದೇವರ ಕೈ ಮುರಿದುಬಿಟ್ಟೆ. ದಯವಿಟ್ಟು ಅದನ್ನು ಸರಿ ಮಾಡಿಕೊಡಿ' ಎಂದು ವೈದ್ಯರ ಬಳಿ ಅಂಗಲಾಚಿದ್ದಾನೆ. ಮೊದಲಿಗೆ ಈ ವಿಚಾರವನ್ನು ಹಗುರವಾಗಿ ಪರಿಗಣಿಸಿದ ವೈದ್ಯರು, ಬ್ಯಾಂಡೇಜು ಕಟ್ಟಲು ನಿರಾಕರಿಸಿದ್ದಾರೆ. ಆದರೆ ಲೇಖ್ ಅವರು ಅಳುವುದನ್ನು ನೋಡಲಾಗದೆ, ಶ್ರೀ ಕೃಷ್ಣ ಹೆಸರಿನಲ್ಲಿ ದಾಖಲಾತಿ ಮಾಡಿಕೊಂಡು, ಮೂರ್ತಿಗೆ ಬ್ಯಾಂಡೇಜ್ ಹಾಕಿದ್ದಾರೆ.

**(ಉದಯವಾಣಿ 20–11–2021)**

==================================================




## ಮೊದಲ ಸ್ಟ್ಯಾಂಪ್‌ಗೆ 62 ಕೋಟಿ ರೂ!

ಅಂಚೆ ಸ್ಟ್ಯಾಂಪ್ ಬೆಲೆ ಕಡಿಮೆಯಿರುತ್ತದೆ. ಆದರೆ ಇಲ್ಲಿರುವ ಅಂಚೆ ಸ್ಟಾಂಪ್‌ನ ಬೆಲೆ ಬರೋಬ್ಬರಿ 62 ಕೋಟಿ ರೂ. ವಿಶ್ವದ ಮೊದಲ ಸ್ಟಾಂಪ್ ಅನ್ನು 60 ಕೋಟಿ ರೂ. ಗಳಿಗೂ ಅಧಿಕ ಬೆಲೆಗೆ ಹರಾಜು ಕೂಗಲಾಗುತ್ತಿದೆ. 'ಪೆನ್ನಿ ಬ್ಲಾಕ್ ಸ್ಟಾಂಪ್' ಅನ್ನು 1840ರಲ್ಲಿ ಬಳಕೆ ಮಾಡಲಾಗಿತ್ತಂತೆ. ಸ್ಕಾಟ್‌ಲ್ಯಾಂಡ್‌ನ ರಾಜಕಾರಣಿಯಾಗಿದ್ದ ರಾಬರ್ಟ್ ವೆಲ್ಲೇಸ್ ಹೆಸರಿನ ವ್ಯಕ್ತಿ, ದಾಖಲೆಯೊಂದರ ಮೇಲೆ ಈ ಸ್ಟಾಂಪ್‌ನ್ನು ಅಂಟಿಸಿ ಪೋಸ್ಟ್ ಮಾಡಿದ್ದರಂತೆ. ದಾಖಲೆ 1840ರ ಎಪ್ರಿಲ್ 10ನ್ನು ದಿನಾಂಕವಾಗಿ ನಮೂದಿಸಲಾಗಿದೆ. ವಿಶ್ವದಲ್ಲಿ ಮೊದಲು ಮುದ್ರಣವಾದ ಸ್ಟಾಂಪ್‌ಗಳ ಪೇಪರ್ ಶೀಟ್‌ನ 1 ಸ್ಟಾಂಪ್ ಇದೆಂದು ಹೇಳಲಾಗಿದೆ. ಅದೇ ಶೀಟ್‌ನ ಇನ್ನೆರಡು ಸ್ಟಾಂಪ್‌ಗಳು ಬ್ರಿಟಿಷ್ ಪೋಸ್ಟಲ್ ಮ್ಯೂಸಿಯಂನಲ್ಲಿವೆ. ಅಲನ್ ಹೆಸರಿನವರು ಮಾಲೀಕತ್ವದಲ್ಲಿರುವ ಸ್ಟಾಂಪ್‌ನ್ನು ಡಿ. 7ರಂದು ಲಂಡನ್‌ನಲ್ಲಿ ಸೂತ್‌ಬೆ ಹರಾಜು ಸಂಸ್ಥೆ ಮೂಲಕ ಹರಾಜು ನಡೆಸಲಾಗುತ್ತದೆ.

**(ಉದಯವಾಣಿ 27–10–2021)**

==================================================

## ಪತ್ನಿಗೆ ಹೊಡೆಯುವುದು ಸರಿ ಎಂದರು ನಮ್ಮವರು!

### 18 ರಾಜ್ಯಗಳು, 1 ಕೇಂದ್ರಾಡಳಿತ ಪ್ರದೇಶದಲ್ಲಿ ನಡೆಸಲಾಗಿದ್ದ ಸಮೀಕ್ಷೆ

**ಹೊಸದಿಲ್ಲಿ:** ಪತ್ನಿಯ ಬೇಜವಾಬ್ದಾರಿ ವರ್ತನೆಯಿಂದ ಬೇಸತ್ತ ಪತಿಯು ತನ್ನ ಪತ್ನಿಗೆ ಥಳಿಸಿದರೆ ಅದು ತಪ್ಪೇ? ಇಂಥದ್ದೊಂದು ಪ್ರಶ್ನೆಯನ್ನಿಟ್ಟುಕೊಂಡು ಸುಮಾರು 18 ರಾಜ್ಯಗಳು ಹಾಗೂ ಜಮ್ಮುಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ ನಡೆಸಲಾಗಿದ್ದ 'ನ್ಯಾಶನಲ್ ಫ್ಯಾಮಿಲಿ ಹೆಲ್ತ್' ಸಮೀಕ್ಷೆಗೆ ಬಹುತೇಕರು ಅದು ಸರಿ ಎಂದಿದ್ದಾರೆ. ಅವರಲ್ಲಿ ತೆಲಂಗಾಣದ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದೆ. ಕರ್ನಾಟಕದಲ್ಲಿ ಪುರುಷರ ಸಂಖ್ಯೆ ಹೆಚ್ಚಿದೆ.

'ಪತಿಗೆ ಹೇಳದೆಯೇ ಹೊರಗೆ ಸುತ್ತಾಡಲು ಹೋಗುವುದು, ಮನೆ ಅಥವಾ ಮಕ್ಕಳ ಬಗ್ಗೆ ನಿರ್ಲಕ್ಷ್ಯ ತೋರುವುದು, ಸಣ್ಣ ಸಣ್ಣ ವಿಚಾರಕ್ಕೂ ಪತಿಯ ಜತೆಗೆ ಜಗಳವಾಡುವುದು, ಲೈಂಗಿಕ ಸಂಬಂಧಕ್ಕೆ ಒಲ್ಲೆ ಎನ್ನುವುದು, ಅಡುಗೆ ಹಾಳುಗೆಡವುದು, ಆಕೆಯ ನಡತೆ ಅನುಮಾನಾಸ್ಪದವಾಗಿ ಇರುವುದು..' ಈ ಏಳು ಕಾರಣಗಳಿಗೆ ಪತಿಯು ಪತ್ನಿಯ ಮೇಲೆ ಕೈ ಮಾಡಿದರೆ ಅದು ಸರಿಯೇ ಎಂಬ ಪ್ರಶ್ನೆಯನ್ನಿಟ್ಟುಕೊಂಡು ಸಮೀಕ್ಷೆ ನಡೆಸಲಾಗಿತ್ತು. ತೆಲಂಗಾಣದ ಶೇ. 83.8ರಷ್ಟು ಮಹಿಳೆಯರು ಈ ಏಳು ಕಾರಣಗಳಡಿ ಪತಿಯು ಪತ್ನಿಯ ಮೇಲೆ ಕೈ ಮಾಡುವುದು ಸರಿ ಎಂದಿದ್ದರೆ, ಹಿಮಾಚಲ ಪ್ರದೇಶದಲ್ಲಿ ಇಂಥ ಮಹಿಳೆಯರ ಸಂಖ್ಯೆ ಕಡಿಮೆ (ಶೇ. 14.8) ಇದೆ.

ಸಮೀಕ್ಷೆಗೆ ಉತ್ತರಿಸಿದ ಪುರುಷರಲ್ಲಿ, ಮೇಲಿನ ಕಾರಣಗಳಿಗೆ ಪತ್ನಿಯನ್ನು ದಂಡಿಸುವವರು ಅತೀ ಹೆಚ್ಚು ಜನ ಕರ್ನಾಟಕದವರೇ (ಶೇ. 81.9) ಆಗಿದ್ದಾರೆ. ಅತೀ ಕಡಿಮೆ ಎಂದರೆ ಹಿಮಾಚಲ ಪ್ರದೇಶದವರು (ಶೇ. 14.2). **(ಉದಯವಾಣಿ 29–11–2021)**

==================================================

## ವಕ್ಫ್‌ಬೋರ್ಡ್ ಮಾಜಿ ಮುಖ್ಯಸ್ಥ ಹಿಂದೂ ಧರ್ಮಕ್ಕೆ ಮತಾಂತರ

**ಲಕ್ನೋ:** ಉತ್ತರ ಪ್ರದೇಶ ಶಿಯಾ ವಕ್ಫ್‌ಬೋರ್ಡ್‌ನ ಮಾಜಿ ಮುಖ್ಯಸ್ಥ ವಸೀಮ್ ರಿಜ್ವಿ ಸೋಮವಾರದಂದು ಹಿಂದೂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಇಸ್ಲಾಂ ಧರ್ಮದಿಂದ ಬಹಿಷ್ಕಾರಕ್ಕೊಳಗಾಗಿದ್ದ ಅವರು ರಾಜ್ಯದ ಗಾಜಿಯಾಬಾದ್ ಜಿಲ್ಲೆಯ ದಸ್ನಾ ಪ್ರದೇಶದ ದೇಗುಲದಲ್ಲಿ ಹಿಂದೂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಈ ವೇಳೆ ಮಾತನಾಡಿದ ಅವರು, 'ನನ್ನ ಹೆಸರನ್ನು ಜಿತೇಂದ್ರ ನಾರಾಯಣ ಸಿಂಗ್ ತ್ಯಾಗಿ ಎಂದು ಬದಲಿಸಿಕೊಳ್ಳುತ್ತಿದ್ದೇನೆ. ಸನಾತನ ಧರ್ಮವು ವಿಶ್ವದಲ್ಲೇ ಶ್ರೇಷ್ಠ ಧರ್ಮ' ಎಂದಿದ್ದಾರೆ. ವಸೀಮ್ ಈ ಹಿಂದೆ ಅನೇಕ ಕಾರಣಗಳಿಂದ ವಿವಾದಗಳಿಗೆ ಗುರಿಯಾಗಿದ್ದರು. ಈ ಹಿಂದೆ ಅವರು, 'ನಾನು ಸತ್ತರೆ ನನ್ನ ದೇಹವನ್ನು ಮಣ್ಣು ಮಾಡದೆ, ಹಿಂದೂ ಧರ್ಮದಂತೆ ಸುಡಬೇಕು' ಎಂದು ಹೇಳಿ ವಿವಾದ ಎಳೆದುಕೊಂಡಿದ್ದರು. **(ಉದಯವಾಣಿ 7–12–2021)**

# ಯೇಸು ಸಮಾಧಿ ಸ್ಥಳ ಕಾಶ್ಮೀರದಲ್ಲಿದೆ: ಸುಬ್ರಮಣಿಯನ್ ಸ್ವಾಮಿ

**ಉಡುಪಿ, ಡಿ.8:** ಯೇಸುಕ್ರಿಸ್ತ ಲಡಾಕ್‌ನಲ್ಲಿ ಬೌದ್ಧ ಧರ್ಮ ಅಧ್ಯಯನ ನಡೆಸಿ ತವರೂರಿಗೆ ವಾಪಸ್ ಹೋಗಿರುವ ಬಗ್ಗೆ ದಾಖಲೆಗಳಿವೆ. ಕಾಶ್ಮೀರದ ಶ್ರೀನಗರ ಸಮೀಪ ಕನ್ನಿಯೂರು ಎಂಬಲ್ಲಿ ಯೇಸು ಸಮಾಧಿ ಸ್ಥಳ ಎಂದು ನಮೂದಿಸಿದ ಕಟ್ಟಡವಿದೆ. ಈ ಬಗ್ಗೆ ಪರಿಶೀಲನೆ ನಡೆಸುವಂತೆ ಸರಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದೇನೆ. ಆದರೆ ಯಾವ ಸರಕಾರಕ್ಕೂ ಆಸಕ್ತಿ ಇಲ್ಲ ಎಂದು ಮಾಜಿ ಕೇಂದ್ರ ಸಚಿವ ಹಾಗೂ ರಾಜ್ಯಸಭಾ ಸದಸ್ಯ ಸುಬ್ರಮಣಿಯನ್ ಸ್ವಾಮಿ ಹೇಳಿದ್ದಾರೆ.

ಉಡುಪಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಬುಧವಾರ ನಡೆದ ಪರ್ಯಾಯ ಅದಮಾರು ಮಠದ ಪರ್ಯಾಯ ಮಂಗಲೋತ್ಸವದ ವಿಶ್ವಾರ್ಪಣಮ್ ಸಮಾರಂಭದಲ್ಲಿ ಅವರು 'ಪ್ರಾಚೀನ ಮತ್ತು ಜೀವಂತವಿರುವ ಹಿಂದೂ ನಾಗರಿಕತೆಯ ಭಾಗವಾಗಿರಲು ಹೆಮ್ಮೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಎಲ್ಲ ಭಾರತೀಯರ ಡಿಎನ್‌ಎ ಒಂದೇ ಆಗಿದ್ದು, ದ್ರಾವಿಡ ಮತ್ತು ಆರ್ಯವಾದ ಎಂಬುದು ಶುದ್ಧ ಸುಳ್ಳು. ಸ್ವತಃ ಶಂಕರಾಚಾರ್ಯರು ತನ್ನನ್ನು ತಾನು ದ್ರಾವಿಡ ಶಿಶು ಎಂಬುದಾಗಿ ಹೇಳಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. **(ವಾರ್ತಾಭಾರತಿ 9–12–2021)**

==================================================================

### ಎಡಿಸನ್ ಪ್ರತಿಪಾದನೆ ಒಪ್ಪಿದ ಅಮೆರಿಕ ಮನೋಶಾಸ್ತ್ರಜ್ಞರು

# ಶತಮಾನದ ಸಿದ್ಧಾಂತಕ್ಕೆ ಮೊಹರು

**■ ಅರೆನಿದ್ರಾವಸ್ಥೆಯಲ್ಲಿ ಸಿಗುವ ಉತ್ತರಗಳ ಅನುಷ್ಠಾನದಿಂದ ಸೃಜನಶೀಲತೆ ಹೆಚ್ಚು ಎಂದ ಸಂಶೋಧಕರು**

**ವಾಷಿಂಗ್ಟನ್:** 'ನೀವು ಯಾವುದೋ ಗೊಂದಲ ಅಥವಾ ಸಮಸ್ಯೆಯಲ್ಲಿರುತ್ತೀರಿ. ಅದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ನೀವು ಎಷ್ಟೇ ಯೋಚಿಸಿದರೂ ಪುನಃ ಏನೇನೋ ಗೊಂದಲ, ನೂರಾರು ಪ್ರಶ್ನೆ ಉಪಪ್ರಶ್ನೆಗಳು ಮನಸ್ಸಿನಲ್ಲಿ ಮೂಡುತ್ತಿವೆ. ಅಂಥ ಸಮಯದಲ್ಲೇ ನೀವು ಮಾನಸಿಕವಾಗಿ ದಣಿದು ನಿದ್ರಾವಸ್ಥೆಗೆ ಜಾರುತ್ತೀರಿ. ಆಗ ನಿಮಗೆ ಕನಸು ಬೀಳಲಾರಂಭಿಸುತ್ತದೆ. ಆ ಕನಸಿನಲ್ಲಿ ನಿಮ್ಮ ಸಮಸ್ಯೆಗಳಿಗೆ ನಿಮಗೆ ಖುದ್ದಾಗಿ ಉತ್ತರ ಸಿಕ್ಕಂತಾಗುತ್ತದೆ. ಆಗ ನೀವು ಥಟ್ಟನೆ ಎದ್ದರೆ, ಕನಸಿನಲ್ಲಿ ಕಂಡ ಪರಿಹಾರೋಪಾಯವನ್ನು ಅನುಷ್ಠಾನಕ್ಕೆ ತಂದಾಗ ನಿಮಗೆ ಯಶಸ್ಸು ಖಂಡಿತವಾಗಿ ಸಿಗುತ್ತದೆ.'

–ಹೀಗೆಂದು, ಶತಮಾನದ ಹಿಂದೆ ಖ್ಯಾತ ವಿಜ್ಞಾನಿ ಥಾಮಸ್ ಆಲ್ವಾ ಎಡಿಸನ್ ಹೇಳಿದ್ದ ಮಾತೊಂದು ಈಗ ಪ್ರಾಯೋಗಿಕವಾಗಿ ಯಶಸ್ವಿಯಾಗಿದೆ. ಅಷ್ಟೇ ಅಲ್ಲ ಹೀಗೆ ಅರೆನಿದ್ರೆಯಲ್ಲಿ ಬೀಳುವ ಕನಸುಗಳನ್ನು ತತ್‌ಕ್ಷಣ ಎದ್ದು ಅನುಷ್ಠಾನಗೊಳಿಸುವುದರಿಂದ ವ್ಯಕ್ತಿಯ ಸೃಜನಶೀಲತೆ ಹೆಚ್ಚಾಗುತ್ತದೆ ಎಂಬ ಅಂಶವನ್ನು ಅಮೆರಿಕದ ಮನೋಶಾಸ್ತ್ರಜ್ಞರು ಕಂಡುಕೊಂಡಿದ್ದಾರೆ ಎಂದು 'ಸೈನ್ಸ್' ನಿಯತಕಾಲಿಕ ವರದಿ ಮಾಡಿದೆ.

**ಇದನ್ನೇ ಹೇಳಿದ್ದ ಇಬ್ಬರು ಮಹಾಶಯರು!:** ಎಡಿಸನ್ ಹೇಳಿದ್ದಿಷ್ಟು. ಹಲವಾರು ವೈಜ್ಞಾನಿಕ ಸಂಶೋಧನೆಗಳ ವೇಳೆ ಒಂದು ಹಂತದಲ್ಲಿ ದಾರಿ ಕಾಣದೇ ನಿಂತಾಗ ಥಾಮಸ್ ಆಲ್ವ ಎಡಿಸನ್, ಒಂದು ಕಬ್ಬಿಣದ ಚೆಂಡನ್ನು ಹಿಡಿದುಕೊಂಡು ಆರಾಮ ಕುರ್ಚಿಯಲ್ಲಿ ಗಾಢವಾಗಿ ನಿದ್ರೆಗೆ ಜಾರುತ್ತಿದ್ದರಂತೆ. ಆಗ ಬೀಳುವ ಕನಸಿನಲ್ಲಿ ಅವರಿಗೆ ಸಮಸ್ಯೆಗೆ ಉತ್ತರಗಳು ಸಿಗುತ್ತಿದ್ದವಂತೆ. ಇದೇ ಮಾತನ್ನು ಸ್ಪೇನ್ ವರ್ಣಚಿತ್ರಗಾರ ಸಾಲ್ವಡಾರ್ ಡಾಲಿ ಕೂಡ ಹೇಳಿದ್ದ.

ಆಗ ಇವರಿಬ್ಬರ ಮಾತುಗಳಿಗೆ ಹೆಚ್ಚಾಗಿ ಜಾಗತಿಕ ಮಾನ್ಯತೆ ಸಿಕ್ಕಿರಲಿಲ್ಲ. ಆದರೆ ಈ ನಿಟ್ಟಿನಲ್ಲಿ ಪ್ರಯೋಗಗಳು ಜಾರಿಯಲ್ಲಿದ್ದವು. ಈಗ ಎಡಿಸನ್ ಹಾಗೂ ಡಾಲಿ ಸಿದ್ಧಾಂತಗಳು ನಿಜ ಎಂದು ವಿಜ್ಞಾನಿಗಳು ತಿಳಿಸಿದ್ದು, ಅರೆನಿದ್ರಾವಸ್ಥೆಯಲ್ಲಿ ಮನಸ್ಸು ನಿರಾತಂಕವಾಗಿ ಯೋಚಿಸುವ ಸಾಮರ್ಥ್ಯವನ್ನು ಗಳಿಸುವುದಾದರೂ ಹೇಗೆ ಎಂಬುದರ ಬಗ್ಗೆ ಮತ್ತಷ್ಟು ಪ್ರಯೋಗಗಳನ್ನು ನಡೆಸಲು ಮುಂದಾಗಿದ್ದಾರೆ.

**(ಉದಯವಾಣಿ 11–12–2021)**

==================================================================

### ಸಂಘಟನೆ ಭಯೋತ್ಪಾದನೆಯ ಹೆಬ್ಬಾಗಿಲೆಂದ ಕೊಲ್ಲಿ ರಾಷ್ಟ್ರ
### ಭಾರತದಲ್ಲಿನ ತಬ್ಲಿಘಿ ಅಭಿಯಾನಕ್ಕೆ ಹೊಡೆತ

# ತಬ್ಲಿಘಿ ಜಮಾತ್‌ಗೆ ನಿಷೇಧ ಹೇರಿದ ಸೌದಿ ಅರೇಬಿಯಾ

**ರಿಯಾದ್:** ತಬ್ಲಿಘಿ ಜಮಾತ್ ಎಂಬುದು ಭಯೋತ್ಪಾದನೆಗೆ ಇರುವ ಹೆಬ್ಬಾಗಿಲು (ಗೇಟ್ ಆಫ್ ಟೆರರ್) ಎಂದು ವ್ಯಾಖ್ಯಾನಿಸಿರುವ ಸೌದಿ ಅರೇಬಿಯಾ, ಅದರ ಮೇಲೆ ನಿಷೇಧ ಹೇರಿದೆ. ಈ ಮೂಲಕ ಇಸ್ಲಾಮಿಕ್ ಜಗತ್ತು ನಿಬ್ಬೆರಗಾಗುವಂತೆ ಮಾಡಿದೆ. ಭಾರತದ ಮಟ್ಟಿಗೆ

ಇದು ಬಹಳ ಮಹತ್ವಪೂರ್ಣ ಬೆಳವಣಿಗೆಯಾಗಿದೆ. ತಬ್ಲಿಘಿ ಜಮಾತ್ ಎಂಬುದು ಇಸ್ಲಾಂಗೆ ಮತಾಂತರಿಸುವ ಅಭಿಯಾನ ಎಂದೇ ಕುಖ್ಯಾತಿ ಪಡೆದಿದೆ. ಸೌದಿ ಅರೇಬಿಯಾದ ಈ ನಡೆ ತಬ್ಲಿಘಿ ಜಮಾತ್ ಅಭಿಯಾನಕ್ಕೆ ಬಹುದೊಡ್ಡ ಹೊಡೆತವನ್ನೇ ನೀಡಿದೆ.

**ಆರ್ಥಿಕ ನೆರವಿಗೆ ಕತ್ತರಿ:** ಜಗತ್ತಿನ ಬಹುತೇಕ ಭಾಗಗಳಲ್ಲಿ ವಿಶೇಷವಾಗಿ ಭಾರತದಲ್ಲಿನ ತಬ್ಲಿಘಿ ಅಭಿಯಾನಕ್ಕೆ ಬೇಕಾದ ಆರ್ಥಿಕ ಸಂಪನ್ಮೂಲಕ್ಕೆ ಸೌದಿ ಅರೇಬಿಯಾದಿಂದ ಸಿಗುತ್ತಿದ್ದ ದಾನ, ದೇಣಿಗೆಗಳೇ ಪ್ರಮುಖ ಪಾತ್ರವಹಿಸಿದ್ದವು. ಭಾರತದಲ್ಲಿ ನಡೆಸುತ್ತಿರುವ ಅಭಿಯಾನಕ್ಕೆ 'ಇಸ್ಲಾಂ ಅನ್ನು ಪರಿಶುದ್ಧಗೊಳಿಸುವ ಅಭಿಯಾನ' ಎಂದೇ ತಬ್ಲಿಘಿ ವ್ಯಾಖ್ಯಾನ ನೀಡಿತ್ತು. ಈಗ ಸೌದಿಯಲ್ಲೇ ಈ ಅಭಿಯಾನ ನಿಷೇಧಿಸಲ್ಪಟ್ಟ ಕಾರಣ ಅದರ ಹಣದ ಹರಿವಿಗೆ ಕತ್ತರಿ ಬಿದ್ದಂತೆ ಆಗಿದೆ.

**ಸೌದಿ ಸರ್ಕಾರದ ಸೂಚನೆ:** ಸೌದಿಯಲ್ಲಿ ನಿಷೇಧಕ್ಕೆ ಒಳಗಾಗಿರುವ ತಬ್ಲಿಘಿ ಜಮಾತ್ ಮತ್ತು ದಾವಾಹ್ ಗುಂಪಿನ ಜತೆಗೆ ಸಂಪರ್ಕ ಇರಿಸಿಕೊಳ್ಳದಂತೆ ದೇಶದ ಮಸೀದಿಯಲ್ಲಿರುವ ಧರ್ಮಬೋಧಕರಿಗೆ ಸರ್ಕಾರ ಸೂಚನೆ ನೀಡಿದೆ.

**ಸೌದಿಯಲ್ಲಿ ವಹಾಬಿಗಳಿಂದ ವಿರೋಧ:** ಸೌದಿ ಅರೇಬಿಯಾದ ಚೌಕಟ್ಟಿನಲ್ಲಿ ನೋಡುವುದಾದರೆ ತಬ್ಲಿಘಿಗಳಿಗೆ ಪ್ರಮುಖ ವಿರೋಧ ವಹಾಬಿಗಳಿಂದ ವ್ಯಕ್ತವಾಗಿದೆ. ವಹಾಬಿಗಳು ಸೌದಿಯಲ್ಲಿ ಆಡಳಿತ ಸೂತ್ರ ಹಿಡಿದಿರುವಂಥವರು. ತಬ್ಲಿಘಿಗಳು ಇವರನ್ನು 'ಸಮಾಧಿಯ ಆರಾಧಕರು' ಎಂದು ಟೀಕಿಸುತ್ತಾರೆ. ಸೌದಿ ಅರೇಬಿಯಾದ ಮಾಜಿ ಮುಖ್ಯ ಮುಫ್ತಿ ಅಬ್ದ್–ಅಲ್–ಅಜೀಜ್ ಇಬ್ನ್ ಬಝ್ 2016ರಲ್ಲಿ ತಬ್ಲಿಘಿ ಜಮಾತ್ ವಿರುದ್ಧ ಫತ್ವಾ ಹೊರಡಿಸಿದ್ದರು.

**ಇನ್ನೆಲ್ಲಿ ನಿಷೇಧ ಸಾಧ್ಯತೆ:** ಸೌದಿ ಅರೇಬಿಯಾವೇ ತಬ್ಲಿಘಿ ಅನ್ನು ನಿಷೇಧಿಸಿರುವುದು ಜಗತ್ತಿನ ಗಮನ ಸೆಳೆದಿದೆ. ಇದರಿಂದ ಪ್ರೇರಣೆ ಪಡೆದು ಮಲೇಷ್ಯಾ, ಇಂಡೋನೇಷ್ಯಾ, ಬಾಂಗ್ಲಾದೇಶಗಳು ತಬ್ಲಿಘಿ ಜಮಾತ್ ನಿಷೇಧಿಸುವ ಸಾಧ್ಯತೆ ಇದೆ.

### ಜಗತ್ತಿಗೆ ಪಸರಿಸಿದ ಅಭಿಯಾನ

ತಬ್ಲಿಘಿ 'ಪರಿಶುದ್ಧ' ಇಸ್ಲಾಂ ಅಭಿಯಾನ ಕಾಲಾನುಕ್ರಮದಲ್ಲಿ ಜಗದ್ವ್ಯಾಪಿಯಾಯಿತು. ಇತ್ತೀಚಿನ ವರ್ಷಗಳಲ್ಲಿ ಈ 'ಪರಿಶುದ್ಧ' ಇಸ್ಲಾಂ ಅಭಿಯಾನ ದಾರಿ ತಪ್ಪಿದ್ದು, ಮೂಲಭೂತವಾದಿಗಳೊಂದಿಗೆ ಸಂಪರ್ಕ ಹೊಂದಿತು. ವಿವಿಧ ರಾಷ್ಟ್ರಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಸಂಸ್ಥೆಗಳ ಗಮನ ಸೆಳೆದಿತ್ತು. **(ವಿಜಯವಾಣಿ 13–12–2021)**

==============================================================

## ಭಾರತಕ್ಕೆ ತಬ್ಲಿಘಿ ಅಪಾಯ?

### ಗುಪ್ತಚರ ಮೂಲಗಳಿಂದ ಆಘಾತಕಾರಿ ಮಾಹಿತಿ

**ಹೊಸದಿಲ್ಲಿ:** ಸುನ್ನಿ ಇಸ್ಲಾಮಿಕ್ ಮಿಷನರಿ ಮೂವ್‌ಮೆಂಟ್ ತಬ್ಲಿಘಿ ಜಮಾತ್ ಭಾರತ ಮಾತ್ರವಲ್ಲದೆ ಇಡೀ ಜಗತ್ತಿಗೇ ಅಪಾಯಕಾರಿ. ಈ ಸಂಸ್ಥೆಯು ಜೆಹಾದಿ ಸಿದ್ಧಾಂತವಾದಿ ಅಬು ಮುಸಾಬ್ ಅಲ್‌ಸುರಿಯನ್ನು ಪ್ರತಿನಿಧಿಸುತ್ತಿದ್ದು, ಮಾದರಿ ಜಾಗತಿಕ ಜೆಹಾದಿ ಜಾಲವಾಗಿ ಮಾರ್ಪಾಡಾಗುವುದೇ ಇದರ ಉದ್ದೇಶ ಎಂದು ಗುಪ್ತಚರ ಮೂಲಗಳು ತಿಳಿಸಿರುವುದಾಗಿ ನ್ಯೂಸ್ 18 ವರದಿ ಮಾಡಿದೆ.

ಅಲ್‌ಕಾಯಿದಾ, ಐಸಿಸ್‌ನಂತಹ ಉಗ್ರ ಸಂಘಟನೆಗಳು ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತಿದ್ದರೂ, ತಬ್ಲಿಘಿ ಜಮಾತ್ ಮೇಲೆ ಯಾವ ಪರಿಣಾಮವೂ ಬೀರಿಲ್ಲ. ಈ ಸಂಸ್ಥೆಯು ಈಗಲೂ ಐಸಿಸ್‌ನಂಥ ಉಗ್ರ ಸಂಘಟನೆಗಳಿಗೆ ಯುವಕರನ್ನು ನೇಮಕ ಮಾಡುತ್ತಲೇ ಇದೆ. ಜಗತ್ತಿನ ಮೂಲೆ ಮೂಲೆಯಲ್ಲೂ ತನ್ನ ಸದಸ್ಯರಿಗೆ ತರಬೇತಿ ನೀಡುತ್ತಿದೆ. ಪಾಕ್‌ನಂಥ ದೇಶಗಳ ಯುವಕರನ್ನು ಹೆಚ್ಚು ಸೆಳೆಯುತ್ತಿದೆ ಎಂದೂ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಲಾಗಿದೆ. ಕೆಲವು ದೇಶಗಳಲ್ಲಿ ಉಗ್ರ ಸಂಘಟನೆಗಳಿಗೆ ಹಣಕಾಸು ನೆರವನ್ನೂ ನೀಡುತ್ತಿವೆ. ಭಾರತದಲ್ಲೂ ಲಕ್ಷಾಂತರ ಮಂದಿ ತಬ್ಲಿಘಿ ಅನುಯಾಯಿಗಳಿದ್ದು, ಭವಿಷ್ಯದಲ್ಲಿ ಇದು ದೇಶಕ್ಕೆ ಅಪಾಯಕಾರಿ ಆಗುವ ಸಾಧ್ಯತೆಯಿದೆ ಎಂದೂ ಗುಪ್ತಚರ ಮೂಲಗಳು ತಿಳಿಸಿವೆ. **(ಉದಯವಾಣಿ 16–12–2021)**

==============================================================

## ಅನ್ನ ಹಾಕಿದ್ದಕ್ಕೆ 8 ಲಕ್ಷ ರೂ. ದಂಡ!

**ಮುಂಬಯಿ:** ಸಂಚಾರಿ ನಿಯಮ ಉಲ್ಲಂಘಿಸಿದರೆ, ಕೊರೊನಾ ಮುನ್ನೆಚ್ಚರಿಕೆ ಮರೆತರೆ ದಂಡ ಹಾಕುವುದನ್ನು ನೋಡಿರುತ್ತೀರಿ. ಆದರೆ ಮಹಾರಾಷ್ಟ್ರದ ಮುಂಬಯಿಯ ಕಾಂಪ್ಲೆಕ್ಸ್ ಒಂದು ಬೀದಿ ನಾಯಿಗಳಿಗೆ ಅನ್ನ ಹಾಕಿದವರಿಗೆ ಲಕ್ಷ ಲಕ್ಷ ರೂ. ದಂಡ ಹಾಕಲಾರಂಭಿಸಿದೆ! ನವಿ ಮುಂಬಯಿಯ ಎನ್‌ಆರ್‌ಐ ಕಾಂಪ್ಲೆಕ್ಸ್‌ನಲ್ಲಿ ಸುಮಾರು 40 ಬಿಲ್ಡಿಂಗ್‌ಗಳಿದ್ದು, ನೂರಾರು ಅಪಾರ್ಟ್‌ಮೆಂಟ್‌ಗಳಿವೆ. ಈ ಕಾಂಪ್ಲೆಕ್ಸ್ ಆವರಣದಲ್ಲಿ ಬೀದಿ ನಾಯಿಗಳಿಗೆ ಅನ್ನ ಹಾಕಿದರೆ ಒಂದು ದಿನಕ್ಕೆ 5,000 ರೂ. ದಂಡ ವಿಧಿಸಲಾಗುತ್ತಿದೆ. ಇಲ್ಲಿನ ನಿವಾಸಿ ಅಂಶು ಸಿಂಗ್ ಎಂಬ ಮಹಿಳೆ 2021ರ ಜುಲೈಯಿಂದ ಪ್ರತೀದಿನ ಬೀದಿನಾಯಿಗಳಿಗೆ ಅನ್ನ ಹಾಕುತ್ತಿದ್ದರು. ಹೀಗಾಗಿ ಅವರಿಗೆ 8 ಲಕ್ಷ ರೂ. ದಂಡ

ವಿಧಿಸಲಾಗಿದೆ. ಹಾಗೆಯೇ ಅದೇ ಕಾಂಪ್ಲೆಕ್ಸ್‌ನ ಮತ್ತೊಬ್ಬ ಮಹಿಳೆ ಲೀನಾ ವರ್ಮಾ ಅವರ ದಂಡದ ಮೊತ್ತ 6 ಲಕ್ಷ ರೂ. ದಾಟಿದೆಯಂತೆ.

**(ಉದಯವಾಣಿ 18–12–2021)**

==========================================================

## ಉ. ಕೊರಿಯಾದಲ್ಲಿ ನಗು ನಿಷೇಧ!

**ಪಾಂಗ್ಯಾಂಗ್, ಡಿ. 17:** ನಕ್ಕರೆ ಅದೇ ಸ್ವರ್ಗ ಎನ್ನುವ ಮಾತಿದೆ. ಆದರೆ ಉತ್ತರ ಕೊರಿಯಾದಲ್ಲಿ ನಕ್ಕರೆ ಶಿಕ್ಷೆ ಕಾದಿದೆ! ಉತ್ತರ ಕೊರಿಯಾದ ಕಿಮ್ ಜುಂಗ್ ಉನ್ ಸರ್ವಾಧಿಕಾರವು ಹೀಗೊಂದು ನಿಯಮ ಜಾರಿಗೊಳಿಸಿದೆ. ಆತನ ತಂದೆ, ಮಾಜಿ ಸರ್ವಾಧಿಕಾರಿ ಕಿಮ್ ಜಾಂಗ್ ಇಲ್ ಸಾವನ್ನಪ್ಪಿ ಶುಕ್ರವಾರಕ್ಕೆ 10 ವರ್ಷಗಳಾಗಿರುವ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ 10 ದಿನಗಳ ಕಾಲ ಸಂತಾಪ ಸೂಚಕವಾಗಿ ನಗುವುದನ್ನು ನಿಷೇಧಿಸಲಾಗಿದೆ.

ಮದ್ಯಪಾನ, ದಿನಸಿ ಖರೀದಿ, ಪ್ರವಾಸ, ಕಾರ್ಯಕ್ರಮ ನಡೆಸುವುದು, ಅಂತ್ಯ ಕ್ರಿಯೆಗೂ ನಿಷೇಧವಿದೆ. ಈ ನಿಯಮ ಉಲ್ಲಂಘಿಸಿದವರಿಗೆ ಕಠಿನ ಶಿಕ್ಷೆ ಕಾದಿದೆ ಎಂದು ಆದೇಶ ಹೊರಡಿಸಲಾಗಿದೆ. ಈ ಹಿಂದೆಯೂ ಹಲವು ಬಾರಿ ಇಂತಹ ಕಠಿನ ನಿಯಮಗಳು ಜಾರಿಯಾಗಿದ್ದು, ಅದನ್ನು ಉಲ್ಲಂಘಿಸಿದವರು ನಾಪತ್ತೆಯಾಗಿದ್ದಾರೆ ಎಂದು ಸ್ಥಳೀಯರು ಹೇಳಿದ್ದಾರೆ. **(ಉದಯವಾಣಿ 18–12–2021)**

==========================================================

## ಚೀನದ 135 ವರ್ಷದ ಅಜ್ಜಿ ನಿಧನ

**ಬೀಜಿಂಗ್:** ಚೀನದ ಅತ್ಯಂತ ಹಿರಿಯರು ಎಂಬ ಖ್ಯಾತಿಗೆ ಪಾತ್ರರಾಗಿದ್ದ 135 ವರ್ಷದ ಅಜ್ಜಿ ಅಲಿಮಿಹನ್ ಸೆಯಿತಿ ಗುರುವಾರ ನಿಧನ ಹೊಂದಿದ್ದಾರೆ. ದೀರ್ಘಾಯುಷ್ ಪಟ್ಟಣ ಎಂದೇ ಕರೆಸಿಕೊಳ್ಳುವ ಕೊಮುಕ್ಸೆರಿಕ್‌ನಲ್ಲಿ ವಾಸವಿದ್ದ ಅಲಿಮಿಹೆನ್, 1886ರ ಜೂ.25ರಂದು ಜನಿಸಿದ್ದರು. 2013ರಲ್ಲಿ ಚೀನ ಅವರನ್ನು ರಾಷ್ಟ್ರದ ಅತ್ಯಂತ ಹಿರಿಯವರು ಎಂದು ಘೋಷಿಸಿತ್ತು. ಕೊನೆಯ ದಿನದವರೆಗೂ ಅತ್ಯಂತ ಸರಳ ಜೀವನ ನಡೆಸಿದ್ದ ಅವರು ಸಮಯಕ್ಕೆ ಸರಿಯಾಗಿ ಊಟ–ತಿಂಡಿ ಮಾಡಿಕೊಂಡಿದ್ದರು. ಗಿಡಗಳಿಗೆ ನೀರು ಹಾಕುವುದು, ಮೊಮ್ಮಕ್ಕಳ ಮಕ್ಕಳೊಂದಿಗೆ ಆಟವಾಡುತ್ತಾ ಕಾಲ ಕಳೆಯುತ್ತಿದ್ದರು. ಕೊಮುಕ್ಸೆರಿಕ್ ನಗರದಲ್ಲಿ ಸಾಕಷ್ಟು ಮಂದಿ 90 ವರ್ಷ ಮೇಲ್ಪಟ್ಟವರಿರುವುದರಿಂದ ಆ ನಗರವನ್ನು ದೀರ್ಘಾಯುಷ್ ನಗರ ಎಂದೂ ಕರೆಯಲಾಗುತ್ತದೆ. **(ಉದಯವಾಣಿ 19–12–2021)**

==========================================================

## ನಗುವುದನ್ನು ಕಲಿಯೋಣ ಎಂದ ಜಡ್ಜ್

**ಚೆನ್ನೈ:** ಬಹುಶಃ ನಮ್ಮ ಸಂವಿಧಾನಕ್ಕೆ ತಿದ್ದುಪಡಿ ತಂದು, 'ದೇಶದ ಎಲ್ಲ ನಾಗರಿಕರಿಗೂ ನಗುವ ಹಕ್ಕು ಹಾಗೂ ಹಾಸ್ಯಮಯ ಪ್ರವೃತ್ತಿ ಹೊಂದುವ ಹಕ್ಕು ಇದೆ' ಎಂಬುದನ್ನು ಸೇರಿಸುವ ಸಮಯ ಬಂದಿದೆ. ಇದು ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರು ಆಡಿದ ಮಾತು.

ಅರ್ಜಿದಾರ ಮಥಿವಣ್ಣನ್ ಇತ್ತೀಚೆಗೆ ಪುತ್ರಿ, ಅಳಿಯನೊಂದಿಗೆ ತಿರುಮಲೈಗೆ ಪ್ರವಾಸ ಹೋಗಿದ್ದರು. ಫೇಸ್‌ಬುಕ್‌ನಲ್ಲಿ ಫೋಟೋ ಅಪ್‌ಲೋಡ್ ಮಾಡಿ, 'ಶೂಟಿಂಗ್ ಅಭ್ಯಾಸಕ್ಕಾಗಿ ತಿರುಮಲೈಗೆ ಪ್ರವಾಸ' ಎಂದು ಬರೆದಿದ್ದರು. ಅವರ ವಿರುದ್ಧ ಪೊಲೀಸರು, ಹಲವು ಸೆಕ್ಷನ್‌ಗಳಡಿ ಕೇಸ್ ದಾಖಲಿಸಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್, 'ಹೀಗಾದಲ್ಲಿ ಸಂವಿಧಾನದಲ್ಲಿ ನಗುವ, ತಮಾಷೆ ಮಾಡುವ ಹಕ್ಕನ್ನೂ ಸೇರಿಸಬೇಕಾಗಬಹುದು' ಎಂದು ಹೇಳಿ ಎಫ್‌ಐಆರ್ ವಜಾ ಮಾಡಿತು. **(ಉದಯವಾಣಿ 22–12–2021)**

==========================================================

## ಗರ್ಭದಲ್ಲಿ, ಸಮಾಧಿಯಲ್ಲಿ ಮಾತ್ರ ಹೆಣ್ಣು ಮಕ್ಕಳು ಸುರಕ್ಷಿತ

### ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ

**ಚೆನ್ನೈ:** 'ಹೆಣ್ಣು ಮಕ್ಕಳು ತಾಯಿಯ ಗರ್ಭದಲ್ಲಿ ಮತ್ತು ಸಮಾಧಿಯಲ್ಲಿ ಮಾತ್ರ ಸುರಕ್ಷಿತಳು' ಹೀಗೆಂದು ಪತ್ರ ಬರೆದಿಟ್ಟು 11ನೇ ತರಗತಿ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶನಿವಾರ ಚೆನ್ನೈಯಲ್ಲಿ ಈ ದುರಂತ ಘಟನೆ ನಡೆದಿದೆ. ಜತೆಗೆ ಆಕೆಯ ಪತ್ರ ವೈರಲ್ ಆಗಿದೆ. ಘಟನೆಗೆ ಸಂಬಂಧಿಸಿದಂತೆ ಯುವಕನೊಬ್ಬನನ್ನು ಬಂಧಿಸಲಾಗಿದೆ. ಯುವತಿಯ ತಾಯಿ ಮಾರುಕಟ್ಟೆಗೆ ಹೋದ ಸಮಯದಲ್ಲಿ ಯುವತಿ ಮನೆಯಲ್ಲೇ ನೇಣಿಗೆ ಶರಣಾಗಿದ್ದಳು. ಪೊಲೀಸರು ವಿಚಾರಣೆ ನಡೆಸಿದ ವೇಳೆ ಯುವಕ ತಪ್ಪೊಪ್ಪಿಕೊಂಡಿದ್ದು, ಎಂಟು ತಿಂಗಳಿನಿಂದ ವಿದ್ಯಾರ್ಥಿನಿ ಜತೆಗೆ ದೈಹಿಕ ಸಂಬಂಧ ಇಟ್ಟುಕೊಂಡಿದ್ದೆ. ಜತೆಗೆ ಆಕೆಗೆ ಕಿರುಕುಳವನ್ನೂ ನೀಡುತ್ತಿದ್ದೆ ಎಂದು ಹೇಳಿಕೊಂಡಿದ್ದಾನೆ. ಡೆತ್

ನೋಟ್‌ನಲ್ಲಿ 'ಶಾಲೆಯೂ ಸುರಕ್ಷಿತವಲ್ಲ, ಶಿಕ್ಷಕರನ್ನು ನಂಬಲಾಗುವುದಿಲ್ಲ. ತಂದೆ–ತಾಯಿ ತಮ್ಮ ಮಕ್ಕಳಿಗೆ ಮಹಿಳೆಯರಿಗೆ ಗೌರವ ಕೊಡುವುದನ್ನು ಕಲಿಸಬೇಕು. ಲೈಂಗಿಕ ದೌರ್ಜನ್ಯ ನಿಲ್ಲಿಸಿ' ಎಂದು ಬರೆದಿಟ್ಟಿದ್ದಳು. ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

**(ಉದಯವಾಣಿ 21–12–2021)**

==========================================================

# ಯುಎಇನಲ್ಲಿ ಇನ್ನು ಸೆನ್ಸಾರ್ ಫ್ರೀ

## 21 ವರ್ಷ ಮೇಲ್ಪಟ್ಟವರಿಗೆ ವೀಕ್ಷಣೆಯ ಹೊಸ ವ್ಯವಸ್ಥೆ

**ದುಬೈ:** ತೀರಾ ಕಟ್ಟುನಿಟ್ಟಿನ ಸಾಂಸ್ಕೃತಿಕ ಚೌಕಟ್ಟು ಹೊಂದಿದ್ದ ಯುಎಇ ಈಗಾಗಲೇ ನಿಧಾನಕ್ಕೆ ಆಧುನಿಕ ಜಗತ್ತಿಗೆ ತೆರೆದುಕೊಳ್ಳಲಾರಂಭಿಸಿದೆ. ಹೊಸತಾಗಿ ಪ್ರಕಟ ಮಾಡಿರುವ ಕ್ರಮವೊಂದರಲ್ಲಿ ಸಿನೆಮಾ ಪ್ರಮಾಣೀಕರಣ ವ್ಯವಸ್ಥೆಯನ್ನೇ ರದ್ದು ಮಾಡಿದೆ. ಧಾರ್ಮಿಕ ನಂಬಿಕೆಗಳಿಗೆ ಅಡ್ಡಿ ಎಂಬ ಕಾರಣದಿಂದಾಗಿ ಅಲ್ಲಿ ಬಿಡುಗಡೆಯಾಗುತ್ತಿದ್ದ ಸಿನೆಮಾಗಳಿಗೆ ಕತ್ತರಿ ಪ್ರಯೋಗ ಮಾಡಲಾಗುತ್ತಿತ್ತು. ಇನ್ನು ಮುಂದೆ ಅಂಥ ವ್ಯವಸ್ಥೆಯೇ ಇರುವುದಿಲ್ಲ. ಎಮಿರೇಟ್ಸ್ ಮೀಡಿಯಾ ರೆಗ್ಯುಲೇಟರಿ ಅಥಾರಿಟಿ ಹೊಸತಾಗಿರುವ ಪ್ರಮಾಣೀಕರಣ ವ್ಯವಸ್ಥೆಯನ್ನು ಜಾರಿ ತರಲಿದೆ. ಅದರ ಅನ್ವಯ ಅಂತಾರಾಷ್ಟ್ರೀಯವಾಗಿ ವೀಕ್ಷಕರಿಗೆ ಅನ್ವಯವಾಗುವಂತೆ ಸಿನೆಮಾ ವೀಕ್ಷಣೆ ಮಾಡಿ 21 ವರ್ಷ ವಯಸ್ಸಿಗಿಂತ ಮೇಲ್ಪಟ್ಟವರಿಗೆ ವೀಕ್ಷಿಸಲು ಅನುಕೂಲವಾಗುವಂತೆ ನಿಯಮದಲ್ಲಿ ಬದಲಾವಣೆ ಮಾಡಿದೆ. ಈ ಬಗ್ಗೆ ಮಾಧ್ಯಮ ನಿಯಂತ್ರಣ ಪ್ರಾಧಿಕಾರ ಟ್ವೀಟ್ ಮಾಡಿ ಮಾಹಿತಿ ನೀಡಿದೆ. ಮುಂದಿನ ತಿಂಗಳಿನಿಂದ ಹೊಸ ನಿಯಮ ಜಾರಿಯಾಗಲಿದೆ. ಇತ್ತೀಚೆಗಷ್ಟೇ ವಿವಾಹಿತರಾಗದ ಜೋಡಿ ಜತೆಯಾಗಿ ವಾಸಿಸುವ ನಿಟ್ಟಿನಲ್ಲಿ ಕೂಡ ನಿಯಮಗಳಲ್ಲಿ ಬದಲಾವಣೆ ಮಾಡಿಕೊಂಡಿತ್ತು. ಇಷ್ಟು ಮಾತ್ರವಲ್ಲದೆ, ಪಾಶ್ಚಿಮಾತ್ಯ ಶೈಲಿಯಲ್ಲಿ ಶನಿವಾರ ಮತ್ತು ರವಿವಾರಗಳನ್ನು ವಾರಾಂತ್ಯವೆಂದು ಪರಿಗಣಿಸಲು ತೀರ್ಮಾನಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅಂತಾರಾಷ್ಟ್ರೀಯ ಕೆಲಸಗಾರರನ್ನು ಆಕರ್ಷಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ. **(ಉದಯವಾಣಿ 21–12–2021)**

==========================================================

# ಗಾಂಧಿ ಅವಹೇಳನ: ಪಶ್ಚಾತ್ತಾಪವಿಲ್ಲ

**ರಾಯ್ಪುರ:** ಮಹಾತ್ಮಾ ಗಾಂಧಿಯವರನ್ನು ಅವಹೇಳನ ಮಾಡಿ ವಿವಾದಕ್ಕೀಡಾಗಿರುವ ಸ್ವಾಮಿ ಕಾಳಿಚರಣ್ ಮಹರಾಜ್, ಹೊಸದಾಗಿ ವೀಡಿಯೋ ಸಂದೇಶವೊಂದನ್ನು ಬಿಟ್ಟಿದ್ದು, 'ಗಾಂಧಿ ಬಗ್ಗೆ ಅವಹೇಳನ ಮಾಡಿದ್ದಕ್ಕೆ ನನಗೆ ಯಾವುದೇ ಪಶ್ಚಾತ್ತಾಪವಿಲ್ಲ' ಎಂದು ಹೇಳಿಕೊಂಡಿದ್ದಾರೆ. 'ಗಾಂಧಿಯನ್ನು ರಾಷ್ಟ್ರಪಿತ ಎಂದು ನಾನು ಒಪ್ಪುವುದಿಲ್ಲ. ಅವರಿಂದಾಗಿ ಸರ್ದಾರ್ ಪಟೇಲರು ಪ್ರಧಾನಿಯಾಗುವುದು ತಪ್ಪಿತು. ಪಟೇಲರು ಪ್ರಧಾನಿಯಾಗಿದ್ದರೆ ಭಾರತ ಅಮೆರಿಕವನ್ನೂ ಮೀರಿಸಿರುತ್ತಿತ್ತು' ಎಂದು ಕಾಳಿಚರಣ್ ಸ್ವಾಮಿ ಹೇಳಿದ್ದರು. ಗಾಂಧಿಯನ್ನು ಕೊಂದ ಗೋಡ್ಸೆಯನ್ನೂ ಶ್ಲಾಘಿಸಿದ್ದರು. ಅವರ ವಿರುದ್ಧ ಛತ್ತೀಸ್‌ಗಢ, ಮಹಾರಾಷ್ಟ್ರದಲ್ಲಿ ಎಫ್‌ಐಆರ್ ದಾಖಲಾಗಿದೆ.

**(ಉದಯವಾಣಿ 29–12–2021)**

==========================================================

# 50 ರೂ. ಕದ್ದಿದ್ದಕ್ಕೆ ಮಗನನ್ನೇ ಕೊಂದ ಅಪ್ಪ!

**ಮುಂಬಯಿ:** ಹಣ ಕದ್ದ ಎನ್ನುವ ಕಾರಣಕ್ಕೆ ತಂದೆಯೊಬ್ಬ 10 ವರ್ಷದ ಮಗನನ್ನೇ ಕೊಂದಿರುವ ಘಟನೆ ಮಹಾರಾಷ್ಟ್ರದ ಥಾಣೆಯಲ್ಲಿ ನಡೆದಿದೆ.

ವಗೋಭಾ ನಗರದ ನಿವಾಸಿಯಾಗಿರುವ ಸಂದೀಪ್ ಮಗನನ್ನು ಕೊಂದಿರುವ ಆರೋಪಿ. ಸಂದೀಪ್‌ನ ಮಗ ಗುರುವಾರದಂದು ಅಪ್ಪನ ಜೇಬಿನಲ್ಲಿದ್ದ 50 ರೂ. ಕದ್ದಿದ್ದನಂತೆ. ಆ ಹಿನ್ನೆಲೆಯಲ್ಲಿ ಆತ ಮಗನಿಗೆ ಸಾಯುವಷ್ಟು ಹೊಡೆದಿದ್ದಾನೆ. ಈ ವಿಚಾರವನ್ನು ಅಕ್ಕ–ಪಕ್ಕದ ಮನೆಯವರು ಪೊಲೀಸರಿಗೆ ಮುಟ್ಟಿಸಿದ್ದಾರೆ. ಪೊಲೀಸರು ಮನೆಗೆ ಬಂದು ಬಾಲಕನನ್ನು ಆಸ್ಪತ್ರೆಗೆ ಕರೆದೊಯ್ಯುವುದರೊಳಗೆ ಆತ ಅಸುನೀಗಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತಂದೆಯ ವಿರುದ್ಧ ಕೇಸು ದಾಖಲಿಸಿಕೊಂಡಿದ್ದಾರೆ ಮತ್ತು ಆತನನ್ನು ಬಂಧಿಸಿದ್ದಾರೆ. **(ಉದಯವಾಣಿ 1–1–2022)**

==========================================================

# ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಿಂಧುತಾಯಿ ನಿಧನ

**ಪುಣೆ, ಜ.5:** 'ಅನಾಥ ಮಕ್ಕಳ ತಾಯಿ' ಎಂದೇ ಜನಪ್ರಿಯರಾಗಿದ್ದ ಸಾಮಾಜಿಕ ಕಾರ್ಯಕರ್ತೆ ಸಿಂಧುತಾಯಿ ಸಪ್ಕಾಳ್ ಅವರು ಹೃದಯಾಘಾತದಿಂದ ಪುಣೆಯ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ 8 ಗಂಟೆಗೆ ನಿಧನರಾಗಿದ್ದಾರೆ.

ಕಳೆದ ವರ್ಷ ಪದ್ಮಶ್ರೀ ಪ್ರಶಸ್ತಿ ಪಡೆದುಕೊಂಡಿದ್ದ ಅವರಿಗೆ 73 ವರ್ಷ ವಯಸ್ಸಾಗಿತ್ತು. ಅಪಾರ ಕಷ್ಟಗಳನ್ನು ಸಹಿಸುತ್ತಾ ಬಡತನದಲ್ಲೇ ಅವರು ಬೆಳೆದರು. ಅನಾಥ ಮಕ್ಕಳಿಗೆ ಹಲವು ಸಂಸ್ಥೆಗಳನ್ನು ಹುಟ್ಟು ಹಾಕಿರುವುದು ಅವರ ಹೆಸರನ್ನು ಅಜರಾಮರವಾಗಿಸಿದೆ.

ಪ್ರತಿಷ್ಠಿತ ಮದರ್ ತೆರೇಸಾ ಪ್ರಶಸ್ತಿ, ದಿ ಮೈಂಡ್ ಆಫ್ ಸ್ಟೀಲ್, ಅಹಲ್ಯಾ ಬಾಯಿ ಹೋಲ್ಕರ್ ಪ್ರಶಸ್ತಿ, ಅಹ್ಮದಿಯಾ ಶಾಂತಿ ಅಂತರ್‌ರಾಷ್ಟ್ರೀಯ ಪುರಸ್ಕಾರ, ರಾಷ್ಟ್ರೀಯ ನಾರಿ ಪುರಸ್ಕಾರ, ಹೀಗೆ ವಿವಿಧ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಪುರಸ್ಕಾರಗಳು ಅವರಿಗೆ ಬಂದಿವೆ. **(ವಾರ್ತಾಭಾರತಿ 6–1–2022)**

==========================================================================

## ನಾಯಿಯ ಬರ್ತ್‌ಡೇ ಪಾರ್ಟಿಗೆ 7 ಲಕ್ಷ ರೂ.!

ಗುಜರಾತ್‌ನ ಅಹ್ಮದಾಬಾದ್‌ನ ಸಹೋದರರು ನಾಯಿಗೇ ಅದ್ದೂರಿ ಬರ್ತ್‌ಡೇ ಪಾರ್ಟಿ ಮಾಡಿದ್ದು, ಇದೀಗ ಬಂಧನಕ್ಕೊಳಗಾಗಿದ್ದಾರೆ. ಚಿರಾಗ್ ಪಟೇಲ್ ಮತ್ತು ಊರ್ವಿಷ್ ಪಟೇಲ್ ಹೆಸರಿನ ಸಹೋದರರು ತಮ್ಮ ಮನೆಯಲ್ಲಿ ಸಾಕಿದ್ದ 'ಅಬ್ಬಿ' ಹೆಸರಿನ ನಾಯಿಗೆ ಇತ್ತೀಚೆಗೆ ಬರ್ತ್‌ಡೇ ಪಾರ್ಟಿ ಮಾಡಿದ್ದಾರೆ. ಇದಕ್ಕಾಗಿ ಬರೋಬ್ಬರಿ 7 ಲಕ್ಷ ರೂ. ಖರ್ಚು ಮಾಡಿದ್ದಾರೆ. ಅದರ ವೀಡಿಯೋ ವೈರಲ್ ಆಗಿದ್ದು, ಕೊರೊನಾ ನಿಯಮ ಉಲ್ಲಂಘನೆ ಹಿನ್ನೆಲೆಯಲ್ಲಿ ಮೂವರನ್ನು ಬಂಧಿಸಲಾಗಿದೆ. **(ಉದಯವಾಣಿ 9–1–2022)**

==========================================================================

### 18 ಕೋಟಿ ವರ್ಷಗಳಷ್ಟು ಹಿಂದಿನ ಸೀ ಡ್ರ್ಯಾಗನ್ ಮೀನು ಪತ್ತೆ

## ಅತೀ ದೊಡ್ಡ ಇಕ್ತ್ಯೋಸರ್ ಅಸ್ಥಿಪಂಜರ

### 10 ಮೀಟರ್ ಅಸ್ಥಿಪಂಜರದ ಉದ್ದ, 18 ಕೋಟಿ ವರ್ಷ ಹಳೆಯದು, 01 ಟನ್ ತಲೆಯ ತೂಕ

**ಲಂಡನ್:** ಸಮುದ್ರ ತಳವೆನ್ನುವುದು ಬೇರೆಯದ್ದೇ ಪ್ರಪಂಚ. ಅಲ್ಲಿ ಅಗಣ್ಯ ಜಲಚರಗಳು ಜೀವಿಸುತ್ತಿವೆ. ಅದೇ ರೀತಿ ಶತಮಾನಗಳ ಹಿಂದೆಯೇ ಜೀವಿಸಿ, ನಶಿಸಿ ಹೋದ ಜಲಚರವಾದ ಇಕ್ತ್ಯೋಸರ್‌ನ ಅತೀ ದೊಡ್ಡ ಅಸ್ಥಿಪಂಜರವೊಂದು ಈಗ ಯು.ಕೆ.ಯಲ್ಲಿ ಪತ್ತೆಯಾಗಿದೆ.

ಯು.ಕೆ.ಯ ರುಟ್ಲ್ಯಾಂಡ್ ಜಲ ಸಂರಕ್ಷಣ ಪ್ರದೇಶದಲ್ಲಿ ಇದು ಪತ್ತೆಯಾಗಿದೆ. ಅಲ್ಲಿನ ಜಲ ಸಂರಕ್ಷಣೆ ತಂಡದ ಮುಖ್ಯಸ್ಥರಾಗಿರುವ ಜೋ ಡೇವಿಸ್ ಅವರಿಗೆ ಸಮುದ್ರದ ತಟದಲ್ಲಿ ಏನೋ ಉಬ್ಬು–ತಗ್ಗು ಕಂಡಿದೆ. ಈ ಹಿಂದೆಯೇ ಈ ರೀತಿ ವೇಲ್ ಮತ್ತು ಡಾಲ್ಫಿನ್‌ಗಳ ಅಸ್ಥಿಪಂಜರ ಪತ್ತೆ ಹಚ್ಚಿದ ಅವರಿಗೆ ಈ ಉಬ್ಬು–ತಗ್ಗಿನಲ್ಲೂ ಯಾವುದೋ ಪಳೆಯುಳಿಕೆ ಇರುವ ಅನುಮಾನ ಬಂದಿದೆ. ಜಲ ಸಂರಕ್ಷಣ ಅಧಿಕಾರಿಯಾದ ಪಾಲ್ ಜತೆಗೂಡಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇಕ್ತ್ಯೋಸರ್‌ನ ಅಸ್ಥಿಗಳು ಕಾಣಿಸಿದ್ದಾಗಿ ಹೇಳಲಾಗಿದೆ.

ಅಂದ ಹಾಗೆ ಈ ಹಿಂದೆಯೂ ಅಮೆರಿಕದ ಕೆಲವೆಡೆ ಇಕ್ತ್ಯೋಸರ್‌ನ ಅಸ್ಥಿಪಂಜರಗಳು ಸಿಕ್ಕಿವೆ. ಆದರೆ ಇಷ್ಟು ಪೂರ್ಣ ಪ್ರಮಾಣದಲ್ಲಿ ಹಾಗೂ ಇಷ್ಟು ದೊಡ್ಡ ಇಕ್ತ್ಯೋಸರ್‌ನ ಅಸ್ಥಿಪಂಜರ ಇದೇ ಮೊದಲು ಸಿಕ್ಕಿದ್ದಾಗಿ ತಿಳಿಸಲಾಗಿದೆ.

**18 ಕೋಟಿ ವರ್ಷ ಹಳೆಯದು:** ಇಕ್ತ್ಯೋಸರ್ ಸುಮಾರು 25 ಕೋಟಿ ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದು 9 ಕೋಟಿ ವರ್ಷಗಳ ಹಿಂದೆಯೇ ನಶಿಸಿಹೋಗಿವೆ. ಇಕ್ತ್ಯೋಸರ್‌ಗಳು ಉದ್ದನೆ ಮೂತಿ ಹೊಂದಿದ್ದರಿಂದಾಗಿ ಅವುಗಳನ್ನು ಸೀ ಡ್ರ್ಯಾಗನ್ ಎಂದೂ ಕರೆಯಲಾಗುತ್ತಿತ್ತು. ಈಗ ಪತ್ತೆಯಾಗಿರುವ ಈ ಅಸ್ಥಿಪಂಜರ ಸುಮಾರು 18 ಕೋಟಿ ವರ್ಷಗಳಷ್ಟು ಹಳೆಯದು ಎಂದು ಪ್ರಾಗ್ಜೀವಶಾಸ್ತ್ರಜ್ಞರು ಅಂದಾಜಿಸಿದ್ದಾರೆ. 10 ಮೀಟರ್‌ಗಳಷ್ಟು ಉದ್ದವಿರುವ ಅಸ್ಥಿಪಂಜರದ ತಲೆ ಭಾಗವೇ ಸುಮಾರು ಒಂದು ಟನ್ ತೂಕವಿದೆ. **(ಉದಯವಾಣಿ 12–1–2022)**

==========================================================================

# LOVE FOR ALL

# HATRED FOR NONE

# LET'S MAKE IT HEAVEN

# ಶಕ್ತಿವರ್ಧಕ ಹಣ್ಣು ಖರ್ಜೂರ

ಈಚಲು ಸಸ್ಯ ಉತ್ಪನ್ನವಾದ ಖರ್ಜೂರ ಆರೋಗ್ಯ ದೃಷ್ಟಿಯಲ್ಲಿ ಪ್ರಮುಖವಾಗಿ ಬಳಕೆಯಾಗುತ್ತದೆ. ಮರುಭೂಮಿಯಲ್ಲಿ ಹೆಚ್ಚಾಗಿ ಸೌದಿ ಅರೇಬಿಯಾ, ಕತಾರ್, ಕುವೈಟ್, ಇರಾಕ್, ಇರಾನ್ ಮರುಭೂಮಿಗಳಲ್ಲಿ ಖರ್ಜೂರವನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ.

ಭಾರತಕ್ಕೆ ಆಮದಾಗುವ ಬಹುಪಾಲು ಖರ್ಜೂರಗಳೂ ಅರಬ್ ದೇಶಗಳಿಂದಲೂ ಬಂದಂತವು. ಪ್ರಮುಖವಾಗಿ ಶಕ್ತಿ ವರ್ಧಕವಾಗಿ ಬಳಕೆಯಾಗುವ ಈ ಹಣ್ಣುಗಳಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಅವೆಂದರೆ ಮೃದು ಖರ್ಜೂರ, ಒಣ ಖರ್ಜೂರ, ಹಸಿ ಖರ್ಜೂರ, ಗುಣಮಟ್ಟದ ಆಧಾರದಲ್ಲಿ ಇನ್ನೂ ಹಲವು ವಿಧಗಳಿವೆ. ಒಂದು ಕೆ.ಜಿ. ಖರ್ಜೂರಕ್ಕೆ 80 ರಿಂದ 2 ಸಾವಿರ ರೂ. ವರೆಗೂ ಬೆಲೆ ಇರುವುದಿದೆ.

ವೈದ್ಯಕೀಯ ಲೋಕದಲ್ಲಿ ಖರ್ಜೂರ ಹಣ್ಣಿಗೆ ಬಹಳ ಮಹತ್ವವಿದೆ. ಆಹಾರದ ಪಚನ ಕ್ರಿಯೆಯಲ್ಲಿ ಸಹಕಾರಿಯಾಗುವ ಹಾಗೂ ಹೆಚ್ಚು ಖನಿಜಾಂಶಗಳಿರುವ ಈ ಹಣ್ಣು ಎಲ್ಲರಿಗೂ ಅಚ್ಚುಮೆಚ್ಚು. ಇದರಲ್ಲಿ ಗ್ಲೂಕೋಸ್ ಅಂಶಗಳು ಹೆಚ್ಚಿರುವುದರಿಂದ ನಿಶ್ಶಕ್ತಿ ಸಮಸ್ಯೆ ಎದುರಿಸುವವರಿಗೆ ಈ ಹಣ್ಣು ಶಕ್ತಿವರ್ಧಕವಾಗಿಯೂ ಕೆಲಸ ಮಾಡಬಲ್ಲದು. ಸುಸ್ತು ಅನ್ನಿಸಿದಾಗ ನಾಲ್ಕಾರು ಖರ್ಜೂರಗಳನ್ನು ಬಾಯಿಗೆ ಹಾಕಿಕೊಂಡರೂ ಸಾಕು ದೇಹ ಉಲ್ಲಸಿತಗೊಳ್ಳುತ್ತದೆ. ನಿಯಮಿತ ಖರ್ಜೂರ ಬಳಕೆ ಹೃದಯಾಘಾತ ಸಮಸ್ಯೆಗಳಿಂದ ದೂರವಿರಿಸಬಲ್ಲದು.

ಪುರಾತನ ಕಾಲದಲ್ಲಿ ಇಜಿಪ್ತಿಯನ್ನರು ಖರ್ಜೂರದಿಂದ ವೈನ್ ತಯಾರಿಸುತ್ತಿದ್ದರಂತೆ. 30 ವೆರೈಟಿ ಖರ್ಜೂರ ಮಾರುಕಟ್ಟೆಯಲ್ಲಿ ಸಿಗುತ್ತದೆ.

ಮಧ್ಯಪ್ರಾಚ್ಯ ರಾಷ್ಟ್ರಗಳ ಪ್ರಮುಖ ಆಹಾರಗಳಲ್ಲಿ ಖರ್ಜೂರವೂ ಒಂದು. ಸೌದಿ ಅರೇಬಿಯಾ ಹಾಗೂ ಈಜಿಪ್ಟ್‌ನಲ್ಲಿ ವಿಶಿಷ್ಟ ಬಗೆಯ ಖರ್ಜೂರಗಳು ಸಿಗುತ್ತವೆ. ಪೋಷಕಾಂಶ, ಖನಿಜಾಂಶ, ಎನರ್ಜಿ, ಸಕ್ಕರೆ ಹಾಗೂ ಫೈಬರ್ ಅಂಶಗಳು ಖರ್ಜೂರದಲ್ಲಿ ಹೇರಳವಾಗಿದೆ. ಕ್ಯಾಲ್ಸಿಯಂ, ಕಬ್ಬಿಣ, ರಂಜಕ, ಪೊಟ್ಯಾಶಿಯಂ, ಮ್ಯಾಗ್ನಿಶಿಯಂ ಮತ್ತು ಸತುವಿನ ಅಂಶವಿರುವುದರಿಂದ ಖರ್ಜೂರ ಆರೋಗ್ಯಕ್ಕೆ ಒಳ್ಳೆಯದು.

**ಎಲುಬನ್ನು ಗಟ್ಟಿಗೊಳಿಸುತ್ತದೆ:** ಸಲೇನಿಯಂ, ಮ್ಯಾಂಗನೀಸ್, ತಾಮ್ರ ಮತ್ತು ಮ್ಯಾಗ್ನೇಶಿಯಂ ಅಂಶಗಳು ಇರುವುದರಿಂದ ಖರ್ಜೂರ ನಿಮ್ಮ ಎಲುಬಿಗೆ ಅತ್ಯಂತ ಅವಶ್ಯ. ನಿಯಮಿತ ಖರ್ಜೂರ ಸೇವನೆ ನಿಮ್ಮ ಎಲುಬಿನ ಆರೋಗ್ಯವನ್ನು ಕಾಪಾಡುತ್ತದೆ.

**ಚರ್ಮದ ಆರೋಗ್ಯಕ್ಕೆ ಬೆಸ್ಟ್:** ಖರ್ಜೂರದಲ್ಲಿ ವಿಟಮಿನ್ ಸಿ ಮತ್ತು ವಿಟಮಿನ್ ಡಿ ಇದೆ. ಖರ್ಜೂರ ತಿಂದರೆ ನಿಮ್ಮ ಚರ್ಮದಲ್ಲಿನ ಪುನಶ್ಚೈತನ್ಯ ಶಕ್ತಿಯನ್ನು ಕಾಪಾಡಿಕೊಳ್ಳಬಹುದು. ಚರ್ಮವನ್ನು ಮೃದುವಾಗಿಡಲು, ಚರ್ಮದ ಸಮಸ್ಯೆಗಳು ಬರದಂತೆ ತಡೆಗಟ್ಟಲು ಕೂಡ ಇದು ಸಹಕಾರಿ.

**ಜೀರ್ಣಶಕ್ತಿ ಹೆಚ್ಚಿಸುತ್ತದೆ:** ರಾತ್ರಿ ಖರ್ಜೂರವನ್ನು ನೀರಿನಲ್ಲಿ ನೆನೆಸಿ ಬೆಳಗ್ಗೆ ತಿನ್ನುವುದರಿಂದ ಲಾಭವಿದೆ. ಇದರಿಂದ ನಿಮ್ಮ ಜೀರ್ಣಕ್ರಿಯೆ ಸುಲಲಿತವಾಗುತ್ತದೆ. ಮಲಬದ್ಧತೆ ಸಮಸ್ಯೆ ನಿವಾರಣೆಯಾಗುತ್ತದೆ.

**ನರಮಂಡಲ ಬಲಪಡಿಸುತ್ತದೆ:** ಖರ್ಜೂರ ನಿಮ್ಮ ನರಗಳನ್ನು ಸುವ್ಯವಸ್ಥೆಯಲ್ಲಿಡಲು ಸಹಾಯ ಮಾಡುತ್ತದೆ. ಖರ್ಜೂರದಲ್ಲಿರುವ ಪೋಷಕಾಂಶಗಳು ಆರೋಗ್ಯ ವೃದ್ಧಿಸುವುದಲ್ಲದೆ ನರಗಳ ಕಾರ್ಯನಿರ್ವಹಣೆಯನ್ನೂ ಸರಿ ಮಾಡುತ್ತವೆ. ಅಷ್ಟೇ ಅಲ್ಲ ಅದರಲ್ಲಿರುವ ಪೊಟ್ಯಾಶಿಯಂ ಮೆದುಳಿನ ಚುರುಕುತನವನ್ನು ಹೆಚ್ಚಿಸುತ್ತದೆ. ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡುತ್ತದೆ.

**ಆರೋಗ್ಯಕರ ಗರ್ಭಧಾರಣೆ:** ಖರ್ಜೂರದಲ್ಲಿ ಕಬ್ಬಿಣದ ಅಂಶ ಹೇರಳವಾಗಿರುವುದರಿಂದ ಅದನ್ನು ಸೇವಿಸಿದರೆ ಗರ್ಭಿಣಿಯರು ಅನಿಮಿಕ್ ಆಗುವುದಿಲ್ಲ. ಗರ್ಭಕೋಶದ ಸ್ನಾಯುಗಳು ಮೃದುವಾದ ರೀತಿಯಲ್ಲಿ ದೊಡ್ಡದಾಗಲು ಸಹಕರಿಸುತ್ತದೆ. ಹೆರಿಗೆಯ ಸಂದರ್ಭದಲ್ಲಿ ಹೆಚ್ಚು ರಕ್ತಸ್ರಾವ ಆಗದಂತೆ ತಡೆಗಟ್ಟುತ್ತದೆ. ಆದ್ರೆ ಖರ್ಜೂರದಲ್ಲಿ ಸಕ್ಕರೆಯ ಅಂಶ ಹೆಚ್ಚಾಗಿರುವುದರಿಂದ ಅದನ್ನು ಅತಿಯಾಗಿ ಸೇವಿಸದೆ ಮಿತವಾಗಿ ಬಳಸುವುದು ಒಳ್ಳೆಯದು.

**✱ ಸದಾ ಸಕಲೇಶಪುರ**

**(ಉದಯವಾಣಿ 8–8–2017)**

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

**1. ಜ| ಯು.ಎಸ್ ಮಾಹಿನ್ ಕುಞ್ಞಿ ಸಾಹಿಬ್, ಮಂಜೇಶ್ವರ. ರೂ. 500/–**

## (ವಾಟ್ಸಾಪ್ ಸಂದೇಶಗಳು)



ಅನಾಥ ಮಕ್ಕಳ ಮುಂದೆ ಸ್ವತಃ
ಮಕ್ಕಳನ್ನು ಲಾಲಿಸಬೇಡಿ ಎಂದು
ಕಲಿಸಿದ ಪ್ರವಾದಿಗಿಂತ ದೊಡ್ಡ
ಅಧ್ಯಾಪಕರಿಲ್ಲ

_.Kirrik_beary — ಒ.ವಿ ವಿಜಯ್



ಪ್ರವಾದಿ ﷺರ ಮಾರ್ಗವನ್ನು
ಹಿಂಬಾಲಿಸುವುದಾದರೆ,
ಇಡೀ ವಿಶ್ವ ಶಾಂತಿಯ
ಉದ್ಯಾನವಾಗಬಹುದು

ಜಯಲಲಿತಾ



ಮುಹಮ್ಮದ್ ನೆಬಿ ﷺ
ಪುರುಷಾತ್ಮಕಗೊಂಡ
ದೇವನೋ...
ನರ ದಿವ್ಯಾಕೃತಿಗೊಂಡ
ಧರ್ಮವೋ...
ಕರುಣಾಮಯಿ ನೆಬಿ ಮುತ್ತು
ರತ್ನವೋ...

_.Kirrik_beary — ಶ್ರೀ ನಾರಾಯಣ ಗುರು

_.Kirrik_beary



ವಿಶ್ವ ಕಂಡ ಅತೀ ದೊಡ್ಡ
ನೀತಿವಂತ ಅಧಿಪತಿ. ಅದು
ಅರೇಬಿಯಾದ ನಾಯಕ
ಮುಹಮ್ಮದ್ ನೆಬಿ ﷺ

ಸ್ವಾಮಿ ವಿವೇಕಾನದ

_.Kirrik_beary



ಮುಹಮ್ಮದ್ ನೆಬಿ ﷺರ
ನುಡಿಗಳು, ಅದು ವಿಜ್ಞಾನದ
ನಿಧಿಗಳಾಗಿವೆ. ಅದು
ಮುಸ್ಲಿಮರಿಗೆ ಮಾತ್ರವಲ್ಲ
ಎಲ್ಲಾ ಜನರಿಗೂ


ಮಹಾತ್ಮ ಗಾಂಧಿ



ಮುಹಮ್ಮದ್ ನೆಬಿﷺ ನಿಜವಾದ
ಸೋಷಿಯಲೀನಮ್ಮಿನ
ಪಿತಾಮಹ ಎಂದು ನನ್ನ ನಂಬಿಕೆ

_.Kirrik_beary — ಫಿಡಲ್ ಕ್ಯಾಸ್ಟ್ರೋ


(ವಾಟ್ಸಾಪ್ ಸಂದೇಶಗಳು)







- ಇಸ್ಲಾಂ ಧರ್ಮದಲ್ಲಿ ವಿಗ್ರಹಾರಾಧನೆಗೆ ಅವಕಾಶ ಇಲ್ಲ, ಬ್ರಾಹ್ಮಣ, ಶೂದ್ರ, ಪಂಚಮ ಎನ್ನುವ ತಾರತಮ್ಯವಿಲ್ಲ.
- ಒಂದೇ ದೇವರು, ಒಂದೇ ಧರ್ಮದ ನೆಲಗಟ್ಟಿನ ಇಸ್ಲಾಂ ಸರ್ವ ಸಮಾನತೆಯನ್ನು ಸಾರುತ್ತದೆ. ಈ ಕಾರಣದಿಂದಲೇ ದಲಿತರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದರು.



- ಇಸ್ಲಾಂ ಶೋಷಣೆಗೆ ಗುರಿಯಾದ ದಲಿತರಿಗೆ ಸಾಮಾಜಿಕ ಸ್ಥಾನ ಮಾನ ನೀಡಿ ಗೌರವಿಸಿತ್ತು" ಎಂದು ಪೆರಿಯಾರ್ ಅಭಿಪ್ರಾಯಿಸುತ್ತಿದ್ದರು.

✍....ಪೆರಿಯಾರ್



**ಉಡುಪಿಯ ನ್ಯಾಯವಾದಿ ರಾಕೇಶ್ ಬರೆಯುತ್ತಾರೆ:** **(ವಾಟ್ಸಾಪ್ ಸಂದೇಶಗಳು)**

# ಪ್ರೀತಿಯ ನನ್ನ ಮಂಗಳೂರಿನ ಗೆಳೆಯರೇ,

ಸಾಕು... ಬುದ್ಧಿವಂತರ ಜಿಲ್ಲೆ ಅನಿಸಿಕೊಂಡ ನಮಗೆ ಇದು ಶೋಭೆಯಲ್ಲ.. ರಾಜಕಾರಣಿಗಳ ಮಾತು ಕೇಳಿ ಕಚ್ಚಾಡುವುದನ್ನು ನಿಲ್ಲಿಸಿ.. ಯಾವೊಬ್ಬ ರಾಜಕಾರಣಿನೂ ಬರಲ್ಲ ನಾಳೆ ನಮ್ಮ ನಿಮ್ಮ ಮನಯಲ್ಲೇನಾದರೂ ಸಂಭವಿಸಿದರೆ.. ಆಗ ಇನ್ನೊಂದು ಧರ್ಮದ ನಮ್ಮ ನೆರೆಹೊರೆಯವರೇ ನಮಗೆ ಗತಿ... ನಾಳೆ ಸರ್ಕಾರ 5, 10 ಲಕ್ಷ ಪರಿಹಾರ ಕೊಟ್ಟು ಕೈ ತೊಳೆಯುತ್ತೆ.. ಆದರೆ ಒಂದು ಜೀವದ ಬೆಲೆ ಏನು ಅಂತ ಯಾರಿಗೂ ಗೊತ್ತಿಲ್ವಾ ?

ಅಮಾಯಕರನ್ನು ಕೊಲ್ಲಲು ಯಾವ ರಾಮ ಕೃಷ್ಣ ಪೈಗಂಬರ ಏಸು ಬುದ್ಧ ಗುರುನಾನಕ ನಾರಾಯಣಗುರು ಹೇಳಿದ್ದಾರೆ?

ಅಮಾಯಕನ ತಾಯಿಯ ಹೃದಯ ಚೂರುಚೂರಾಗುತ್ತದೆ. ತಾಯಿಯ ಕಣ್ಣೀರಿಗೆ ಹಿಂದೂ ಮುಸ್ಲಿಂ ಕ್ರೈಸ್ತ ಎಂಬ ಭೇದವಿಲ್ಲ. ತಾಯಿಯ ಶಾಪಕ್ಕೆ ಗುರಿಯಾಗದಿರಿ. ಇಹಲೋಕದಲ್ಲೇ ಸರ್ವನಾಶವಾಗುವಿರಿ...

ಮಸೀದಿಯ ಮಿನಾರದಲ್ಲಿ ಗೂಡು ಕಟ್ಟಿದ ಪಾರಿವಾಳ ಮಂದಿರದಲ್ಲಿ ಧಾನ್ಯ ಕಾಳು ಹೆಕ್ಕಿ ತಿನ್ನುತ್ತಿತ್ತು.

ಮುಸ್ಲಿಮರು ತಿಂದು ಬಿಸಾಡಿದ ಮಾಂಸದ ಎಲುಬನ್ನು ತಿಂದ ಬೆಕ್ಕು ದೇವಸ್ಥಾನ ಪುರೋಹಿತರು ಕೊಟ್ಟ ಹಾಲನ್ನು ಕುಡಿಯುತ್ತಿತ್ತು.

ಮಂದಿರದ ಮಹಡಿಯಲಿ ಗೂಡುಕಟ್ಟಿದ ಗುಬ್ಬಚ್ಚಿ ಮಸೀದಿಯ ಬಾವಿಯ ನೀರು ಕುಡಿಯುತ್ತಿತ್ತು.

ಆದರೆ ಇವುಗಳಿಗೆ ಪರಸ್ಪರ ಸಂಬಂಧ ಇಲ್ಲವೆಂಬಂತೆ ಮಸೀದಿ–ಮಂದಿರಗಳ ಹೆಸರಲ್ಲಿ ಕಚ್ಚಾಡುತ್ತಿದ್ದಾನೆ ಮನುಜ.

ಪ್ರಾಣಿ–ಪಕ್ಷಿ ಗಳಿಗಿಲ್ಲದ ಕೋಮು ಬಣ್ಣವ ಕೊಟ್ಟವರಾರು ಈ ಮನುಷ್ಯ ಕುಲಕ್ಕೆ...?

ಇವತ್ತು ಕರ್ನಾಟಕದಾದ್ಯಂತ ಅದರಲ್ಲೂ ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ಕೋಮು ಸಂಘರ್ಷ ನೋಡಿದರೆ ಮನಸ್ಸಿಗೆ ತುಂಬಾ ನೋವುಂಟಗುತ್ತದೆ. ಕ್ರಿಶ್ಚಿಯನರು ಬೆಳೆದ ಹೂಗಳನ್ನು, ಮುಸ್ಲಿಮರು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾ, ಹಿಂದೂಗಳು ತಗೊಂಡು ದೇವರ ಪೂಜೆಗೆ ಇಡುವಂಥ ಹೊಂದಣಿಕೆಯ ಕೇಂದ್ರ ಬಿಂದುವಾಗಿತ್ತು ನಮ್ಮ ಮಂಗಳೂರು. ಆದರೆ ಇವತ್ತು ಯಾವುದೋ ನಾಲ್ಕು ಜನರ ವಿಕೃತ ಮನಸ್ಸುಗಳಿಂದಾಗಿ ಮಂಗಳೂರು ಗೊಂದಲದ ಗೂಡಾಗಿದೆ. ಫೇಸ್‌ಬುಕ್, ವಾಟ್ಸಪ್‌ಗಳಲ್ಲಿ ಗ್ರೂಪುಗಳನ್ನು ರಚಿಸಿ ಕೋಮು ದ್ವೇಷದ ವಿಷ ಬೀಜ ಬಿತ್ತುವ ನಿಮ್ಮಲ್ಲಿ ನಾನು ಕೇಳ ಬಯಸುವುದು ಇಷ್ಟೇ, O-, AB- ರಕ್ತ ಬೇಕು ಅಂತ ಬಂದ ಮೆಸೇಜ್ಗಳಲ್ಲಿ ಯಾವತ್ತಾದರೂ ಮುಸ್ಲಿಂ ರಕ್ತವೇ ಬೇಕು ಇಲ್ಲಾ ಹಿಂದೂ ರಕ್ತವೇ ಬೇಕು ಅಂತ ಎಲ್ಲಿ ಆದರೂ ಮೆನ್‌ಷನ್ ಮಾಡಿದ್ದು ಉಂಟಾ? ಜಹೀರ್ ಖಾನ್ ಜಾಸ್ತಿ ವಿಕೆಟ್ ತೆಗೆದು ಇಂಡಿಯಾ ಮ್ಯಾಚ್ ಗೆದ್ದಾಗ ದುಃಖಪಡುವ ಹಿಂದೂಗಳಿದ್ದಾರ? ದ್ರಾವಿಡ ಸೆಂಚುರಿ ಹೊಡೆದು ಭಾರತ ಮ್ಯಾಚ್ ಸೋತಾಗ ಖುಷಿಪಟ್ಟ ಮುಸ್ಲಿಂ ಇದ್ದಾರಾ? ಹಿಂದೂ, ಮುಸ್ಲಿಂ ಅಂತ ಪ್ರತ್ಯೇಕ ಮಾಡಿ ಅಮೀರ್ ಖಾನ್, ಅಜೇಯ್ ದೇವಗನ್ ಫಿಲ್ಮ್ ನೋಡುತ್ತಾ ಇದ್ದೀರಾ? ಹೀಗಿರುವಾಗ ಎಲ್ಲೋ ನಡೆದ ಯಾವುದೋ ಘಟನೆಯನ್ನು ನಿಮಗೆ ಬೇಕಾದ ಹಾಗೇ ಫೋಟೋಶಾಪಲ್ಲಿ edit ಮಾಡಿ ಪ್ರಚೋದನಕಾರಿ ಕಮೆಂಟುಗಳನ್ನು ಹಾಕಿ ಪೋಸ್ಟ್ ಮಾಡುವುದು ಎಷ್ಟು ಸರಿ. ಇದರಿಂದ ನೀವು ಸಾಧಿಸಿದ್ದಾದರೂ ಏನು? ನಿಮ್ಮಿಂದಾಗಿಯೇ, ಇವತ್ತು ಬಂದರು, ವಿಮಾನ ನಿಲ್ದಾಣ, ಹೈಟೆಕ್ ಆಸ್ಪತ್ರೆಗಳು, ಇಂಜಿನಿಯರಿಂಗ್ ಕಾಲೇಜುಗಳು ಎಲ್ಲಾ ಇದ್ದು ಏನೂ ಇಲ್ಲದ ಸ್ಥಿತಿ ಮಂಗಳೂರಿಗೆ ಬಂದಿದೆ. ದಿನನಿತ್ಯ ನಡೆಯುವ ಗಲಾಟೆಗಳು ನ್ಯಾಶನಲ್ ನ್ಯೂಸ್ ಚಾನೆಲ್‌ಗಳಲ್ಲಿ ಹರಿದಾಡುವುದರಿಂದ ಇವತ್ತು ಮಂಗಳೂರಿಗೆ ಯಾವ ಕಂಪೆನಿಯೂ ಬರುತ್ತಿಲ್ಲ. ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಮಂಗಳೂರು ನಿರುದ್ಯೋಗದ ಬೀಡಾಗುವುದರಲ್ಲಿ ಸಂದೇಹವಿಲ್ಲ. Smart ಸಿಟಿ ಯೋಜನೆ ಕೂಡ ನಮ್ಮ ಕೈಜಾರಿ ಹೋಗುವ ಹಂತ ತಲುಪಿದೆ. ಇನ್ನು ನಾವು ಜಾಗೃತರಾಗದೆ ಇದ್ದರೆ ನಮ್ಮ ಕಾಲಿಗೆ ನಾವೇ ಕೊಡಲಿ ಏಟು ಹಾಕಿಕೊಂಡ ಅತಿ ಬುದ್ಧಿವಂತರಾಗಿ ಬಿಡುತ್ತೇವೆ. ನಾಳೆ ಮಂಗಳೂರಿಗೆ ಸುನಾಮಿ ಬಂದರೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಅಂತ ಪರಿಭೇದ ಮಾಡಿ ತಗೊಂಡು ಹೋಗುತ್ತಾ? ಪ್ರಕೃತಿಗಿಲ್ಲದ ಧರ್ಮ ನಮಗೆ ಬೇಕಾ? ಒಮ್ಮೆ ಯೋಚಿಸಿ. ಮೊದಲು ಮನುಷ್ಯರಾಗಿ.

**– ರಾಕೇಶ್**

**ನ್ಯಾಯವಾದಿ ಉಡುಪಿ**

(ವಾಟ್ಸಾಪ್ ಸಂದೇಶಗಳು)

## ಅಮೆರಿಕ ನ್ಯಾಯಾಲಯದ ವಿಶಿಷ್ಟ ತೀರ್ಪು...!

ಅಪರಾಧಿ ಹದಿನೈದು ವರ್ಷದ ಹುಡುಗ. ಅಂಗಡಿಯಿಂದ ಸರಕುಗಳನ್ನು ಕದಿಯುತ್ತಿದ್ದನು. ಕಾವಲುಗಾರನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವಾಗ ಅಂಗಡಿಯಲ್ಲಿನ ಒಂದು ಕಪಾಟು ಸಹ ಮುರಿದುಹೋಯಿತು.

ನ್ಯಾಯಾಧೀಶರು ಅಪರಾಧದ ವಿವರಣೆ ಕೇಳಿದ ನಂತರ ಮಗುವನ್ನು ಕೇಳಿದರು. ನೀವು ನಿಜವಾಗಿಯೂ ಕದ್ದಿದ್ದೀರಾ? ಬ್ರೆಡ್ ಮತ್ತು ಚೀಸ್ ಪ್ಯಾಕೆಟ್, ಹುಡುಗ ಕೆಳಗೆ ನೋಡುತ್ತಾ ಉತ್ತರಿಸಿದ.

ನ್ಯಾಯಾಧೀಶರು: ಏಕೆ? ಹುಡುಗ: ನನಗೆ ಅವುಗಳು ಬೇಕಾಗಿದ್ದವು. ನ್ಯಾಯಾಧೀಶರು: ನೀವು ಅದಕ್ಕೆ ಹಣ ಪಾವತಿಸಲಾಗಲಿಲ್ಲವೇ? ಹುಡುಗ: ಕೈಯಲ್ಲಿ ನಗದು ಇಲ್ಲ. ನ್ಯಾಯಾಧೀಶರು: ನೀವು ಮನೆಯಲ್ಲಿ ಯಾರನ್ನಾದರೂ ಕೇಳಲು ಸಾಧ್ಯವಿಲ್ಲವೇ? ಹುಡುಗ: ಮನೆಯಲ್ಲಿ ತಾಯಿ ಒಬ್ಬಳೇ. ಮತ್ತು ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಆದ್ದರಿಂದ ಉದ್ಯೋಗವಿಲ್ಲ. ಅದು ಅವರಿಗಾಗಿ ಕಳ್ಳತನವಾಗಿತ್ತು. ನ್ಯಾಯಾಧೀಶರು: ನೀವು ಯಾವುದೇ ಕೆಲಸ ಮಾಡುತ್ತಿಲ್ಲವೇ? ಹುಡುಗ: ನನಗೆ ಕಾರು ವಾಶ್ ಮಾಡುವ ಕೆಲಸವಿತ್ತು. ನನ್ನ ತಾಯಿಯನ್ನು ನೋಡಿಕೊಳ್ಳಲು ನಾನು ಒಂದು ದಿನ ರಜೆ ತೆಗೆದುಕೊಂಡೆ. ತರುವಾಯ ಅವರು ನನ್ನನ್ನು ವಜಾ ಮಾಡಿದರು. ನ್ಯಾಯಾಧೀಶರು: ನೀವು ಯಾರನ್ನಾದರೂ ಸಹಾಯಕ್ಕಾಗಿ ಕೇಳಬಹುದೇ? ಹುಡುಗ: ನಾನು ಬೆಳಗ್ಗೆ ಮನೆಯಿಂದ ಹೊರಟೆ. ಐವತ್ತು ಜನರ ಬಳಿಗೆ ಸಹಾಯಕ್ಕಾಗಿ ಹೋದೆ. ಎಲ್ಲಾ ಭರವಸೆಗಳು ಕಳೆದುಹೋದಾಗ ನಾನು ಅಂತಿಮವಾಗಿ ಈ ಕೆಲಸ ಮಾಡಬೇಕಾಯಿತು.

ಅದು ವಾದವನ್ನು ಕೊನೆಗೊಳಿಸಿತು. ನ್ಯಾಯಾಧೀಶರು ತೀರ್ಪನ್ನು ಉಚ್ಚರಿಸಲು ಪ್ರಾರಂಭಿಸಿದರು. ಇಲ್ಲಿ ನಡೆದದ್ದು ಬಹಳ ಭಾವನಾತ್ಮಕ ಕಳ್ಳತನ, ಬ್ರೆಡ್ ಕಳ್ಳತನ ಅಪರಾಧ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಅಪರಾಧಕ್ಕೆ ನಾವೆಲ್ಲರೂ ಕಾರಣ. ನಾನು ಸೇರಿದಂತೆ ನ್ಯಾಯಾಲಯದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತಪ್ಪಿತಸ್ಥ. ಹಾಗಾಗಿ ನಾನು ಸೇರಿದಂತೆ ಇಲ್ಲಿಗೆ ಹಾಜರಾಗುವ ಪ್ರತಿಯೊಬ್ಬ ವ್ಯಕ್ತಿಗೂ ಹತ್ತು ಡಾಲರ್ ದಂಡ ವಿಧಿಸಲಾಗುತ್ತದೆ. ಅದನ್ನು ನೀಡದೆ ಯಾರೂ ಇಲ್ಲಿಂದ ಹೊರಬರಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ನ್ಯಾಯಾಧೀಶರು ಜೇಬಿನಿಂದ ಹತ್ತು ಡಾಲರ್ ತೆಗೆದುಕೊಂಡು ಅದನ್ನು ಮೇಜಿನ ಮೇಲೆ ಇಟ್ಟರು. ನಂತರ ಅವರು ಪೆನ್ನು ತೆಗೆದುಕೊಂಡು ಇದಲ್ಲದೆ, ಹಸಿವಿನಿಂದ ಬಳಲುತ್ತಿರುವ ಮಗುವಿನ ಮೇಲೆ ಅಮಾನವೀಯವಾಗಿ ವರ್ತಿಸಿ ಪೊಲೀಸರಿಗೆ ಒಪ್ಪಿಸಿದ್ದಕ್ಕಾಗಿ ಅಂಗಡಿಯವನಿಗೆ ಸಾವಿರ ಡಾಲರ್ ದಂಡ ವಿಧಿಸಲಾಯಿತು. 24 ಗಂಟೆಯೊಳಗೆ ದಂಡ ಪಾವತಿಸದಿದ್ದರೆ, ಅಂಗಡಿಯನ್ನು ಮೊಹರು ಮಾಡಲು ನ್ಯಾಯಾಲಯ ಆದೇಶಿಸುತ್ತದೆ.

ನಂತರ ನ್ಯಾಯಾಲಯ ಅಲ್ಲಿಂದ ಸಂಗ್ರಹಿಸಿದ ದಂಡದ ಸಂಪೂರ್ಣ ಮೊತ್ತವನ್ನು ಮಗುವಿಗೆ ನೀಡಿತು. ನ್ಯಾಯಾಲಯಕ್ಕೆ ಹಾಜರಾದ ಅನೇಕರು ತೀರ್ಪು ಕೇಳಿದ ನಂತರ ಕಣ್ಣೀರು ಹಾಕಿದರು. ತೀರ್ಪು ಕೇಳಿ ಬಾಲಕ ಆಘಾತಕ್ಕೊಳಗಾಗಿದ್ದ. ಆಶ್ಚರ್ಯದಿಂದ ನ್ಯಾಯಾಧೀಶರನ್ನು ಮತ್ತೆ ಮತ್ತೆ ನೋಡುತ್ತಿದ್ದ ಹುಡುಗ, ಅವರು ಅಡಗಿಸಿಕೊಳ್ಳುತ್ತಿದ್ದ ಕಣ್ಣೀರು ಅವರ ಮುಖದ ಮೇಲೆ ಹರಿಯುವುದನ್ನು ನೋಡಿದನು. ಅಂತಹ ನ್ಯಾಯಾಧೀಶರು ಪ್ರಾಮಾಣಿಕ ಮತ್ತು ಮಾನವೀಯತೆ ಹೊಂದಿದ್ದಾರೆ.

**ಜಿ.ಎ. ಜಗದೀಶ್**

**ಪೊಲೀಸ್ ಅಧೀಕ್ಷಕರು,(ನಿ), ಬೆಂಗಳೂರು.**

================================================================

## ಕೆಲವು ಪ್ರಶ್ನೆಗಳು

* ಜಿ. ಎಸ್. ಶಿವರುದ್ರಪ್ಪ

ಈ ಪವಿತ್ರ ಭಾರತದಲ್ಲಿ ಹಿಂದೂಗಳಿದ್ದಾರೆ, ಮುಸ್ಲಿಮರಿದ್ದಾರೆ, ಕ್ರೈಸ್ತರಿದ್ದಾರೆ, ಸಿಖ್ಖರಿದ್ದಾರೆ, ಜೈನರಿದ್ದಾರೆ, ಬೌದ್ಧರಿದ್ದಾರೆ, ಬ್ರಾಹ್ಮಣರಿದ್ದಾರೆ, ಲಿಂಗಾಯತರಿದ್ದಾರೆ, ಒಕ್ಕಲಿಗರಿದ್ದಾರೆ, ಅಸ್ಪೃಶ್ಯರಿದ್ದಾರೆ. ಆದರೆ ನಾನು ಹುಡುಕುತ್ತಿರುವುದು ಮನುಷ್ಯರನ್ನು! ದಯಮಾಡಿ ಹೇಳಿ ಅವರೆಲ್ಲಿದ್ದಾರೆ?

ಈ ದೇಶದ ಉದ್ದಗಲಕ್ಕೂ ಅಸಂಖ್ಯಾತ ಗುಡಿಗಳಿದ್ದಾವೆ, ಮಸೀದಿಗಳಿದ್ದಾವೆ, ಮಂದಿರಗಳಿದ್ದಾವೆ, ಚರ್ಚುಗಳಿದ್ದಾವೆ, ಮಠಗಳಿದ್ದಾವೆ. ಆದರೆ ನಾನು ಹುಡುಕುತ್ತಿರುವುದು ಅವುಗಳೊಳಗೆ ಇರಬೇಕಾದ ದೇವರನ್ನು ದಯಮಾಡಿ ಹೇಳಿ ಅವನೆಲ್ಲಿದ್ದಾನೆ?

ಈ ದೇಶದ ಹಿಂದೂಗಳಿಗೆ ಭಗವದ್ಗೀತೆಯಿದೆ, ಶಾಸ್ತ್ರ ಪುರಾಣ ಆಗಮಗಳಿವೆ. ಮುಸ್ಲಮಾನರಿಗೆ ಖುರ್‌ಆನ್ ಇದೆ. ಕ್ರೈಸ್ತರಿಗೆ ಬೈಬಲ್ ಇದೆ. ಸಿಖ್ಖರಿಗೆ ಗ್ರಂಥ ಸಾಹೇಬ್ ಇದೆ. ಲಿಂಗಾಯಿತರಿಗೆ ವಚನಗಳಿವೆ. ಆದರೆ ನಾನು ಹುಡುಕುತ್ತಿರುವುದು ಪ್ರೀತಿಗಾಗಿ! ದಯಮಾಡಿ ಹೇಳಿ; ಅದೆಲ್ಲಿದೆ?

# ನಝಾಮತ್ ಮಾಲ್ ವಖ್ಫೇ ಜದೀದ್ ಭಾರತ

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವಬರಕಾತುಹೂ

ನೀವು ಮತ್ತು ಜಮಾಅತಿನ ಎಲ್ಲ ಸದಸ್ಯರು ಕ್ಷೇಮವಾಗಿದ್ದೀರಿ ಎಂದು ಭಾವಿಸುತ್ತೇನೆ ಮತ್ತು ಅದಕ್ಕಾಗಿ ಪ್ರಾರ್ಥಿಸುತ್ತೇನೆ. ಆಮೀನ್. ನಿಮಗೆಲ್ಲರಿಗೂ ಚೆನ್ನಾಗಿ ತಿಳಿದಿರುವಂತೆ ವಖ್ಫೇ ಜದೀದಿನ 64ನೇ ವರ್ಷ ನಿಷ್ಠಾವಂತರಾದ ನಿಮ್ಮ ತ್ಯಾಗಗಳು ಮತ್ತು ಸಹಾಯದಿಂದ ಬಹಳ ಉತ್ತಮವಾಗಿ ಮುಕ್ತಾಯಗೊಂಡಿದೆ. ಅಲ್‌ಹಮ್ದುಲಿಲ್ಲಾಹ್ ಅಲಾ ಧಾಲಿಕ್. ಹಝ್ರತ್ ಖಲೀಫತುಲ್ ಮಸೀಹರು 7/01/2022ರ ಖುತ್‌ಬ ಜುಮುಅದಲ್ಲಿ ವಖ್ಫೇ ಜದೀದಿನ ಹೊಸ ವರ್ಷದ ಘೋಷಣೆಯನ್ನು ಮಾಡಿದರು. ಹಝ್ರತ್ ಖಲೀಫತುಲ್ ಮಸೀಹರು ಹೇಳುತ್ತಾರೆ:

"ಸತ್ಯವಿಶ್ವಾಸಿಗಳು ಅಲ್ಲಾಹನ ಆದೇಶ ಪ್ರಕಾರ ಅಲ್ಲಾಹನ ಮಾರ್ಗದಲ್ಲಿ ಅಲ್ಲಾಹನ ಸಂಪ್ರೀತಿ ಮತ್ತು ಸಂತುಷ್ಟಿಯನ್ನು ಗಳಿಸುವವರಾಗಲಿಕ್ಕಾಗಿ ಮಾತ್ರವಲ್ಲ, ತನ್ನ ಸಮುದಾಯ ಮತ್ತು ತನ್ನ ಮಿಶನನ್ನು ಸುದೃಢಗೊಳಿಸಲಿಕ್ಕಾಗಿಯೂ ಖರ್ಚು ಮಾಡುತ್ತಾರೆ. ಈ ಕಾಲದಲ್ಲಿ ಇಸ್ಲಾಮಿನ ಅಧ್ಯಾಪನೆ ಮತ್ತು ಸಂದೇಶವನ್ನು ಹರಡುವ ಕೆಲಸ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಒಪ್ಪಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಮಿಶನನ್ನು ಈಡೇರಿಸಲಿಕ್ಕಾಗಿ ಜೀವ, ಸಂಪತ್ತು ಮತ್ತು ಸಮಯವನ್ನು ತ್ಯಾಗ ಮಾಡುವುದು ಅವರನ್ನು ನಂಬುವವರ ಕೂಡ ಕರ್ತವ್ಯವಾಗಿದೆ. ಎಲ್ಲ ಪ್ರವಾದಿಗಳು ತಮ್ಮನ್ನು ನಂಬುವವರೊಡನೆ ಧನತ್ಯಾಗ ಮಾಡಲು ಉಪದೇಶಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಸಹ ಹೀಗೆ ಹೇಳಿರುವರು: ನಮ್ಮ ದೇವ ಹೇಗಾದರೂ ಸಂಪ್ರೀತನಾಗಲು, ನಮ್ಮ ಆತ್ಮಕ್ಕೆ ಸ್ಥಿರತೆ ಉಂಟಾಗಲು ಮತ್ತು ನಾವು ನಮ್ಮ ಸತ್ಯವಿಶ್ವಾಸದಲ್ಲಿ ಸುದೃಢವಾಗಲು ಸತ್ಯವಿಶ್ವಾಸಿಗಳು ಖಂಡಿತವಾಗಿಯೂ ಧರ್ಮಕ್ಕಾಗಿ ಧನತ್ಯಾಗ ಮಾಡುತ್ತಾರೆ."

"ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಅವರನ್ನು ನಂಬಿದವರಲ್ಲಿ ಹೆಚ್ಚಿನವರು ಬಡವರಾಗಿದ್ದರು. ಅವರು ತ್ಯಾಗಗಳಲ್ಲಿ ಎಷ್ಟು ಮುಂದಿದ್ದರು ಎಂದರೆ, ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಮೈಯಲ್ಲಿ ಸರಿಯಾಗಿ ಬಟ್ಟೆ ಕೂಡ ಇರದ ನೂರಾರು ಜನರು ನಮ್ಮ ಜಮಾಅತಿನಲ್ಲಿದ್ದಾರೆ. ಅವರಿಗೆ ಸರಿಯಾದ ಹೊದಿಕೆ ಅಥವಾ ಪೈಜಾಮ ಕೂಡ ಇರುವುದಿಲ್ಲ. ಅವರಿಗೆ ಯಾವುದೇ ಸೊತ್ತಿರುವುದಿಲ್ಲ. ಆದರೆ ಅವರ ನಿಷ್ಠೆ, ನಂಬಿಕೆ, ಸ್ನೇಹ, ಪ್ರಾಮಾಣಿಕತೆ ಮತ್ತು ವಿಶ್ವಾಸದ ಆವೇಶವನ್ನು ನೋಡಿಕೊಂಡು ಸ್ವತಃ ನಮಗೂ ಆಶ್ಚರ್ಯ ಮತ್ತು ಸೋಜಿಗವಾಗುತ್ತದೆ. ಎಲ್ಲಿಯ ವರೆಗೆ ಎಂದರೆ ಶತ್ರುಗಳು ಸಹ ದಂಗಾಗಿರುವರು."


ವಖ್ಫೇ ಜದೀದ್ ಚಂದಾದ ಅಧಿಕಾಂಶ ಖರ್ಚುಗಳು ಆಫ್ರಿಕದಲ್ಲಾಗುತ್ತವೆ ಎಂದೂ ಖಲೀಫತುಲ್ ಮಸೀಹರು ಹೇಳಿದರು. ಹಝ್ರತ್ ಖಲೀಫತುಲ್ ಮಸೀಹರು ನಿಶ್ಚಯಿಸಿದ ಟಾರ್ಗೆಟನ್ನು ಈಡೇರಿಸಲು ನಮಗೆ ಸೌಭಾಗ್ಯ ಸಿಗುವಂತಾಗಲಿಕ್ಕಾಗಿ ಪ್ರಸ್ತುತ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ನಿಷ್ಠಾವಂತರಾದ ನೀವೆಲ್ಲರೂ ಹುದ್ದೇದಾರರೂ ಹಿಂದಿನಂತೆ ಪ್ರಾಮಾಣಿಕವಾದ ನೆರವು ನೀಡುತ್ತಾ ವಖ್ಫೇ ಜದೀದಿನ ಹೊಸ ವರ್ಷದ ವಾಗ್ದಾನಗಳನ್ನು ಹೆಚ್ಚಿನ ವರ್ಧನೆಯೊಂದಿಗೆ ಬರೆಸಿ ಕೇಂದ್ರಕ್ಕೆ ಕಳುಹಿಸುವ ಏರ್ಪಾಡು ಮಾಡಿಸಿರಿ. ಜಝಾಕುಮುಲ್ಲಾಹ್.


ಅಲ್ಲಾಹನು ನಮಗೆ ಖಲೀಫತುಲ್ ಮಸೀಹ್‌ರ ಪ್ರತೀಕ್ಷೆಗಳನ್ನು ಈಡೇರಿಸಲು ಸೌಭಾಗ್ಯ ನೀಡಲಿ – ಆಮೀನ್.


ವಸ್ಸಲಾಮ್


ವಿನೀತ


ನಾಝಿಂ ಮಾಲ್ ವಖ್ಫೇ ಜದೀದ್ ಭಾರತ






















**NEW PUBLICATIONS**


**Contact:**

**NAZARAT NASHRO-ISHA'AT**

**Sadr Anjuman Ahmadiyya**

**Qadian-143516 (Punjab)**

**Phone: 01872- 500970**



## ಬೆಂಗಳೂರು : ಮಜ್ಲಿಸ್ ಅನ್ಸಾರುಲ್ಲಾಹ್ ದ್ವಿತೀಯ ಜಿಲ್ಲಾ ಸಮ್ಮೇಳನದ ವಿವಿಧ ದೃಶ್ಯಗಳು












Registered with the Registrar of Newspapers for India No. R.N. 27354/75
**Yugarashmi** Kannada Quarterly, **January - 2022.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android



**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages




**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at alislam.org/apps or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore